ENGLISH CLASSICS FOR KANARESE READERS.

ಕನ್ಯಾವಿತಂತು.

ಅಡ್ವೊಕೇಟ್

ಎಂ. ಎಲ್. ಶ್ರೀಕಂಠೇಶ ಗೌಡ, ಬಿ. ಎ., ಬಿ. ಎಲ್.

ರವರಿಂದ ವಿರಚಿತವಾದುದು.

ಮೈಸೂರು:

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

1895.

ಕ್ರಯ ೮ ಆಣೆ.

WITH KIND PERMISSION

THIS LITTLE WORK

IS DEDICATED TO

JOHN COOK Esq. M. A.,

PRINCIPAL, CENTRAL COLLEGE, BANGALORE,

AND

DIRECTOR OF METEOROLOGY IN MYSORE,

WITH FEELINGS OF GREAT RESPECT

BY HIS OLD PUPIL

THE AUTHOR.

ಕನ್ಯಾವಿತಂತು.

ಪ್ರಥಮಾಶ್ವಾಸ.

ಸಕಲ ಸಂಪದಗಳಿಗೆ ನೆಲೆಯಾಗಿ, ಗಂಗಾ, ಯಮುನಾ, ಸರಯು, ಸರಸ್ವತಿ, ಸರಿತ್ಕುಳಿಂದಾವರಿಸಿ ಶತ್ರುಗಳಿಗಜೇಯವಾದ, ಜಲದುರ್ಗ, ಗಿರಿದುರ್ಗ, ವನದುರ್ಗ ಸಹಸ್ರಗಳಿಂ ಶೋಭಿತವಾದ, ಮಗಧದೇಶವಂ ಶಲ್ಯಮಹಾರಾಯನ ವಂಶೋತ್ಪನ್ನನಾದ ವೀರಬಾಹುವೆಂಬ ಕ್ಷತ್ರಿಯಾಣ್ಮನು, ಜಲದುರ್ಗವಾದ ಚಂದ್ರನಗರವೆಂಬ ರಾಜಧಾನಿಯೊಳ್, ಕಾಮರೂಪದೇಶಾಧೀಶ್ವರನಾದ ರವಿವರ್ಮ ಉತ್ಕಲೇಶನಾದ ರಾಮವರ್ಮ, ವಲ್ಲಭಾಧಿಪ ಸುರೇಂದ್ರ ಮುಂತಾದ ಸಾಮಂತ ರಾಜರಿಂದೊಡಗೂಡಿ, ರಾಜ್ಯವಂಪರಿಪಾಲಿಸುವಕಾಲದೊಳೊಂದುದಿನಂ, ಚಂದ್ರನಗರದ ಬಹಿರ್ಭಾಗದಲ್ಲಿ ಕಡಲತಡಿಯೊಳ್, ಹಯಗ್ರೀವನೆಂಬ ಉಡುಪಪತಿ ತನ್ನ ಸಹಕಾರಿಗಳಾದ ನಾವಿಕರಿರ್ವರಂಕುರಿತು :—

ಓಯಿ, ಮಿತ್ರರುಗಳಿರ! ನಮ್ಮ ಕಾಮರೂಪರಾಯನು ಸಾಂಯಾತ್ರಿಕನಾಗಿ ವ್ಯಾಪಾರವಂ ಮಾಡಲುದ್ಯೋಗಿಸಿರುವನು ; ಈಗ ನಾವು ಜಾಗರೂಕರಾಗಿರಬೇಕು. ಸಮುದ್ರಯಾನವಮಾಡಲು ಕಾಮರೂಪನಿಂ, ಇದುವರೆಗೆ ನಮಗೆ ಉತ್ತರವೇ ಬಂದಿರುವದಿಲ್ಲ. ಈಗ ಆಲಸ್ಯದಿಂದುಂಟಾದ ನಷ್ಟದಿಂದ ನಮ್ಮ ಹಡಗು ತುಂಬುವಷ್ಟು ಪದಾರ್ಥಗಳನ್ನು ಹೊಸದಾಗಿ ಕೊಂಡುಕೊಳ್ಳಬಹುದಾಗಿತ್ತೆಂದು ಹೇಳಿದವನಂಕುರಿತು ವಕ್ರಾಕ್ಷನೆಂಬ ನಾವಿಕನು :—

ಎಲೈ, ಹಯಗ್ರೀವನೆ! ನೋಡು ಉತ್ತರದಿಕ್ಕಿನಿಂದ,—ಅಲ್ಲ, ಅಲ್ಲ,—ಕುಬೇರದಿಕ್ಕಿನಿಂದ ಗಾಳಿ ಬೀಸುತ್ತಾ ಇರುವದು. ಇದು ಸಮುದ್ರಯಾನಕ್ಕೆ ಎಷ್ಟು ಅನುಕೂಲವಾಗಿರುವದು. ನಮ್ಮ ವಿದ್ಯುತು ಹಡಗಿನಲ್ಲಿರುವ ಪುರೋಹಿತರು, ಸಮುದ್ರರಾಯನಿಗೆ ಅಸಂಬಂಧವಾದ ಏಳು ಮುಖ್ಯ ಪಾಪಗಳಿರುವವು ಅವುಗಳಲ್ಲಿ ಅನುಕೂಲವಾಗಿರುವ ವಾಯುವಂ, ಉಪೇಕ್ಷಿಸುವದು ಅತ್ಯಂತ ಕೆಟ್ಟ ಪಾಪವೆಂದು ಹೇಳುವರೆಂದುದಕೆ ಹಯಗ್ರೀವನು ಹೌದು ಆದರೆ ನಮ್ಮ ಆಗಮನವನ್ನೇ ನಿರೀಕ್ಷಿಸಿಕೊಂಡಿರುವ ಸಾಮಾ

ನುಗಳನ್ನು ಹಸ್ತಗತಮಾಡಿಕೊಳ್ಳದೆ ಇರತಕ್ಕದೊಂದು ದೊಡ್ಡಪಾಪವು. ನಾವು ಸಿಂಹಳದ್ವೀಪಕ್ಕೆ ಹೋದಕೂಡಲೆ, ನಮ್ಮ ವಿದ್ಯುತು ಎಂದಿಗೂ ಕಾಣದಷ್ಟು ಆಭರಣಗಳನ್ನು, ಚಿನ್ನ ಬೆಳ್ಳಿಯ ಘಟ್ಟಿಗಳನ್ನು, ಗರ್ಭೀಕರಿಸಬಹುದೆಂದವನಂಕುರಿತು ನಾವಿಕನು ;—ನೀನು ಹೇಳಿದವುಗಳು ಉತ್ತಮವಾದವುಗಳೇಸರಿ. ಅವೆ ಮನುಷ್ಯನಿಗೆ ಉತ್ತಮಸ್ಥಿತಿಯನ್ನುಂಟುಮಾಡುವವೆಂದುದಕೆ, ಹಯಗ್ರೀವನು ;—ಹೌದು ಅವೆ ನಮ್ಮ ಮೂರುಜನಗಳಿಗೂ ಯಾವಜ್ಜೀವವು ಮಂದಮಾರುತಗಳಾಗಿರುವವು. ಅದರ ವಿಷಯವನ್ನು ಹಡಗಿನಲ್ಲಿ ಮತ್ತು ನಾವು ಆಲೋಚಿಸೋಣವೆಂದುಸುರಿ, ತಸ್ಕರನೆಂಬ ನಾವಿಕನಂಕರೆದು ನೀನು ಹೋಗಿ ನಮ್ಮ ಪ್ರಯಾಣಕ್ಕೆ ಕಾಮರೂಪನಿಂದ ಅಪ್ಪಣೆತೆಗೆದುಕೊಂಡು ಬರುವನಾಗೆಂದನು. ಅದಕ್ಕೆ ತಸ್ಕರನು ಪುನಃ ನಿಮ್ಮನ್ನು ಎಲ್ಲಿ ಕಾಣಬಹುದೆನಲು ; ಹಯಗ್ರೀವನು, ಸ್ಮಶಾನದಬಳಿ, ನಾವು ಚೀನಾದೇಶದಿಂದ ತಂದ ಪೀತಾಂಬರಗಳನ್ನು ಅವಿಸಿರುವ ಗವಿಯಲ್ಲಿರುವೆನು. ಅಲ್ಲಿ ನನ್ನಪ್ರಿಯಳಾದ ಆಕರ್ಷಿಣಿಯು ಸಂಧಿಸುವಳು, ನೀನು ಜಾಗರೂಕನಾಗಿರು. ಗವಿಗಳ ಸಹಾಯವನ್ನು ಅಪೇಕ್ಷಿಸುವ ನಮ್ಮ ಕೃತ್ಯದ ಮಹನೀಯರ ಮಾರ್ಗವು ನೇರವಾಗಿರುವದಿಲ್ಲ. ಅವರ ಜಾಡನ್ನು ಕಂಡು ಹಿಡಿಯುವದು ಕಷ್ಟವೆಂದು ಹೇಳಿ, ಅವನನ್ನು ಕಳುಹಿಸಿ ; ಮಕರಾಕ್ಷನಂಕುರಿತು :— ನೀನು ಹಡಗಿಗೆಹೋಗಿ, ಅದರಲ್ಲಿ ಪ್ರಯಾಣಕ್ಕೆ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುವನಾಗು. ಈದಿನ ರಾತ್ರಿ ನಾವು ಹೊರಡುವದರಲ್ಲಿ ಸಂದೇಹವಿಲ್ಲವೆಂದು ಅವನಂ ಹಡಗಿಗೆ ಕಳುಹಿಸಿ ಸ್ಮಶಾನಮಾರ್ಗವಾಗಿ ತೆರಳಿದನು.

ಆಗ ಚಂದ್ರನಗರದ ಕಡಲತೀರದೊಳ್ ವಿಹಾರಾರ್ಥವಾಗಿ ಸಂಚರಿಸುತ್ತಿದ್ದ ವೀರಬಾಹು ಮಹಾರಾಯನ ಪ್ರಧಾನ ವೈದ್ಯಶ್ರೇಷ್ಠನಾದ ಸುಬಾಹುವು, ಮಾರ್ಗವಶಾತ್ ಸುರೇಂದ್ರರಾಯನ ಪುರೋಹಿತರಾದ ಸುಮತಿಯಂಕಂಡು ; ಕುಶಲಪ್ರಶ್ನೆಗೈದು, ಎಲೈ, ಮಹಾತ್ಮರಾದ ಸುಮತಿಶ್ರೇಷ್ಠರೆ! ತಮ್ಮ ಬುದ್ಧಿವಾದದಿಂದಲೂ, ಊಹಾಶಕ್ತಿಯಿಂದಲೂ ನನಗೆ ಯಾವಾಗಲು ಪ್ರಯೋಜನವುಂಟು. ಪ್ರಕೃತದಲ್ಲಿ ನಿಮ್ಮಿಂದೊಂದು ಆಲೋಚನೆಯನ್ನು ಕೇಳಬೇಕಾಗಿರುವದು, ಅದೇನೆಂದರೆ ; ನಾನು ಯಾವಜ್ಜೀವವೂ ದೇಹದಂಡಿಸಿ ಅತಿಶ್ರಮದಿಂದ ಆರ್ಜಿಸಿರುವದು ಒಂದು ಸಹಸ್ರ ವರಹಗಳುಮಾತ್ರವಿರುವದು. ಅದೇ ನನ್ನ ಸರ್ವಸ್ವವು ಇದನ್ನು ವರ್ತಮಾನದಲ್ಲಿ ನಮ್ಮ———ಎಂದು ವಾಕ್ಯವಂ ಪೂರೈಸುವದಕ್ಕೆ ಮುಂಚೆಯೆ, ಪರರ ಇಂಗಿತಜ್ಞನಾದ ಸುಮತಿಯು ;—ಅದನ್ನು ಕಾಮರೂ

ಷನು ಒಂದೇದಿವಸದಲ್ಲಿ ಎರಚಿ, ವೆಚ್ಚವಾದ ಹಣವು, ವೆಚ್ಚ ಮಾಡಿದರಿನವು ಸವ್ಯಯವಾಯಿತೆಂಬುವನು. ಸಾಲವನ್ನು ತೀರಿಸ್ಯಾನೆ ಅಂದರೆ, ಕಾಮರೂಪದೇಶದ ಗ್ರಾಮಾಂತಗಳು, ವಲ್ಲಭೇಶನಾದ ಸುರೇಂದ್ರನಿಗೆ ಕೊಡತಕ್ಕ ಸಾಲಕ್ಕಾಗಿ ಆಧಾರವಾಗಿರುವ ಸಂಗತಿ ನಿನಗು ತಿಳದೇಇಧೆ ಎನಲು :—

ಸುಬಾಹುವು, ಹೌದು ; ಆದರೆ ಅವನ ಜನ್ಮಾರಭ್ಯ, ಇಲ್ಲನೆಂಬ ಶಬ್ದವನ್ನು ಆತನಲ್ಲಿ ನಾನು ಪ್ರಯೋಗಿಸಿದ್ದು ಇಲ್ಲ. ಅವನು ಔದಾರ್ಯದಿಂದಲೂ, ಮನೋಹರವಾದ ಸ್ವಭಾವಯುಕ್ತನು. ಪೂರ್ವವಯಸ್ಸಿಗೆಸಾಮಾನ್ಯವಾಗಿ ಮನ್ನಿಸಬಹುದಾದ ಕೆಲವು ದೋಷಗಳಿಂ, ವಯಸ್ಸಾದಹಾಗೆಲ್ಲ, ನಿವೃತ್ತನಾಗಿ, ಶಾರಕಾರ್ಮ್ಮಗಿಲಿನಿಂ ನಿವೃತ್ತನಾದ ಚಂದ್ರಮಂಡಲದಂತೆ ಯಶೋವಂತನಾದಾನೆಂದು ನಂಬಿ, ಆತನ ಇಚ್ಛೆಗಳಲ್ಲಿ ಮನಸ್ಸಿಟ್ಟು ಆತನ ಮಾರ್ಗಾವಲಂಬನಂಗೈಯುತ್ತಿರುವೆನು. ಆದರೆ ನನ್ನ ಸರ್ವಸ್ವವಾದ ಈ ಒಂದುಸಾವಿರ ವರಹಗಳನ್ನು ಆತನಿಗೆ ಕೊಟ್ಟುಕಳದುಕ್ಕೊಳ್ಳುವದರಿಂದ, ನನ್ನ ಪ್ರಿಯಪುತ್ರಿಯಾದ ಕೈರವೆಯು, ನಿರ್ಗತಿಯಂನ್ಯೆದುವಳು. ಆಕೆಯ ವಿವಾಹಕಾಲಕ್ಕೆ ಸ್ತ್ರೀಧನವಾಗಿರಲೆಂದು ಈ ಅಲ್ಪದ್ರವ್ಯವನ್ನು, ಅಪಾರಶ್ರಮದಿಂದಾರ್ಜಿಸಿರುವೆನು. ಎಂದುದಂಕೇ? ಸುಮತಿಯು ;—

ಎಲೈ, ಸುಬಾಹುವೆ! ಇದನ್ನು ಯಾತಕ್ಕಾಗಿ ಕೊಡಬೇಕೆಂದಿರುವೆ, ಕಾಮರೂಪನ ಕ್ಷೇಮಕ್ಕಾಗಿಬೇರೆ ಅಲ್ಲ. ಹಾಗೇನಾದರು ತಿಳಿದಿದ್ದರೆ ಅದನ್ನು ಬಿಟ್ಟು ಬುದ್ಧಿವಂತನಾಗಿರು. ಯಾವ ಮನುಷ್ಯನು ತನ್ನ ಮಾನಸಂರಕ್ಷಣೆಗೆವಿನಃ, ಇತರ ವಿಷಯಂಗಳಿಗಾಗಿ ಧನವಂ ಆರ್ಥಿಸುವನೊ, ಅವನ ಶ್ರೇಯಸ್ಸನ್ನು ಪ್ರಾರ್ಥಿಸುವದು, ನಿನಗೆ ಕರ್ತವ್ಯವಾಗಿದ್ದರೆ, ಆತನಿಗೆ ದ್ರವ್ಯವನ್ನು ಕೊಡಬೇಡ. ಹಾಗೆ ಕೊಟ್ಟಿದ್ದಾದರೆ, ಆತನ ಅಕಾರ್ಯಗಳಿಗೆ ಸ್ನೇಹಿತನಾಗಿ ಆತನ ದೋಷಗಳಿಗೆ ಸಹಕಾರಿಯಾಗುವೆ ಎಂಬಷ್ಟರಲ್ಲಿ;

ಸ್ನೇಹಿತರಿಂದೊಡಗೂಡಿ ಬರುತ್ತಿರುವ ಕಾಮರೂಪೇಶನಾದ ರವಿವರ್ಮನಂ ದೂರದಲ್ಲೇ ಕಂಡು ಸುಬಾಹುವು, ಸುಮತಿಯಂಕುರಿತು, ಇವರು ಈ ದಿವಸ ಒಂದು ಬೇಟೆಕ್ಕಾಗಿ ಹೋಗುವರಾಗಿ ಕಾಣುತ್ತಾರೆ. ಅಗೋ ನೋಡು ದಾರಿಯಲ್ಯಾರನ್ನೋ ಪುರಸ್ಕರಿಸುವನು. ಈತನ ಮೈತ್ರಿಗೆ ಪಾರವೇಇಲ್ಲ, ಒಂದು ಸಾಮಾನ್ಯ ಪಶುವನ್ನು ಕಂಡರು ಅದನ್ನು ಆದರಿಸಬೇಕೆಂಬ ಸ್ವಭಾವವುಳ್ಳವನು. ಆದರೆ ಈ ಕಾಲದಲ್ಲಿ ನಾವು ಈತನನ್ನು ಕಾಣಿಸಿಕೊಳ್ಳುವದು ಸರಿಯಲ್ಲವೆಂದು ಸುಮತಿಯೊಡನೆ ಚಂದ್ರನಗರಪ್ರವೇಶವಂ ಮಾಡಿದನು.

ಅತ್ತಲಾ ಚಂದ್ರನಗರದಲ್ಲಿ, ರವಿವರ್ಮರಾಯನು ಕುಮಾರಭವನವೆಂಬ ತನ್ನ ಅರಮನೆಯಲ್ಲಿ, ಅತಿ ವಿತರಣೆಯಿಂದ, ತನ್ನ ಸ್ನೇಹಮಂಡಲ ತೃಪ್ತಿವಿನೋದಾರ್ಥವಾಗಿ ಅನೇಕ ದ್ರವ್ಯವನ್ನು ವ್ಯಯಮಾಡಿ, ಔತಣಗೈದು, ಭೋಜನಾನಂತರ ಗಾಯನನರ್ತನಾಸಕ್ತಿಯಿಂ, ಸುನಂದನೆಂಬ ಚಾರನಂ ಕರೆದು ಜಾಗ್ರತೆಯಾಗಿ ಇಲ್ಲಿರತಕ್ಕ ಭೋಜ್ಯಪದಾರ್ಥಗಳಂ ತೆಗೆಯುವವನಾಗಿ ನರ್ತಕಿಯರಿಗೆ ಸ್ಥಳವನ್ನು ಮಾಡು. ಹಬ್ಬ, ಔತಣವೆಂದರೆ ಭೋಜನಮಾತ್ರವೇ ಅಲ್ಲ. ಭೋಜನದಿಂ ಬುದ್ಧಿಯು ಮಂದವಾಗುವದು. ಸಂಗೀತವು, ಭಾವರಹಿತವಾದಾಗ್ಯೂ ಹೃದಯವಂ ಆಲಂಗಿಸುವದೆಂದು ಹೇಳಿ ; ಆಕರ್ಷಿಣಿಎಂಬ ಗಾಯಕಿಯಂ ಕರೆದು ಎಲೈ, ಮಿತ್ರಳೆ ನೀನು ವೇಣುವಂ ಕೈಕೊಳ್ಳುವಳಾಗಿ, ನಿನ್ನ ಮನೋಹರವಾದ ಸ್ವರಬಿಂದುಗಳಿಂ, ಈ ಕಷ್ಟಾಸ್ಪದವಾದ ಪ್ರಪಂಚದಮೇಲೆ ವರ್ಷಿಸುವಳಾಗೆಂದುದಕವಳು :—ಸ್ವಾಮಿಯವರಿಗೆ ಯಾವ ರಾಗವು ಇಷ್ಟವೋ ಎಂಬದಾಗಿ ಉಸುರಿಸಿದ್ದಕ್ಕೆ; ತನ್ನ ಮುಖ್ಯಸ್ನೇಹಿತನಾದ ಉತ್ಕಲಪತಿ ರಾಮವರ್ಮನಕಡೆ ತಿರುಗಿನೋಡಿ ಇವರು ಹೇಳಿದ್ದಾಗಲೆಂದು; ಪುನಃ ಸುನಂದನಕಡೆತಿರುಗಿನೋಡಿ, ಕೋಪಿಷ್ಟನಾಗಿ, ಎಲೈದುರಾತ್ಮನೆ ! ಇಷ್ಟುಸಾವಕಾಶವ್ಯಾತಕ್ಕೆ ಮಿಕ್ಕ ಫಲಭಕ್ಷ್ಯಾದಿಗಳಂ ಬಾಗಲುಬಳಿ ಕಾದಿರುವ ಭಿಕ್ಷುಕರಿಗೆ ಕೊಡೆಂದು ಎಷ್ಟಾವರ್ತಿ ಹೇಳಬೇಕೆಂದು ಘರ್ಜಿಸಲು; ಸುನಂದನು ಸ್ವಾಮಿ ಇವುಗಳು ಭಿಕ್ಷುಕರ ಯೋಗ್ಯತೆಗೆ ಮೀರಿದವುಗಳು. ಇವು ರಸಬಾಳೆಗೊನೆ ಚಂದ್ರಬಾಳೆಗೊನೆಗಳು, ಚಿಕ್ಕವು ಬಂದಕ್ಕೆ ಬಂದುವರಹ ಕ್ರಯವಾಗುತೆಂದವನಂಕುರಿತು ; ಅವುಗಳನ್ನೆ ಅವರಿಗೆ ಕೊಡತಕ್ಕದ್ದು. ಅವು ನಮಗೆ ಅಜೀರ್ಣವನ್ನುಂಟುಮಾಡುವದಕ್ಕಿಂತ ಭಿಕ್ಷುಕರಿಗೆ ಧಾತುಪುಷ್ಟಿಯನ್ನುಂಟುಮಾಡುವದು ಉತ್ತಮವಲ್ಲವೆ ಎಂದುಸುರಿ, ರಾಮವರ್ಮನಂಕುರಿತು, ಎಲೈಮಿತ್ರನೆ ! ಆಕರ್ಷಿಣಿಗೆ ಯಾವದೊಂದು ಉತ್ತರವನ್ನು ಕೊಟ್ಟಹಾಗೆ ಕಾಣುವದಿಲ್ಲವೆಂದು ಕುತೂಹಲಪಡುತ್ತಿರುವಷ್ಟರಲ್ಲಿ;

ಆಕರ್ಷಿಣಿಯು ಸ್ವಾಮಿ ! ನಾನೆ ಒಂದು ರಾಗವನ್ನು ಸೂಚಿಸುವೆನು. ಅದು ತಮಗೆ ಇಷ್ಟವಿದ್ದರೆ ಅಪ್ಪಣೆ ಆಗಬಹುದೆಂದು : ತನ್ನ ಕೊಳಲನ್ನು ತೆಗೆದುಕೊಂಡು ಧ್ವನಿಮಾಡಿ ಒಂದು ರಾಗವನ್ನು ಸೂಚಿಸಲು, ರವಿವರ್ಮನು ಶಾಬಾಸು ! ಶಾಬಾಸು ! ಎಂದು ಪ್ರೋತ್ಸಾಹಪಡಿಸುತ್ತಿದ್ದನು.

ಆಕರ್ಷಿಣಿಯ ಗಾನವಂಕೇಳಿ ಪರವಶನಾದ ರವಿವರ್ಮನು ರಾಮವರ್ಮನಂ

ಕುರಿತು, ಎಲೈ ಮಿತ್ರನೆ ಇದಕ್ಕೆ ಸಮನಾದ ಸಂಗೀತವನ್ನು ನೀನು ಎಲ್ಲಾದರೂ ಕೇಳಿಯುಂಟೆ. ಇದು ಯಾವಪ್ರಾಣಿಯ ಹೃದಯವನ್ನು ತಲ್ಲಣಿಸದೊ ಆ ಪ್ರಾಣಿಗೆ ಸ್ವರ್ಗಪ್ರಾಪ್ತಿ ಇಲ್ಲ. ನಿನ್ನಭಿಪ್ರಾಯವೇನೆಂದು ಕೇಳಲು, ರಾಮವರ್ಮನು ನೀನು ಹೇಳುವದು ನಿಶ್ಚಯವೆಂಬುವಲ್ಲಿ ನಾನು ಸ್ವರ್ಗಾರ್ಹನಹುದೆಂದು ಹೇಳಿದಂತಾಗುವದು. ಆಕೆಯ ಸ್ವರವು ನನ್ನ ಹೃದಯವನ್ನು ತಲ್ಲಣಿಸಿದ್ದು ಮಾತ್ರವೇ ಅಲ್ಲದೆ ಅದನ್ನು ಭೇದಿಸಿರುವದೆಂದನು.

ರವಿವರ್ಮನು ಆಕರ್ಷಿಣಿಯಂ ಕುರಿತು, ಎಲೈ ನಾರಿಮಣಿಯೆ! ನಿನ್ನಗಾನಸುಧೆಯಂ ಸವಿದು ನಾವುಗಳು ಪರಮಾನಂದಭರಿತರಾದೆವು. ನೀನು ನಿನ್ನ ಶ್ರಮಕ್ಕಾಗಿ ನನ್ನಿಂದ ದ್ರವ್ಯವಂ ತೆಗೆದುಕೊಳ್ಳುವಳಂತೆ ಕಾಣುವದಿಲ್ಲ. ಆದರೆ ಈ ಮುಕ್ತಾಹಾರವನ್ನಾದರೂ ತೆಗೆದುಕೊಳ್ಳುವಳಾಗು. ಇದು ಪೂರ್ವದಲ್ಲಿ ಅಶ್ವಮೇಧಯಾಗಕ್ಕಾಗಿ ಅರ್ಜುನನು ಕುದುರೆಯಂ ಹಿಂಬಾಲಿಸಿ ಹೋದಾಗ್ಯೆ, ಕದನಕಾರಣದಿಂದವನ ಮನವ ಕೆಡಿಸಲ್ಬಂದ ಪ್ರಮೀಳೆಯ ಕೊರಳನಲಂಕರಿಸಿದುದು. ಈಗಿದು ನಿನ್ನ ಹೃದಯಾಸನದೊಳ್ ಪೀಠಗ್ಯೆವದರಿಂದದಕೆ ಕುಂದುಬಾರದೆಂದದನವಳ ಕೊರಳಿಗಲಂಕರಿಸಿದುದಕವಳು ;—

ಪ್ರಭುಗಳ ಕರಕಮಲದಿಂದೊಂದು ಕವಡೆಮಾತ್ರ ಅಪ್ಪಣೆಯಾದರೂ, ಅದು ನನಗೆ ಮಹಾಪ್ರಸಾದವೆಂದು ಹೇಳಿ; ಉಳಿದ ಗಾಯಕನರ್ತನಾಸ್ತ್ರೀಯರ ಸಮೂಹವಂ ನೈದಿದತರುವಾಯ, ರವಿವರ್ಮನು ತನ್ನ ಭೃತ್ಯರಂ ಕರೆದು ; ಈ ರಾತ್ರಿ ವಿನೋದಾರ್ಥವಾಗಿ ಒಂದು ನಾಟಕವಾಗಬೇಕಾಗಿದೆ, ಅದಕ್ಕೆ ತಕ್ಕ ತರದೂದು ಮಾಡುವರಾಗಿ, ನಾಟಕರಂಗವನ್ನು ಸಿದ್ಧಪಡಿಸಿರೆಂದು ಹೇಳುತ್ತಿರುವಾಗ ;—

ಮುಕ್ತಾಹಾರಸಮೇತವಾಗಿ ಸಮೀಪಕ್ಕೆ ಬಂದ ಆಕರ್ಷಿಣಿಯಂ ಕುರಿತು ; ಒಬ್ಬ ಗಾಯಕಿಯು ಎಲೈ ಸ್ನೇಹಿತಳೆ! ಈ ಮುಕ್ತಾಹಾರದ ಪದಕದ ಒಂದು ವಜ್ರಮಾತ್ರವೆ ಕಳೆದ ಫಾಲ್ಗುಣದಲ್ಲಿ ಒಂದು ಸಹಸ್ರ ಮೊಹರಾಗಳು ಕ್ರಯವಾಯಿತೆಂದುನ್ನೂ, ಮತ್ತೋರ್ವಳು ರವಿವರ್ಮರಾಯರು ಎಷ್ಟು ಉದಾರಿಗಳೆಂದುನ್ನೂ, ಮತ್ತೊಬ್ಬಳು ಕೆಲವು ವಿಷಯಗಳಲ್ಲಿ ಮಾತ್ರ ಅವರ ಔದಾರ್ಯ. ಮತ್ತೆ ಕೆಲವದರಲ್ಲಿ ಅವರು ಎತಿಗಳೇಹೊರ್ತು ರಾಜಕುಮಾರರಲ್ಲವೆಂದುನ್ನೂ, ಇನ್ನೋರ್ವಳು ಇವರು ನಮ್ಮನ್ನು ತಮ್ಮಂತೆಯೇ ಜಿತೇಂದ್ರಿಯರಾಗಿದ್ದಾರೆಂದು ತಿಳಿದಿರುವಹಾಗೆ ಕಾಣುತ್ತೆ. ಯಾವಸ್ತ್ರೀಯರಲ್ಲಾದರೂ ಅವರು ಈರೀತಿ ಪರಿಭಾವಿಸತಕ್ಕದ್ದು ಅವರಸ್ವಭಾವವೆಂದುನ್ನೂ, ಮತ್ತೋರ್ವಳು

ಆದರೆ ಎಲ್ಲೈ ಆಕರ್ಷಿಣಿಯೆ ಈ ಮುಕ್ತಾಹಾರವು ಬಂದು ಗಾನಮಾತ್ರಕ್ಕೆ ಕೊಟ್ಟರು. ಇದು ನಿಶ್ಚಯ ನಂಬತಕ್ಕದೆಂದು ಹಯಗ್ರೀವನಸಂಗಡ ಹೇಳುವಳಾಗು. ಅವನು ಚೆನ್ನಾಗಿ ನಂಬುತ್ತಾನೆಂದು ಹಲವುಬಗೆಯಾಗಿ ಮಾತನಾಡಿಕೊಳ್ಳುತ್ತಿರಲು ;—

ಸಿದ್ಧವಾದ ನಾಟಕರಂಗವಂ ಕಂಡು ರವಿವರ್ಮನು ಸೂತ್ರಧಾರನಂ ಕರೆದು, ಈ ರಾತ್ರಿ ಹರಿಶ್ಚಂದ್ರನಾಟಕವಾಗಲಿ. ಆ ನಾಟಕದಲ್ಲಿ ವಿಶ್ವಾಸಹುಟ್ಟುವಂತೆ ನಮ್ಮ ರಾಮವರ್ಮರಾಯರು ಮಾಡಿದರೆಂದುದಂ ಕೇಳಿ ;—ಸೂತ್ರಧಾರನು, ಹೌದು ಆ ನಾಟಕ್ಕದಿಂ ಪ್ರಭುಗಳ ಮನಸ್ಸಂತೋಷವಂ ಮಾಡಿದೆವೆಂದನು.

ರಾಮವರ್ಮನು, ಹೌದಯ್ಯಾ ಸೂತ್ರಧಾರನೆ: ಆದರಿಂ ಮನಸ್ಸಂತೋಷವಾದದ್ದು ನಿಶ್ಚಯ, ಆದರೆ ಸಂಪೂರ್ಣವಾಗಿಮಾತ್ರವಲ್ಲ. ನಾಟಕವೃತ್ತಿಯಲ್ಲಿ ಪ್ರವೀಣನಾದ ನಿನಗೆ, ನಾಟಕವಿಷಯವಾಗಿ ನಮಗೆ ತೋರುವದನ್ನು ಹೇಳಬಹುದಾದರೆ ; ನೀವುಗಳು ಸಾಮಾನ್ಯವಾಗಿ ಬಿರುಗಣ್ಣುನೋಟದಿಂ, ನಿಟ್ಟುಸಿರಿನಿಂ, ಶಬ್ದಕಂಪನೆಯಿಂ, ನೋಟಕರಿಗೆ ಮನದೊಲವಂ ಹೃದಯಮಂತಲ್ಲಣಂಗೈವಂತೆ ಮಾಳ್ಪುದನುಚಿತವು. ಯಾತಕಂದರೆ ಬಾಹುಮೂಲದಲ್ಲಿ ಬೆರಳಿಡುವದರಿಂದುಂಟಾಗತಕ್ಕ ನಗುವಿನಷ್ಟು ನಗುವು ಯಾವ ಹಾಸ್ಯರಸದಿಂದಲು ಉಂಟಾಗುವದಿಲ್ಲ ಅದರಂತೆ ಈ ಸಾಮಾನ್ಯಯುಕ್ತಿಗಳು ಕಂಪನವನ್ನುಂಟುಮಾಡುವವು. ಆದರೆ ನಿಶ್ಚಯವಾದ ವಿದ್ಯಾವ್ಯಾಪದಂದರೆ ; ನಿಮ್ಮ ಶೋಕಾಸ್ಪದವಾದ ಅಭಿನಯವಂಬಿಟ್ಟು, ಇಂದ್ರಿಯಂಗಳಂ ಕೆಣಕದೆ, ಹೃದಯದಗೋಜಿಗೆ ಹೋಗದೆ, ಶಬ್ದಾರ್ಥತ್ರಾಣದಿಂ ಮನದಭಿಪ್ರಾಯವಂ ಸಂಪೂರ್ಣವಾಗಿ ತೋರ್ಪಡಿಸಿ ; ಕೂಗ್ಗರ ತಕ್ಕ ಮನಕ್ಕೆ ಉಲ್ಲಾಸವನ್ನುಂಟುಮಾಡಬೇಕು.

ಹಯಗ್ರೀವನಿಂ ಕಳುಹಿಸಲ್ಪಟ್ಟ ತಸ್ಕರನೆಂಬ ನಾವಿಕನಲ್ಲಿಗೆ ಬಂದು ರವಿವರ್ಮನಂ ಕಾಣಿಸಿಕೊಂಡು, ಸ್ವಾಮಿ ಉಡುಪಪತಿಯಾದ ಹಯಗ್ರೀವನು ಪ್ರಯಾಣಕ್ಕೆ ತಮ್ಮ ಅಪ್ಪಣೆಯಂತೆಗೆದುಕೊಂಡು ಬರುವಂತೆ ನನ್ನನ್ನು ತಮ್ಮಲ್ಲಿಗೆ ಕಳುಹಿಸಿರುವನು. ಸಮುದ್ರಯಾನಕ್ಕೆ ಈಗ ಘಾಳಿಯು ಬಹು ಅನುಕೂಲವಾಗಿರುವದು. ಈ ದಿವಸವನ್ನು ಬಿಟ್ಟರೆ ಇನ್ನು ಎಷ್ಟುದಿವಸ ಕಾಯಬೇಕೊ ತಿಳಿಯದು. ಆದ್ದರಿಂದ ಜಾಗ್ರತೆ ಅಪ್ಪಣೆಕೊಡಿಸುವದೆನಲು ;—ರವಿವರ್ಮನು ಹೌದು, ನಾನು ಮರೆತಿದ್ದೆನು, ಆದರೆ ಆ ಬೌದ್ಧವರ್ತಕರೆಲ್ಲಿರುವರು, ಸಿಂಹಳದ್ವೀಪದಲ್ಲಿರುವ ನನ್ನ ಸಾಮಾನುಗಳನ್ನು ನಿಮ್ಮವಶಕ್ಕೆ ಕೊಡುವಂತವರಿಂದ ನೀವು ಕಾಗದವನ್ನುತೆಗೆದು

ಕೊಂಡು ಹೋಗಬೇಕೆಂದು ಹೇಳಿ, ನಂದನೆಂಬ ಚಾರನಂಕರೆದು ಈ ವರ್ತಕರಲ್ಲಿರುವರು ಕರೆದುಕೊಂಡು ಬಾರೆಂದವನಂ ಕಳುಹಿಸಿದನು.

ಕೊಂಚ ದೂರದಲ್ಲಿ ಗಾಯನಸ್ತ್ರೀಯರೊಡನೆ ನಿಂತಿದ್ದ ಆಕರ್ಷಿಣಿಯು; ಈ ನಾವಿಕನಿಗೆ ಕೈಸನ್ನೆಯಂಮಾಡಿ ಕರೆದು, ಸ್ಮಶಾನದಬಳಿ ಹಯಗ್ರೀವನಂ ನೋಡುವದಕ್ಕೆ ಹೋಗುವೆನೆಂದು ಏಕಾಂತದಲ್ಲಿ ಹೇಳಿ; ನೀನು ನನ್ನನ್ನು ಇಲ್ಲಿ ಕಂಡೆನೆಂಬದಾಗಿ ಹಯಗ್ರೀವನಸಂಗಡ ಹೇಳಬೇಡೆಂದವನ ಕೈಯಲ್ಲಿ ಎರಡು ವರಹಗಳನ್ನಿಟ್ಟು ಹೊರಟುಹೋದಳು.

ತರುವಾಯ ರಾಮವರ್ಮನು ರವಿವರ್ಮನಂಕುರಿತು, ನನಗಪ್ಪಣೆಯನ್ನು ಕೊಡುವನಾಗು, ಮೋಸವು ಪ್ರಚರಿಸುತ್ತಿರುವದನ್ನು ನಾನು ಕಣ್ಣಾರ ನೋಡತಕ್ಕವನಲ್ಲ, ಮೋಸಬಂದೇಅಲ್ಲ. ಈಗ ನೀನು ಕರೆಕಳುಹಿಸಿರುವ ಬೌದ್ಧರ ಮುಖವನ್ನು ನೋಡಿದರೆ ಅವರು ಮೋಸಗಾರ್ರುಮಾತ್ರವೇಅಲ್ಲದೆ ಕ್ರೂರಕರ್ಮಿಗಳಾದ ಕಿರಾತಕರಾಗಿಯೂ ಕಾಣುತ್ತಾರೆ. ಅವರ ಸಂಘ ನಿನಗೆ ಹ್ಯಾಗೆ ಸಂಘಟಿಸಿತೊ ನನಗೆ ತಿಳಿಯದು. ಆವರೆ ನನ್ನ ಸ್ನೇಹಿತರು ಬರತಕ್ಕ ಜಾಂಬವಿಹಡಗು, ಈ ದಿವಸ ಈ ವೂರಿಗೆ ಬರತಕ್ಕದ್ದು ಜ್ಞಾಪಕವಿರಲಿ. ಅವರನ್ನು ಎದರುಗೊಳ್ಳುವದಕ್ಕಾಗಿ ನನ್ನಸಂಗಡ ಸಮುದ್ರತೀರಕ್ಕೆ ನೀನು ಬರುತ್ತೇನೆಂದು ಕೊಟ್ಟಭಯವನ್ನು ನೆರವೇರಿಸುವನಾಗೆಂದು ಹೇಳಿ ಹೊರಟುಹೋದಕೂಡಲೆ, ಉಳಿದ ಪರಿವಾರ ಜನಗಳು ರವಿವರ್ಮನಪ್ಪಣೆಯಂ ತೆಗೆದುಕೊಂಡು ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು.

ಆವಾಗ ನಂದನು ಆಜ್ಞೆಪ್ರಕಾರ, ರಾಚಪ್ಪಶೆಟ್ಟಿ, ನಾಗಪ್ಪಶೆಟ್ಟಿ, ಭೋಗಪ್ಪಶೆಟ್ಟಿ ಎಂಬ ಮೂರುಜನ ವರ್ತಕರಂ ಕರೆತರಲು; ಅವರಿಗೆ ಉಚಿತಪ್ರಕಾರ ಮರ್ಯಾದೆಯಂಮಾಡಿ ಕುಳ್ಳಿರಿಸಿ;—ಎಲೈ, ಬೌದ್ಧಶಿರೋಮಣಿಗಳೇ, ಪ್ರಕೃತದ ಕಾಗದಗಳಂ ತಂದಿರುವಿರಾ ಎಂದು ಕೇಳಿ, ಅವರು ಕೊಟ್ಟ ಎರಡು ಕಾಗದಗಳನ್ನು ತೆಗೆದುಕೊಂಡು ಅದರಲ್ಲಿ ಬಂದರ ವಿಳಾಸವನ್ನು ನೋಡಿ, ನಾವಿಕನಂಕರೆದು ಎಲೈ ಇದು ಸಿಂಹಳದ್ವೀಪದಲ್ಲಿರುವ ಧನಪಾಲಶೆಟ್ಟರಿಗೆ, ಇದನ್ನು ಕೊಟ್ಟರೆ ನೀವು ತರತಕ್ಕ ಸಾಮಾನುಗಳನ್ನು ಅವರು ನಿಮ್ಮಸುಪರ್ದುಮಾಡುವರು. ಜಾಗ್ರತೆಯಾಗಿ ಹೋಗುವದೆಂದು ಹೇಳಿ ನಾವಿಕನಂ ಹಡಗಿನಬಳಿಗೆ ಕಳುಹಿಸಿ, ಮತ್ತೊಂದುಕಾಗದವಂ ಕೈಯಲ್ಲಿ ತೆಗೆದುಕೊಂಡು, ಇದೇನೋ ಬಾಡಿಗೆಖರಾರು ಇರಬಹುದು. ಇದರಲ್ಲೇನಿರುವದು ನೋಡೋಣವೆಂದು ಓದಲುಪಕ್ರಮಿಸಿ;—

ದಿವಸ ಒಂದಕ್ಕೆ ಹಡಗಿನ ಬಾಡಿಗೆಗಾಗಿ ಐವತ್ತು ವರಹ, ನಾವಿಕರಖರ್ಚು ನೀವೆ ಕೊಡಬೇಕು; ಬಾಡಿಗೆಗಾಗಿ ಇಷ್ಟು, ಸುಸ್ತಿಬಾಡಿಗೆಗಾಗಿ ಇಷ್ಟು, ದಳ್ಳಾಳಿಗಾಗಿ———ಎಂದಿರುವದಂ ಕಂಡು ಆಶ್ಚರ್ಯಪಟ್ಟು ಎಲೈ ರಾಜಪ್ಪಶೆಟ್ಟರೆ ಹಡಗು ನಿಮ್ಮದಲ್ಲವೆ. ಈ ವ್ಯಾಪಾರವು ನಮ್ಮಿಬ್ಬರಲ್ಲೇ ನಡಿಯಿತಲ್ಲ; ಮಧ್ಯ ದಳ್ಳಾಳಿಯನ್ನು ಯಾತಕ್ಕೆ ಕೊಡಬೇಕು, ನಾವು ದಳ್ಳಾಳಿಯನ್ನು ಇಟ್ಟುಕೊಳ್ಳಲಿಲ್ಲವಲ್ಲಾ ಎಂಬದಾಗಿ ಹೇಳಿದ್ದಕ್ಕೆ,

ರಾಜಪ್ಪಶೆಟ್ಟಿಯು ;—ಸ್ವಾಮಿ ಚಿತ್ತಕ್ಕೆ ತಂದುಕೊಳ್ಳಬೇಕು. ಅದೇನಂದರೆ ಹಡಗುಗಳನ್ನು ಬಾಡಿಗೆಗಾಗಿ ಗೊತ್ತುಮಾಡುವಕಾಲದಲ್ಲಿ, ಬಾಡಿಗೆಗೆ ತೆಗೆದುಕೊಳ್ಳುವವರ ಮತ್ತು ಬಾಡಿಗೆಗೆ ಕೊಡತಕ್ಕವರ ಮಧ್ಯೆ ಧಾರವಾಗಲು ಒಬ್ಬಾತನಿರುತ್ತಾನೆ. ಆತನಿಂದ ಬಹು ಅನುಕೂಲವೂ ಪ್ರಯೋಜನವೂ ಉಂಟು. ಅವನನ್ನೇ ದಳ್ಳಾಳಿಯೆಂದು ಕರಿಯುವರು, ಹೀಗೆ ನ್ಯಾಯವೂ ಪದ್ಧತಿಯೂ ಇರತಕ್ಕದ್ದು. ಹಾಗಲ್ಲವೆ ನೀವು ಹೇಳಿ ನಾಗಪ್ಪಶೆಟ್ಟರೆ, ನೀವು ಹೇಳಿ ಭೋಗಪ್ಪಶೆಟ್ಟರೆ ಎನಲು.

ನಾಗಪ್ಪಶೆಟ್ಟಿಯು ;—"ಬುದ್ಧಿ, ನ್ಯಾಯವು ಪದ್ಧತಿಯು ಅದೇಮೇರೆ ಇರತಕ್ಕದ್ದು."

ಭೋಗಪ್ಪಶೆಟ್ಟಿ ;—"ಸತ್ಯ ಅದೇ ನ್ಯಾಯವು ಪದ್ಧತಿಯು, ಮಧ್ಯಸ್ತಗಾರರಿಲ್ಲದ ಊರಲ್ಲಿ ಮಧ್ಯಾಹ್ನವಿರಬಾರದು"

ರವಿವರ್ಮನು ;—ಹಾಗಾದರೆ ಆ ಪ್ರಯೋಜನಕಾರಿಯಾದ ಪುರುಷನದ್ಯಾವನಾಯನೊ, ನಾನವನನ್ನು ಕಾಣಲಿಲ್ಲವಲ್ಲ. ಅವನಸಂಗಡ ವ್ಯಾಪಾರವನ್ನು ಮಾಡಿದ್ದು ಇಲ್ಲವಲ್ಲ.

ರಾಜಪ್ಪಶೆಟ್ಟಿಯು ;—"ಸ್ವಾಮಿ ಚಿತ್ತಕ್ಕೆ ವೇದ್ಯವಾಗಬೇಕು. ಈ ಕಾಲವು ಬಹು ಕೆಟ್ಟಕಾಲವು. ಎರಡುವೃತ್ತಿಗಳಲ್ಲಿ ನಾನು ದೇಹದಂಡಿಸದೆ ಇದ್ದರೆ ತಮ್ಮ ಗುಲಾಮ ಜೀವನಮಾಡತಕ್ಕದ್ದು ಕಷ್ಟವಾಗಿದೆ. ನನ್ನಲ್ಲಿ ಒಂದು ಹಡಗಿರತಕ್ಕದ್ದು ಸತ್ಯ. ಮಾನವಾದ ವೃತ್ತಿಯೆಂದು ತಿಳಿದು ದಳ್ಳಾಳಿಕೆಲಸವನ್ನು ಮಾಡುವದುಸಹ ಉಂಟು."

ರವಿವರ್ಮ ;—"ಶಾಬಾಸು ! ಶಾಬಾಸು ! ತಾವೇನೋ ಆ ಪ್ರಯೋಜನಕಾರಿಯಾದ ಪುರುಷರು"

ರಾಚಪ್ಪಶೆಟ್ಟಿ ;—"ತಾವು ಹೊರಗೆ ದಳ್ಳಾಳಿಗಳಾಗಿ ಕೊಡಬೇಕಾಗಿದ್ದ ವೊಬ ಲಗಿನಲ್ಲಿ ಅಡ್ಡಪಾಲಿಗೆ ಪಾದದ ಚಾಕರಿಮಾಡಿರುತ್ತೇನೆ, ಅಲ್ಲವೆ ನಾಗಪ್ಪಶೆಟ್ಟರೆ?"

ನಾಗಪ್ಪಶೆಟ್ಟಿ ;—"ಹೌದು, ಅಡ್ಡದಲ್ಲಿ ಅಡ್ಡವನ್ನು ತೆಗೆದುಕೊಂಡಿರುತ್ತಾರೆ"

ರಾಚಪ್ಪಶೆಟ್ಟಿ ;—"ನೀವು ಹೇಳಿ ಭೋಗಪ್ಪಶೆಟ್ಟರೆ."

ಭೋಗಪ್ಪಶೆಟ್ಟಿ ;—"ಬುದ್ಧಿ ಮಿತಿಮಿಾರದ ಅಗ್ಗದ ದಳ್ಳಾಳಿ ಬೇಕಾದಸಂದರ್ಭ ದಲ್ಲಿ ಈ ರಾಚಪ್ಪಶೆಟ್ಟರನ್ನು ಹೊರ್ತು ಮತ್ತ್ಯಾರನ್ನು ಪಾದಕ್ಕೆ ಅರಿಕೆಮಾಡಲಾರೆ ಇದು ಸತ್ಯ"

ರವಿವರ್ಮ ; ನಾವಿಬ್ಬರೂಸೇರಿ ವ್ಯಾಪಾರಮಾಡುವಲ್ಲಿ ಮಧ್ಯದಳ್ಳಾಳಿಬೇರೆ. ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಇದ್ದಂತಾಯಿತು. ಸಾಲಗಾರಬಿಟ್ಟರೂ ಸಾಕ್ಷಿ ಗಾರ ಬಿಡನೆಂಬುವದಿವರಲ್ಲೇ ಹುಟ್ಟಿದ್ದಾಗಿ ಕಾಣುತ್ತೆ. ಒಳ್ಳೇದು ಬಾಧಕವೇನಂ ದುಕೊಂಡು ಮತ್ತೇನೋ ಬರೆದಿರುವದು ನೋಡೋಣ—ಸರಿ, ಸರಿ, ಇದು ಆಧಾರವವಿಷ ಯವಾಗಿರಬಹುದೆನ್ನುವಷ್ಟರಲ್ಲೇ ;—

ರಾಚಪ್ಪಶೆಟ್ಟಿಯು ;—ಅಲ್ಯಾರು ದೂತರಿರುವಿರಿ ? ಸ್ವಾಮಿ ಅಪ್ಪಣೆಯಾಗುತ್ತೆ ಬನ್ನಿರೆಂದು ಕೂಗಿಕೊಂಡನು.

ನಾಗಪ್ಪಶೆಟ್ಟಿಯು ;—ಜಾಗ್ರತೆ ದೌತಿ ಲೇಖಣಿಗಳನ್ನು ತೆಗೆದುಕೊಂಡು ಬನ್ನಿ ಎಂದು ಕೂಗಿದನು.

ಭೋಗಪ್ಪಶೆಟ್ಟಿಯು, ತನ್ನ ಜೇಬಿನಿಂದ ಅವುಗಳನ್ನು ತೆಗೆದು, ಇಗೊ ಅವು ಇಲ್ಲೆ ಇವೆ. ಸ್ವಾಮಿ ರುಜು ಹಾಕಬಹುದೆಂದು ರವಿವರ್ಮನ ಕೈಗೆ ಕೊಟ್ಟನು.

ರವಿವರ್ಮನು ; ತಾಳಿ, ತಾಳಿ, ಅವಸರಪಡಬೇಡಿ. ಈ ಕಾಗದವನ್ನು ಓದಿ ನೋಡಿ ಕೊಳ್ಳುವೆನು.—ಅದನ್ನು ಓದುವಲ್ಲಿ, ನಮ್ಮ ಚಂದ್ರಗಡ ತೋಟವನ್ನು ಆಧಾರ ಕಾಣಿಸಿ ಕುವದುಮಾತ್ರವಲ್ಲದೆ ನನ್ನ ಇತರ ಜಂಗಮಸ್ಥಿತಿಗಳನ್ನು ಸಹಾ ಸೇರಿಸಿರುತ್ತೆ. ಅದು ಯಾತಕ್ಕೆನಲು.

ರಾಚಪ್ಪಶೆಟ್ಟಿ ;—ಚಂದ್ರಗಡ ತೋಟ! ಅಯ್ಯೋ! ನಾನುಕೆಟ್ಟೆ' ನಾನುಕೆಟ್ಟೆ! ಅದರಲ್ಲೇನಿದೆ! ಶುದ್ಧ ಪೈರಾನು! ನಾನು ಅಲ್ಲಿಗೆ ಹೋಗಿ ನೋಡುವಲ್ಲಿ ಬರಿ ಕಾರೆ ಮುಳ್ಳು, ಕಕ್ಕೆಮುಳ್ಳು ಗಿಡಗಳೇಹೊರ್ತು ಮತ್ತ್ಯಾವಗಿಡಗಳು ಇಲ್ಲವೆನಲು.

ರವಿವರ್ಮನು ;—ರಾಚಪ್ಪಶೆಟ್ಟರೆ, ಉಂಟೆ, ಹಾಗಲ್ಲ, ಆ ಆಸ್ತಿಯು ಈಸಾಲಕ್ಕೆ

2

ತಕ್ಕದಾದ್ದಾಗಿದೆ. ಆದರೆ ಈ ಸಾಲವನ್ನು ತೀರಿಸಬೇಕೆಂಬ ಉದ್ದೇಶವು ಅನುಕೂಲವು ಇರುವವರಿಂದ ಹ್ಯಾಗೆಬರೆದಿದ್ದರೇನು. ಯಾವಸ್ವತ್ತುಗಳನ್ನು ಆಧಾರಕಾಣಿಸಿದರೂಭಯ ವಿಲ್ಲವೆಂದು, ಸ್ವಹಸ್ತಾಕ್ಷರದಿಂ ಅದಕ್ಕೆ ಒಪ್ಪಿಕೆಯನ್ನು ಹಾಕಿಕೊಟ್ಟು; ಇನ್ನೇನು ಈ ಕೆಲಸ ಪೂರೈಸಿತಷ್ಟೆ ಎಂದನು.

ರಾಜಪ್ಪಶೆಟ್ಟಿಯು:—ಹೌದು ಮಹಾಸ್ವಾಮಿ! ಈಗಿನ ಕೆಲಸ ಮುಗಿಯಿತು. ಆದರೆ ಹೊಸಕೋಟೆಬಳಿ ಸ್ವಾಮಿಗೆ ಕೆಲವು ಭೂಮಿಗಳಿರುವವು. ಅವುಗಳಿಂದ ಪಾದಕ್ಕೆ ಯಾವ ಪ್ರಯೋಜನವು ಇಲ್ಲ. ಅದನ್ನು——ಅನ್ನುವಷ್ಟರಲ್ಲಿ ರವಿವರ್ಮನು; ಸಾಕು! ಸಾಕು! ರಾಜಪ್ಪಶೆಟ್ಟರೆ, ತಾವು ಹೇಳಿದಮೇರೆ ಈ ಕಾಲವು ಬಹು ಕೆಟ್ಟ ಕಾಲವು. ತಮ್ಮಂತೆಯೆ ನಾನುಸಹ ಎರಡುವಿಧವಾಗಿ ಆಲೋಚನೆ ಮಾಡಬೇಕಾಗಿದೆ. ವಿನೋದಾರ್ಥವಾಗಿ ಇದುವರಿಗೆ ಚಂದ್ರನಗರದಲ್ಲಿ ಕಾಲ ಕಳೆದದ್ದಾಯಿತು. ಇನ್ನು ಮುಂದೆ ವನಾಂತ್ರಗಳಲ್ಲಿ, ಕೋಗಿಲೆಗಳಸಂಗಡ ಕಾಲಹರಣ ಮಾಡಬೇಕೆಂಬದಾಗಿರುತ್ತೀರಿ. ಇನ್ನು ದಯಮಾಡಿಸಬಹುದೆಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು.

ಇತ್ತಲಾ ಪೂರ್ವ ಸಂಕೇತದಮೇರೆ ಆಕರ್ಷಿಣಿಯು ಹಯಗ್ರೀವನಂ ಕಾಣಲೊಸುಗ, ಚಂದ್ರನಗರದ ಪಶ್ಚಿಮಪಾರ್ಶ್ವದಲ್ಲಿರುವ ರುದ್ರಭೂಮಿಬಳಿ ನಿರ್ಜನಪ್ರದೇಶವಾದ ಒಂದು ಗವಿಯಂಪ್ರವೇಶಿಸಿ, ಹಯಗ್ರೀವನುಬಾರದೆಯೂ, ಹೊತ್ತುಹೋಗದೆಯು ಇರಲು ತನ್ನೊಳ್ಳ್ತನು;—ರವಿವರ್ಮರಾಯರಿಗೆ ನನ್ನ ಸಂಗೀತದಲ್ಲಿಮಾತ್ರ ವಿಶ್ವಾಸವಿದೆ, ನನ್ನಲ್ಲಿ ವಿಶ್ವಾಸವಿಲ್ಲ. ನಾನು ಈ ಹಯಗ್ರೀವನ ನೀಚಸಹವಾಸವನ್ನು ಮಾಡಿರುವಲ್ಲಿ, ಅವರಿಗೆ ನನ್ನಲ್ಲಿ ವಿಶ್ವಾಸ ಹ್ಯಾಗೆತಾನೆ ಉಂಟಾದೀತು. ನಮ್ಮ ವೃತ್ತಿಯೇ ಕೆಟ್ಟದ್ದು. ಅದರಲ್ಲು ಇಂತಾ ನೀಚನ ವಿಶ್ವಾಸಕ್ಕೊಳಗಾದುದಕ್ಕೆ ಪ್ರಾಯಶ್ಚಿತ್ತವೇಇಲ್ಲ. ಈ ದುರಾತ್ಮನು ತನ್ನ ಸಂಪರ್ಕದಿಂದ ನಿಕೃಷ್ಟಳಾದ ನಾನು ತನಿಗೆ ಗೊತ್ತಾಗಿ, ತನ್ನ ಅಕಾರ್ಯಗಳನ್ನೇ ಸುಕಾರ್ಯಗಳೆಂದೆಣಿಸಿಕೊಂಡು ತನ್ನ ಪಾಪಕೃತ್ಯಗಳಿಗೆ ಸಹಕಾರಿಯಾಗಿರುವಳೆಂದೆಣಿಸಿರಬಹುದು. ಪತಿಗೆ ಶಿಷ್ಯನಾದ ಚಂದ್ರನಂಕೂಡಿದ ತಾರೆಯು, ಪಾತಕಕ್ಕಿಂತಮೇರೆ ಇದು ದೊಡ್ಡದಲ್ಲ. ಅಂಥಾವಳೆ ದೈವಾನುಗ್ರಹದಿಂದ ಮಹಾಪತಿವ್ರತೆಯೆನಿಸಿಕೊಂಡು ಶಿಷ್ಟಯೋಗ್ಯಳಾದಳೆಂದು ಗುರುಜನರು ಹೇಳುವರು. ಹೀಗಿರುವಲ್ಲಿ; ಒಳ್ಳೇದು, ಇವನು ಈಗ ಪ್ರಾರಂಭಿಸಿರುವ ಕೆಲಸದಲ್ಲೇನೋ ದ್ರೋಹವು ವಿಶ್ವಾಸಘಾತುಕತನವಿರುವಂತೆ ಕಾಣುತ್ತೆ. ಅದರ ಜಾಡು ಲೇಶಮಾತ್ರ ಗೊತ್ತಾದರೆ ಈ ಹೇಸಿಕೆ

ಯಾದ ಗವಿಗಳನ್ನೂ, ಈ ನೀಚನಮುಖವನ್ನೂ, ಇವನ ಕ್ರೂರಕರ್ಮಗಳನ್ನು ನೋಡತಕ್ಕದನ್ನು ಸ್ವಾಮಿ ಇಂದಿಗೆ ಕಡೆಗಾಣಿಸುವನೆಂದು ಕಣ್ಣೀರಂಸುರಿಸುತ್ತಿರಲು;—

ಹಯಗ್ರೀವನು ಆ ಗವಿಯಂ ಪ್ರವೇಶಮಾಡಿ ಆಕರ್ಷಿಣಿಯಂನೋಡಿ ;—ಇದೇನು ನೀರುಗಂಣಿಯೆ ! ನಿನ್ನ ಸ್ವಭಾವವನ್ನು ಬಿಟ್ಟೇ ಇಲ್ಲ. ಈಗಿನ ಪ್ರವಾಹಕ್ಕೆ ಕಾರಣ ವೇನೆನಲು,—ಆಕರ್ಷಿಣಿಯು ಅದರ ಕಾರಣವೇನಾದರೇನು ? ಹೇಳಿದ್ದರಿಂದ ಫಲವೇನು? ಕೇಳಿ ನೀನು ಪಶ್ಚಾತ್ತಾಪಪಡತಕ್ಕದ್ದು ಅಷ್ಟರಲ್ಲೆ ಇದೆ ಎನಲು ;——ಪಶ್ಚಾತ್ತಾಪವೊ ! ಅದಕ್ಕೆ ಕಡೆಮೆಯೇನು, ಪಾದುಕಗಳಿಲ್ಲದೆ ಪಾದಚಾರಿಯಾಗಿರುವ ಹೆಗ್ಗಣಗಳನ್ನು ಕಂಡರೆಷ್ಟು ಪಶ್ಚಾತ್ತಾಪವೋ ; ಅಳುತ್ತಿರುವ ಹೆಂಗಸರನ್ನು ಕಂಡರೆ ಅಷ್ಟು ಪಶ್ಚಾತ್ತಾಪವುಂಟಾಗುವದು. ಬರಿಕಾಲಿನಿಂದ ನಡೆಯತಕ್ಕದ್ದು ಹೆಗ್ಗಣಗಳಸ್ವಭಾವ ; ಅಳತಕ್ಕದ್ದು ಹೆಂಗಸರಸ್ವಭಾವ ; ಇದಕ್ಕೆ ಪಶ್ಚಾತ್ತಾಪಪಡಬೇಕಲ್ಲವೆ ! ಅದು ಹಾಗಿರಲಿ. ಈಗಿನ ಕಾರ್ಯವನ್ನು ಕೇಳುವಳಾಗು. ಭಾಗ್ಯವೂ ಆಭರಣಗಳೂ ನಿನ್ನ ಮನಸ್ಸಂತೋಷಪಡಿಸುವದಾದರೆ ಹೇಳು. ನಾನು ಸಿಂಹಳದ್ವೀಪದಿಂದ ಬಂದ ಮೇಲೆ ನೀನು ಸಂತೋಷಪಡುವೆ. ನಾನು ಬರುವಾಗ್ಯೆ ಅಪರಿಮಿತವಾದ ಭಾಗ್ಯವನ್ನು ರಾಸಿರಾಸಿಯಾದ ಆಭರಣಗಳನ್ನು ತರುವೆನು. ಅವುಗಳನ್ನು ಇದೆ ಗವಿಯಲ್ಲಿ ನೀನು ಕಣ್ಣಾರ ನೋಡುವೆ. ಅವು ನಿನ್ನ ಸ್ವಾಧೀನದಲ್ಲೇ ಇರುವವು. ಅವುಗಳನ್ನು ನಿನ್ನಲ್ಲಿ ಭದ್ರಪಡಿಸಿ ಪರದೇಶಗಳಲ್ಲಿ, ಕಾಲಕ್ರಮ ಹ್ಯಾಗೆ ನಡಿಯುತ್ತೋ ನೋಡುತ್ತಾ ಒಂದೆರಡು ತಿಂಗಳನ್ನು ನಾನು ಕಳೆಯಬೇಕಾಗುತ್ತೆ. ನಾವು ಯಾನಮಾಡತಕ್ಕ ಹಡಗು ದಿಗಂತದಲ್ಲಿ ಕಂಡಕೂಡಲೆ ; ನೀನು ಈ ಗವಿಯಲ್ಲಿ ಬಂದಿರುವಳಾಗು. ಅದುದಡದವರಿಗೂ ಬರಲೆಂದು ಕಾದಿರಬೇಡ. ಅದರಿಂದ ಸಾವಕಾಶವಾದೀತು. ನಮ್ಮ ಹಡಗು ಮುಳುಗಿಹೋ ನಾವು ಮೃತಪಟ್ಟರೆಂದು ಜನಗಳು ಮಾತನಾಡಿಕೊಂಡರೆ ಅದನ್ನು ಮನಸ್ಸಿಗೆ ತೆಗೆದು ಕೊಳ್ಳಬೇಡ. ಜನರು ಹಾಗೆ ಹೇಳಿದಾಗ್ಯೂ ನನ್ನನ್ನುಮಾತ್ರ ನೀನು ಇಲ್ಲಿಕಾಣುವೆ ಎನಲು ; ಆಕರ್ಷಿಣಿಯು ;—ಹಾಗೆ ಆಗಲಿ, ಆದರೆ ಈ ಭಾಗ್ಯವನ್ನು ಎಲ್ಲಿಂದತರುವೆ ಹೇಳಬೇಕೆನಲು ; ಹಯಗ್ರೀವನು ಅಯ್ಯೊ ! ಅಷ್ಟು ಗೊತ್ತಿಲ್ಲವೆ ! ಭಂಗಾರವನ್ನು ಭೂಮಿಯಿಂದ ಅಗೆದು ತೆಗೆಯುವರು. ರತ್ನಗಳು ಆದಿಶೇಷನ ತಲೆಯಲ್ಲಿರುವವು. ಮುತ್ತುಗಳವಿಷಯ ಚಿಪ್ಪಿನ ಮೀನುಗಳನ್ನು ಕೇಳಿದರೆ ಗೊತ್ತಾಗುವದು. ಆಭರಣಗಳನ್ನು ಅಕ್ಕಸಾಲೆಗಳು ಮಾಡುವರು. ಅಗೋ ! ಅಲ್ಲಿ ಯಾರೋ ಕೂಗುವರದನ್ನು

ಕೇಳುವಳಾಗು. ನಮ್ಮ ನಾವಿಕರಲ್ಲೊರ್ವನು ತಾಯನ್ನಗಲಿದ ಕರುವಿನಂತೆ, ಈ ಗವಿಗಳ ಮಧ್ಯದಲ್ಲಿ ನನ್ನನ್ನು ಕೂಗುತ್ತಾ ಇಧಾನೆ. ಮಾತನಾಡಲು ಸಾವಕಾಶವಿಲ್ಲ. ಪ್ರಯಾಣಕ್ಕೆ ಸಮ್ಮತಳಾಗು. ನಾವು ಪುನಃ ಇದೇ ಸ್ಥಳದಲ್ಲಿ ಸೇರತಕ್ಕದ್ದು ಜ್ಞಾಪಕವಿರಲೆಂದು ಹೇಳಿ ಸಮುದ್ರಮಾರ್ಗವಾಗಿ ತೆರಳಿದನು.

ಆಕರ್ಷಿಣಿಯು ಅವನು ಹೊರಟು ಹೋದನಂತರ ತನ್ನಲ್ಲಿ ತಾನು; ಈ ಹಯಗ್ರೀವನು, ತರತಕ್ಕ ಭಾಗ್ಯವು ಯಾರದು ? ಅದು ಎಲ್ಲಿಂದ ಬರುವದೆಂಬುವದು, ನನಿಗಿಂತ ಚೆನ್ನಾಗಿ ಬೇರೆ ಇವನಿಗೆ ತಿಳಿಯದು. ಅದು ರವಿವರ್ಮರಾಯರದು. ಅದು ಯಾರನ್ನ ಸೇರುವದೆಂಬುವದು ಸಹಾ ನನಿಗಿಂತ ಹೆಚ್ಚಾಗಿ ಇವನಿಗೆ ತಿಳಿಯದು. ಈ ವಿಷಯು ನನ್ನಷ್ಟು ಸುದಾ ಅವನಿಗೆ ತಿಳಿಯದು. ರವಿವರ್ಮರಾಯರಿಗೋಸ್ಕರ ಅದನ್ನು ಇವನಿಂದ ತೆಗೆದುಕೊಳ್ಳುವೆನು. ಸುಳ್ಳಿಗೆ ಸುಳ್ಳನ್ನು ಬಡ್ಡುವದೇ ಹೆಂಗಸರ ಸತ್ಯವು ನಂಬಿಕೆಯು; ಎಂದು ಅಂದುಕೊಳ್ಳುತ್ತಾ ಆ ಗವಿಯಂ ಬಿಟ್ಟು ಚಂದ್ರನಗರವಂ ಸೇರಿದಳು.

ಅನಂತರ ಮಲಯ ದ್ವೀಪದಿಂದ ಜಾಂಬವಿ ಎಂಬ ಹಡಗಿನಲ್ಲಿ, ಚಂದ್ರನಗರಕ್ಕೆ ಬರುತ್ತಿರುವ, ವೀರಬಾಹು ಮಹಾರಾಯನ ಕೋಶಾಧೀಶ್ವರನಾದ ಮಲಯರಾಯ ಕಂಗನ ಪುತ್ರಿ ಪದ್ಮಿನಿಯಂ, ಆಕೆಯ ಸಖಿ ಕಮಲಿನಿಯಂ ಎದುರುಗೊಳ್ಳುವದಕ್ಕಾಗಿ ಇವರ ಸಖ ರಾಮವರ್ಮನು, ರವಿವರ್ಮನಿಂದೊಡಗೂಡಿ ಕಡಲತಡಿಯೊಳ್ಬಂದು ನಿಂತ ತರುವಾಯ; ರವಿವರ್ಮನು, ರಾಮವರ್ಮನಂ ಕುರಿತು, ಎಲೈ ಸಖನೆ; ಸಿಂಹಳ ದ್ವೀಪದಲ್ಲಿ ನಮ್ಮ ಪಿತರಾರ್ಜಿತವಾದ ಅನೇಕ ಧನಕನಕ ವಸ್ತ್ರಾಭರಣಗಳಂ ಚಂದ್ರನಗರಕ್ಕೆ ತರಲು, ಉಡುಪಪತಿ ಹಯಗ್ರೀವನಿಂದೊಡಗೂಡಿ ಪೋಗುತ್ತಿರುವ ವಿದ್ಯುತನ್ನು ನೋಡುವನಾಗು. ಆಗೋ ! ದಿಗಂತದಲ್ಲಿ ಜಾಂಬವಿಯು ಕಾಣಿಸುತ್ತಿರುವದು. ಆಗೋ ! ಅದರ ಉಲ್ಲಾಸವಂ ಲಾವಣ್ಯವಂ ನೋಡುವನಾಗು. ಸಂಧ್ಯಾರ್ಕನಿಂದರುಣತೆಯನಾಂತ ಕಡಲತರಂಗ ಪಂಗ್ತಿಯಂ ಧಿಟ್ಟತನದಿಂ ಭೇದಿಸಿ ತಡಿವಿಡಿದು ಬರುತಿರ್ಪ ಚೆಲುವಿನದೊಂದಂದವಂ ನೋಡುವನಾಗು. ಚಂದ್ರನಗರದಿಂ ಪೋಪ ಹಡಗಿಗನುಕೂಲವಾದ ಮಾರುತನು, ಚಂದ್ರನಗರಿಗೆ ಬರುತಿರ್ಪ ಜಾಂಬವಿಗೆ ಪ್ರತಿಕೂಲವಾಗಿರುವದಂ ನೋಡು. ವಾಯುಮಾರ್ಗದೊಳ್ ಪೋಪ ವಾಯುಪುತ್ರನಿಗಾಗಿ ಕಡಲಿಂದೆದ್ದ ಮೈನಾಕಪರ್ವತವೋ ಎಂಬಂತೆ ಕಾಣುವಾದೊಡ್ಡ ಅಲೆಯೊಳ್ ಸಿಲುಕಿ ತಲ್ಲಣಪಡುವ ಜಾಂಬವಿ

ಯ ನೋಡು. ಹಡಗಂ ಬಿಟ್ಟು ದೋಣಿಯೊಳ್ ಕುಳಿತು ತಡಿಗಾಗಿ ಬರುತಿರ್ಪ ನಾರೀ ಶಿರೋಮಣಿಗಳಂ ನೋಡು. ಎಲೈ, ರಾಮವರ್ಮನೆ! ಜಗತ್ಸೃಷ್ಟಿಯಾದಾರಭ್ಯ ಮಲಯದ್ವೀಪದಲ್ಲಿ ಹುಟ್ಟಿ ನಮ್ಮ ದೇಶಕ್ಕೆ ಬಂದ ಪದಾರ್ಥಗಳಲ್ಲಿ, ಈ ಪದ್ಮಿನಿಯು ಅಮೌಲ್ಯವಾದವಳು ; ಮಲಯರಾಯನಿಗೆ ಏಕ ಪುತ್ರಿಯು ; ಆತನ ದೇಶಕೋಶಗಳಿಗೆ ಈಕೆಯೊಬ್ಬಳೇ ಬಾಧ್ಯಸ್ಥಳೆಂದು ಹೇಳುವರು. ಆದರೆ ಅವಳು ರೂಪವತಿಯೆ? ಆಕೆಯ ಜೊತೆಯಲ್ಲಿ ಬರತಕ್ಕ ಕಮಲಿನಿಯಷ್ಟು ಸೌಂಧರ್ಯ ಉಂಟೆ? ನೀನು ಸಕಲ ವಿದ್ಯಾ ಪ್ರವೀಣನು, ಕವಿಯು, ನೀತಿ ಶಾಸ್ತ್ರಜ್ಞನು, ಚಿತ್ರವಿದ್ಯಾ ಪ್ರಾಧನಾಗಿರುವಲ್ಲಿ ; ಅವರ ಸೌಂಧರ್ಯವಂ ವರ್ಣಿಸುವನಾಗು, ಅವರ ಗುಣಾತಿಶಯಗಳಂ ಪ್ರಚರಿಸುವನಾಗು, ಅವರ ಭಾವನಂ ಚಿತ್ರಿಸೆನಲು ;—

ರಾಮವರ್ಮನು ;—ಎಲೈ ಸ್ನೇಹಿತನೇ! ಆಕೆಯು ರೂಪವತಿಯನ್ನುವದರಲ್ಲಿ ಸಂದೇಹ ಉಂಟೆ. ನಾನು ಕಮಲಿನಿಯಲ್ಲಿ ಮನಸ್ಸಿಟ್ಟು, ಆಕೆಯ ವಿಶ್ವಾಸಕ್ಕೆ ಪಾತ್ರನಾಗಬೇಕೆಂಬದಾಗಿರುವದರಿಂದ ; ಅವಳಷ್ಟು ರೂಪವತಿ, ಪದ್ಮಿನಿಯಲ್ಲವೆಂಬದಾಗಿ ಹೇಳಬೇಕಾಗಿದೆ. ಆದರೂ ಬಂದೊಂದು ಬಗೆಯಾಗಿ, ಇವರಿಬ್ಬರೂ ಅತ್ಯಂತ ಸೌಂಧರ್ಯಶಾಲಿನಿಯರು. ಮೂಲವೇ ಮುಂದಾಗುತ್ತಿರುವಲ್ಲಿ, ಪ್ರತಿಯಂ ಚಿತ್ರಿಸುವದಪಾಯವು. ಆದರೂ ಹೊತ್ತು ಹೋಗುವದಕ್ಕಾಗಿ ಸಾಮಾನ್ಯವಾಗಿ ವಿವರಿಸುವೆನು ಕೇಳು :—ಈ ಮಲಯದ್ವೀಪದ ಯುವರಾಜ್ಞಿಯು ಯೌವನದಿಂ ವರ್ತುಲತೆಯನಾಂತ, ಅವಯವಗಳ ಲಾವಣ್ಯಭಾವದಿಂ, ಘನವಾದ ಕೋಮಲ ಶರೀರ ಉಳ್ಳವಳು. ಶಾಂತಿಯು ಹರ್ಷವು ಅಂತರ್ಗತವಾಗಿರುವ ಮುಖಭಾವದಿಂ ಪ್ರಜ್ವಲಿಸುವಳು. ಆಕೆಳೆಂಕಳು, ಮಿತಭಾಷಿಣಿಯು, ಆದರೂ ಆಕೆಯಸಾನ್ನಿಧ್ಯದಲ್ಲಿವೆ ವಾಕ್ಪಟುತ್ವವಾಗಿ ಕಾಣುವದು. ಆಕೆಯು ಅಭಿಮುಖಳಾಗಿದ್ದು ಮರೆಯಾದರೆ, ವಾಯುವಿಂದೊಡಗೂಡಿ ಜಗವನಾವರ್ತಿಸಿ ಮನಂಗಳ ತಲ್ಲಣಿಪ ಗಾಯನದ ಧಾಟಿ ತಪ್ಪಿದಂತೆ ಕಾಣುವದು. ಆಕೆಯು ಮಾತನಾಡಿದರೂ, ಅನೇಕಧ್ವನಿ ಇಂದ ಕೂಡಿದ ಮೇಳದಲ್ಲಿ ಹೃದಯವಂ ತಳಮಳಿಸುವ ಮುಖ್ಯ ಸ್ವರದಂತೆ ಕೇಳುವದು. ಈ ಪರಿಯಾದ ಆಕಾರದಿಂದಲೂ, ಧ್ವನಿಯಿಂದಲೂ ಈ ಪ್ರಪಂಚಕ್ಕೆ ಕಾಂತಿಗಾಧಾರವಾದ ಸೂರ್ಯ ಪ್ರಭೆಯೋ ಎಂಬಂತೆ ಕಾಣಿಸುವಳೆಂದುದಕೆ :—

ರವಿವರ್ಮನು ;—ಇದೇನೈಯ್ಯಾ! ಈತರದ ನಾರಿಯು ಭೂಲೋಕದಲ್ಲಿರುವದುಂಟೆ? ಇಂಥಾ ಸ್ತ್ರೀಯರಿದ್ದಲ್ಲಿ ದೇವತೆಗಳು ಸ್ವರ್ಗದಲ್ಲೆಂತಿರುವರು. ಈಕೆಯಂ

ನೋಡಿದರೆ ಊರ್ವಶಿಯಲ್ಲಿತಾನೆ ಅನುರಾಗ ಹ್ಯಾಗೆ ಉಂಟಾದೀತು. ಆದರೆ ಇವಳ ಸಖಿ ಕಮಲಿನಿಯು ಇವಳಿಗಿಂತ ಸೌಂದರ್ಯಶಾಲಿ ಎಂದು ಹೇಳಿದೆಯಲ್ಲ ಅದು ಹ್ಯಾಗೆ ಎನಲು :–

ರಾಮವರ್ಮನು :–ನಾನು ಹಾಗೆ ಹೇಳಿರಬಹುದು ; ಆದರೆ ನನ್ನ ಕಣ್ಣುಗಳಿಗೆ ಅವಳು ಹಾಗೆ ಕಾಣುತ್ತಾಳೆಂಬದಾಗಿ ಹೇಳಬೇಕಾಗಿತ್ತು. ಸೃಷ್ಟಿಕರ್ತನ ಶೃಂಗಾರ ಕೋಶವೆಲ್ಲ ಪದ್ಮಿನಿಯಲ್ಲೇ ಬರಿದಾಗಿರುವದಿಲ್ಲ. ಸೌಂದರ್ಯವೆಂಬುವದು ಒಂದೇರೀತಿಯು ಇರುವದಿಲ್ಲ. ಆದರೆ ನನ್ನ ಮನವನಾಕರ್ಷಿಸಿರುವಿವಳ ಸೌಂದರ್ಯವಂ ವಿವರಿಸುವಲ್ಲಿ ಅವಳಲ್ಲಿ ನನಗಿರುವಷ್ಟು ಅನುರಾಗ ಪರರಿಗೆ ಕಾಣಲಾರದು. ಮತ್ತು ಆಕೆಯಲ್ಲಿ ಕೆಲವು ಕುಂದಕಗಳಿರುವವು. ಅವುಗಳ ಉದ್ದೇಶವು ನನಗೆ ಮಾತ್ರ ತಿಳಿದಿರುವದು. ಅದು ತಿಳಿಯದ ನೀನು ಅವುಗಳನ್ನು ಕಂಡರೆ ತುಚ್ಛಿತವಾದವುಗಳೆಂದು ತಿಳಿದುಕೊಳ್ಳಬಹುದು. ಆಕೆಯು ಕೋಪಕ್ಕೆ ವಶವರ್ತಿಯಾಗುವಳು. ನೋಡುವದಕಂದವಾಗಿಯೂ, ಹಿಡಿಯಲಸಾಧ್ಯವಾಗಿಯೂ, ಕಾನನದಲ್ಲಿ ಮುಂದೃಷ್ಟಿಯು, ವಿಶ್ರಾಂತಿಯು ಇಲ್ಲದೆ ಚಂಚಲತೆಯಿಂದ ಹಾರಾಡುವ ಮಿಂಚುಹುಳದಂತೆ ; ವಾಕ್ಕೌಶಲ್ಯಗಳಲ್ಲಿ ಮನಸ್ಸಿಟ್ಟು, ನಮ್ರತೆಯಿಲ್ಲದೆ ಹಟವಾದಗಳಲ್ಲಿ ತೀವ್ರಮನಸ್ಸುಳ್ಳವಳೆಂದುದಂ ಕೇಳಿ:–ರವಿವರ್ಮನು:–ನೀನು ಹೇಳಿದ್ದು ಸತ್ಯ. ಆಕೆಯ ಗುಣದೋಷಗಳನ್ನು ಆಲೋಚಿಸಿದರೆ ಅವಳು ಅಂಕೆ ಇಲ್ಲದವಳಂತೆ ಕಾಣುತ್ತಾಳೆ. ನಿನ್ನನ್ನು ಬಹಳ ಬಗೆಯಾಗಿ ಪೀಡಿಸುವಂತೆ ಕಾಣುತ್ತೆ. ಆದರೆ ವಿವೇಕಶಾಲಿಯಾದ ನೀನು ಮೊದಲು ಹೇಳಿದಂತೆ ಸಕಲ ಸದ್ಗುಣಾತಿಶಯಗಳಿಂದಲೂ, ರೂಪಿನಿಂದಲೂ ಕೂಡಿರತಕ್ಕ ಪದ್ಮಿನಿಯಂಬಿಟ್ಟು ಕಮಲಿನಿಯಲ್ಲಿ ಮನಸ್ಸಿಡಲು ಕಾರಣವೇನೆನಲು;–

ರಾಮವರ್ಮನು ನಸುನಗುತ್ತಾ; ಅದಕ್ಕೆ ಕಾರಣವನ್ನು ಹೇಳಬೇಕೋ? ಲೋಕದಲ್ಲಿ ಮೋಹವೆಂಬುದನ್ನು ತೂಕದಿಂದಲೂ, ಅಳತೆಯಿಂದಲೂ, ಸಂಖ್ಯೆಯಿಂದಲೂ ಕೈಕೊಳ್ಳುವಹಾಗೆ ಆದಾಗ ನಾನು ನಿನಗೆ ಇದಕ್ಕೆ ಕಾರಣವಂ ಹೇಳುವೆನು. ಅದುವರೆಗೆ ಅವಳನ್ನು ಮೋಹಿಸಿದ್ದು ನನ್ನ ಅದೃಷ್ಟವೆಂಬದಾಗಿ ಹೇಳುವೆನು. ಅದರಿಂದ ಒಳ್ಳೇದಾಗುವದೋ ಅಥವಾ ಕೆಟ್ಟದಾಗುವದೋ ನನಗೆ ಇನ್ನೂ ಗೊತ್ತಿಲ್ಲ. ಆದರೆ ಪದ್ಮಿನಿಯಲ್ಲಿ ನೀನು ಮೋಹಗೊಂಡು ಅವಳನ್ನು ಯುವತಿಯಾಗಿ ಕೈಕೊಡಲೆಂದು ಪ್ರಾರ್ಥಿಸುವೆನು. ವೃದ್ಧನಾದ ವಲ್ಲಭರಾಯನಿಗೆ ಇವಳನ್ನು ವಿವಾಹ ಮಾಡಬೇಕೆಂಬದಾಗಿ ಮಲಬುದ್ಧಿಪದಿಂ ಕರತರುವರೆಂಬ ವರ್ತಮಾನವಿರುವದೆನಲು ;–ರವಿವರ್ಮನು ವಲ್ಲಭ

ರಾಯನು ತಕ್ಕ ವರನು! ಇವನಿಗೆ ಆ ಕಾರ್ಯಸಂಘಟಿಸಲಿ. ಪ್ರಪಂಚದಲ್ಲಿ ನೀತಿಯು, ಧರ್ಮವೆ, ವೃದ್ಧಿಯಾಗುವದನ್ನು ಸುಲೋಚನದ ಸಹಾಯದಿಂದ ನೋಡುತ್ತಿರುವ ನಿಷ್ಕಪಟಗಳಾದ ವೃದ್ಧರಲ್ಲಿ ಇವನ ಸಮಾನ ಯಾರು ಇಲ್ಲ. ಇವನಿಗೆ ಇದರಲ್ಲಿ ಸಂತೋಷವುಂಟಾಗಲೆಂದು ಹರಸುವೆನು. ನಾನು ಸಹ ಇವನ ನಡತೆಯನ್ನವಲಂಬಿಸಿ ನನಗೆ ಎಪ್ಪತ್ತು ವರುಷವಾದಾಗ್ಯೆ ಮದುವೆಗೆ ಪ್ರಯತ್ನ ಮಾಡುವೆನು. ಅದುವರಿಗೆ ಈಗ ಇರುವಹಾಗೆಯೆ ಇದ್ದುಕೊಂಡು ನನ್ನ ವಿಶ್ವಾಸವನ್ನು ಒಂದೇ ಪದಾರ್ಥದಲ್ಲಿ ನೆಲೆಗೊಳಿಸಿದೆ ; ಪ್ರಪಂಚದ ತಿರ್ಯಗ್ಜಂತುಗಳಲ್ಲು ಪ್ರೀತಿ ಇಡುವೆನು.

ಆ ಮಾತಿಗೆ ರಾಮವರ್ಮನು:–ಹಾಗೆ ಮಾಡುವ ನಾನು. ಅದರಿಂದಲೆ ತೃಪ್ತಿಯಾಗುವ ಕಾಲಕ್ಕೆ ಅದೇ ಸಾಕಾಗಿರುತ್ತೆ. ಆಗೋ ! ಅತ್ತಕಡೆ ನೋಡು. ದೋಣಿಯು ಎಷ್ಟು ಜಾಗ್ರತೆ ಬರುತ್ತಾ ಇರುವದು. ಕೂಡಲೆ ತೀರವನ್ನು ಸೇರುವದು. ಆಗೋ! ಇವರು ನಾವಿಲ್ಲಿರುವದನ್ನ ಕಂಡುಕೊಂಡು ಮಾತನಾಡಿಕೊಳ್ಳುತ್ತಾ ಇರುವರು. ನೀನು ಇವರನ್ನು ನೋಡಿದರೆ ಪದ್ಮಿನಿಯೆ ರೂಪವತಿಯನ್ನಬಹುದೆಂದು ಹೇಳುವಷ್ಟರಲ್ಲಿ; ಸಮೀಪಕ್ಕೆ ಬಂದ ದೋಣಿಯೊಳ್ಕುಳಿತಿದ್ದ ಪದ್ಮಿನಿಯ ರೂಪುಲಾವಣ್ಯಮಂ ನೋಡಿ ವಿಸ್ಮೃತನಾಗಿ ರವಿವರ್ಮನು;–ಅಲ್ಲಿ ಕಾಣಿಸತಕ್ಕ ಸ್ತ್ರೀಯು ಮಾನುಷಳಾಗಿ ಕಾಣುವದಿಲ್ಲ. ವಿಶ್ವಾಮಿತ್ರನಂ ವಂಚಿಸಲ್ಬಂದ ಊರ್ವಸಿಯೊ ! ಮಾರಹರನಂ ಮೋಹಿಸಲ್ಬಂದ ಮೋಹಿನಿಯೊ! ಮಾನುಷವೇಷದಿಂ ಬಂದಂತೆ ಕಾಣುವದೆಂದು ಭ್ರಾಂತಿಪಡುತ್ತಿರುವಷ್ಟರಲ್ಲಿ; ದಡಕ್ಕೆ ಬಂದ ದೋಣಿಯಂ ನಿಲ್ಲಿಸಿಕೊಂಡು ಹಸ್ತಲಾಘವದಿಂದವರೀರ್ವರಂ ತಡಿಯನ್ನೈದಿಸಿ; ಮಲಯಪತಿ ಕಳಿಂಗನಿಗೆ ಹಸ್ತವನ್ನಿತ್ತು ರಾಮವರ್ಮನು ;–ಸ್ವಾಮಿ ! ತಮ್ಮ ಆಗಮನವನ್ನು ವೀರಬಾಹುಮಹಾರಾಯರು ನಿರೀಕ್ಷಿಸುತಿದ್ದರೆನಲು; ಕಳಿಂಗನು:– ವೀರಬಾಹುಮಹಾರಾಯರು ಕರುಣಾಶಾಲಿಗಳು. ಮಕ್ಕಳಂದಿಗರಾದನಾವು, ಅವ ರಸಾನ್ನಿಧ್ಯವನ್ನಗಲಿ, ರಾಜಕಾರ್ಯವೆಂಬಿಟ್ಟು, ಸ್ವಕಾರ್ಯದಮೇಲೆ ಆಗಿಂದಾಗ್ಯೆ ಹೀಗೆ ಹೋಗಬೇಕಾಗುತ್ತೆ ಮಾಡತಕ್ಕದ್ದೇನೆಂದು : ಚಾರರಂ ಕರೆದು ;–ನೀವುಗಳು ಜಾಗ್ರತೆ ಸಾಮಾನುಗಳನ್ನು ತೆಗೆದುಕೊಂಡು ಬರುವರಾಗಿ ನಾವು ರಾಜಸಭೆಯನ್ನು ಕುರಿತು ತೆರಳುವೆವೆನುತ ತವಕಿಸುತ್ತಿದ್ದನು.

ಕಮಲಿನಿಯು ;–ಕೃಪಾಳುವಾದ ಸಮುದ್ರವೆ ! ನಿನ್ನ ಅಪ್ಪಣೆಯನ್ನು ತೆಗೆದುಕೊಳ್ಳುವೆನು. ಭೂಮಿಯು ನಿನ್ನಂತೆಯೇ ಇರಲೆಂದು ಪ್ರಾರ್ಥಿಸಿ ಕಾಲಿಡುವೆನೆಂದುಪಂ

ರಾಮವರ್ಮನು ಕೇಳಿ; ಎಲೈ ನಾರೀ ಶಿರೋಮಣಿಯೇ! ಭೂಮಿಯಸಂಗಡವೇನೋ ಕಲಹವಿರುವಂತೆ ಕಾಣುತ್ತೆ. ಪೃಥ್ವಿಯ ಗುಣಾತಿಶಯಗಳು ಕಡಲಿಗಿಂತ ಕಡಮೆಯಾದವೆ ಎನಲು ;—ಕಮಲಿನಿಯು ; ಸ್ವಾಮಿ ! ಭೂಮಿಯಲ್ಲಿ ಮನುಷ್ಯರು ವಾಸವಾಗಿರುವರು ; ಸಮುದ್ರದಲ್ಲಿ ಮೀನುಗಳಿರುವವೆಂದು ಹೇಳಿ ಮುಂದಕ್ಕೆ ತೆರಳಿದಳು.

ಆಗ ಮನೋಜನಾಡಂಬರಕ್ಕೆ ವಶವರ್ತಿಯಾಗಿ ಮುಂದರಿಯದೆ, ಆಕಾರಮಾತ್ರ ಎದುರಾಗಿರುವ ಪದ್ಮಿನಿಯಂ ಜಾಗ್ರತೆ ಹೊರಡುವಳಾಗು. ಇದೇನು ! ನಿಂತಲ್ಲೇ ನಿದ್ದೆ ಮಾಡುವಂತೆ ಕಾಣುವದೆಂದು ಅವಸರಿಸಿ ; ಪಾರ್ಶ್ವದಲ್ಲಿದ್ದ ರವಿವರ್ಮನಂ ಕಳಿಂಗನು ಕಂಡು ; ಅದ್ಯಾರು ಕಾಮರೂಪರಾಯರಲ್ಲವೆ ? ಕ್ಷಮಿಸಬೇಕು. ಪ್ರಯಾಣದ ತ್ವರಿತದಿಂತಾವಿಲ್ಲಿದ್ದದ್ದು ಕಾಣಲಿಲ್ಲ. ಆರೋಗ್ಯವಾಗಿರಬಹುದೆಂದು ತೋರುತ್ತೆ. ಯಾವ ನವು ಥಾರಾಢ್ಯವೂ ಹೋದನಂತರ ಅವುಗಳಬೆಲೆ ನಮ್ಮಂಥಾವರಿಗೆ ಗೊತ್ತಾಗುತ್ತೆ. ವೃದ್ಧಾಪ್ಯದಲ್ಲಿ ಅವುಗಳನ್ನು ಕೊಂಡಾಡುವೆವು. ದೈವಾನುಗ್ರಹದಿಂದ ಸುರಕ್ಷಿತವಾಗಿ ಪ್ರಯಾಣ ಬೆಳಸಿದೆವು. ಇನ್ನು ಮುಂದೆ ರಾಜಾಸ್ಥಾನವಂ ಕುರಿತು ತೆರಳುವೆವೆಂದುಹೇಳಿ; ಪದ್ಮಿನಿಯ ಕಡೆ ಪುನಃ ತಿರಗಿನೋಡಿ, ಅವಳು ನಿಂತಲ್ಲೇ ನಿಂತಿರುವದಂಕಂಡು ; ಕೋಪಿಸಿಕೊಂಡು, ಇತ್ತಕಡೆ ಬರುವಳಾಗು, ನಿನಗೇನು ಸ್ವಪ್ನವೋ ? ಜಾಗ್ರತೆ ಹೊರಡೆಂದು ಹೇಳಿ, ಪುನಃ ರವಿವರ್ಮನಂ ಕುರಿತು ;—ಸ್ವಾಮಿ! ಕಾರ್ಯಾರ್ಥವಾಗಿ ರಾಜಾಸ್ಥಾನಕ್ಕೆ ಬಂದಾಗ್ಯೆ ಕಳಿಂಗನ ಜ್ಞಾಪಕವಿರಲಿ ನಾವು ಮುಂದೆ ತೆರಳುವೆವು ಅಪ್ಪಣೆಯಾಗಲೆಂದುದಕ್ಕೆ: ಪರವಶನಾಗಿ ಕಳವಳಪಡುತ್ತಿರುವ ರವಿವರ್ಮನು ಮಾತನಾಡಲು ತೋಚದೆ; ಮಲಯರಾಯರಿಗೆ ವಂದಿಸುವೆನೆಂದನು.

ಕಳಿಂಗನು, ರಾಮವರ್ಮ, ಪದ್ಮಿನಿ, ಕಮಲಿನಿಯರಿಂದೊಡಗೂಡಿ ಚಂದ್ರನಗರವಂ ಪ್ರವೇಶಮಾಡಿದನಂತರ ಕಡಲತಡಿಯೊಳೊಬ್ಬನೇ ಇದ್ದ ರವಿವರ್ಮನು ಭ್ರಾಂತಿಯಡಗಿ ಎಚ್ಚತ್ತುಕೊಂಡು; ನಾನು ಹುಚ್ಚನಂತ ಮಾತನಾಡಿದೆನು. ನನ್ನ ಮನಸ್ಸಿಗೆ ಹಾಗೆ ತೋಚಿತು. ಹಾಗೆಯೇ ಪರರಿಗೂಕಂಡಿರಬಹುದು. ನನ್ನ ಹೃದಯವು ಪರವಶವಾಗುವದು ಮಾತ್ರವಲ್ಲದೆ; ನನ್ನ ತಿಳುವಳಿಕೆ ಸಹಾ ಕೆಡುವದುಂಟೆ. ನನ್ನ ಅವಸ್ಥೆಯಂ ನೋಡಿದವರು ; ನನಗಿಂತಲೂ ವಲ್ಲಭರಾಯನು ಮನೋರಂಜಕನು, ರಸಿಕನು, ಉಲ್ಲಾಸಿಯು ಆದಸ್ತ್ರೀಲೋಲನಾಗಿ ಕಾಣುತ್ತಿರಬಹುದು. ಪುನಃ ಸಂಧಿಸಬಹುದಾಗಿ ಕಾಣುತ್ತೆ. ಪ್ರಾಯಶಃ ನಾಳೆಯೇ ಆಗಬಹುದು ಆವಾಗ, ಇಂದಿನ ಮಂದಮತಿಯಂ ಬಿಟ್ಟು, ನನ್ನ

ಸ್ವಭಾವ ಚಿತ್ತದಿಂ ಕಾಣಿಸಿಕೊಳ್ಳುವೆನು. ಈಗ ನಾನು ಕಾಣಿಸಿಕೊಂಡದ್ದು ನನ್ನಸಾಮಾನ್ಯ ಸ್ವಭಾವವಲ್ಲ. ಇದನ್ನು ಚಂದ್ರನಗರದ ನಿವಾಸಿಗಳೆಲ್ಲರು ಬಲ್ಲರು. ನನ್ನ ಮನಸ್ಸಿನಲ್ಲಿ ಈಗ ತಲೆದೋರುತ್ತಿರುವ ಉಲ್ಲಾಸವು, ನನ್ನ ಸ್ವಭಾವವನ್ನು ಪ್ರಕರಿಸುವದು. ಎಲೈ ಅಭಿಲಾಷೆಯೆ! ಎಲೈ ಆನಂದವೆ! ನನ್ನ ಒಡಹುಟ್ಟುಗಳಾದ ನೀವು ಸೂರ್ಯನನ್ನಗಲದೆ ಇರುವತೇಜಸ್ಸಿನಂತೆ ನನ್ನನ್ನು ಯಾವಾಗಲು ಕೈಬಿಟ್ಟದ್ದಿಲ್ಲ, ಈಗಲೂ ಬಿಡತಕ್ಕವರಲ್ಲ. ನನ್ನ ಜಡಬುದ್ಧಿಯು ಜರಗಿಹೋಯಿತು. ಮುಗಿಲಿನಿಂದಲೂ, ಮಂಜಿನಿಂದಲೂ ಮರೆಯಾಗಿದ್ದು ಅವುಗಳ ನಿವಾರಣೆಯಿಂದ ಪ್ರಕಾಶಿಸುವ ಇಂದ್ರಚಾಪವು, ಗಗನದಲ್ಲಿ ಪ್ರಜ್ವಲಿಸಿ ಪ್ರಪಂಚವಂ ವರ್ಣಮಯವಮಾಡುವಂತೆ ಭ್ರಾಂತಿಯಿಂ ಬಿಡುಗಡೆಯಾಗಿರುವೆನು. ಈ ಲೋಕವು ಇಂದ್ರಲೋಕದಿಂದ ತಪ್ಪಿಸಿಕೊಂಡು ಬಂದಿರುವಿದೊಂದು ಪ್ರಾಣಿ ಇರುವವರಿಗೆ, ನನ್ನನುಭವಕಿಂತಲು ಹೆಚ್ಚಾದ ಭಾಗ್ಯವುಳ್ಳದ್ದಾಗಿರುವದು. ಈ ಲೋಕವು ಸ್ವರ್ಗಕ್ಕಿದೊಂದುಗವಾಕ್ಷಿ ಇರುವದರಿಂದ ನನಿಗೆ ತಿಳಿದಿರುವದಕ್ಕಿಂತ ಹೆಚ್ಚಾದಕಾಂತಿಯುಳ್ಳದ್ದಾಗಿರುವದು. ಎಲೈ, ಜೀವಾತ್ಮನೆ! ಇಂದಿನಾರಭ್ಯ ನಿನಗಿದೊಂದು ಉದ್ದೇಶವು ಅವಲಂಬನೆಯು ಇರುವದೆಂದು ಆಲೋಚಿಸುತ್ತಾ ಚಂದ್ರನಗರಾಭಿಮುಖನಾದನು.

ದ್ವಿತೀಯಾಶ್ವಾಸ.

ಅನಂತರದಲ್ಲಿ ರವಿವರ್ಮನು ಮಲಯರಾಯನ ಪುತ್ರಿಯಲ್ಲಿ, ಸೋತಮನಸ್ಸುಳ್ಳವನಾಗಿ, ಸ್ಥೈರ್ಯಕೆಟ್ಟು ಪದ್ಮಿನಿಯನ್ನು ಎಂದಿಗೆ ಕಾಣುವೆನು, ಇವಳಲ್ಲಿ ಯಾವಾಗ ಮಾತನಾಡುವೆನು, ಇವಳನ್ನು ವರಿಸತಕ್ಕ ಬಗೆಯಾವದೆಂದು, ನಾನಾತೆರದಿಂ ಹಂಬಲಿಸುತ್ತ ಮಾರ್ಗತೋರದೆ ;—ಬಳ್ಳೇದು ವಸಂತಮಾಧವನಹಬ್ಬ ಸಮೀಪವಾಯಿತು ; ಆ ದಿವಸ ಧಾತ್ರೀಹವನವಂ ಮಾಡಿಸಿ, ನರ್ತನ ಗಾನ ನಾಟಕ ಮುಂತಾದ ವಿನೋದವನ್ನಳವಡಿಸಿ ಆದರಿಂದೀ ಚಂದ್ರನಗರದ ರಾಜಮಂಡಲಕ್ಕೆ ಔತಣವಂ ಮಾಡುವೆನು. ಆ ಔತಣಕ್ಕೆ ಕಳಿಂಗನು ತನ್ನ ಪುತ್ರಿ ಸಮೇತನಾಗಿ ಬರುವನು, ಆಗ್ಯೆ ನನ್ನ ಅದೃಷ್ಟವಿದ್ದಂತಾಗಲೆಂದು, ಆಲೋಚಿಸಿ ಚಂದ್ರನಗರದಲ್ಲಿರತಕ್ಕ ತನ್ನ ಕುಮಾರಭವನವೆಂಬರಮನೆಗೆ ಸೇರಿದ ಉದ್ಯಾನವನವಂ ಶೃಂಗರಿಸಿ, ರಾಜಾರ್ಹವಾದನೇಕ ನೂತನವಾದ ಬಿಡಾರಂಗಳಂ

ಮಾಡಿಸಿ, ಲತಾಗೃಹಂಗಳನ್ನಲಂಕರಿಸಿ ; ನರ್ತನ, ಗಾನ, ನಾಟಕ, ಶಾಲೆಗಳಿಗೆ ಬೆಳ್ಳಿ ಮಂಟಪಂಗಳಂ ರಚಿಸಿ ; ಸೋಪಾನಪಂಙ್ಕ್ತಿಗಳಂ ನಿರ್ಮಿಸಿ ; ವಿಶ್ರಾಂತಿಗೋಸುಗ ಗುಪ್ತಸ್ಥಳಗಳನ್ನಡವಳಿಸಿದಾವುದ್ಯಾನವು, ಖಾಂಡವವನದಂತೆ ಪ್ರಕಾಶಿಸುತ್ತಿತ್ತು.

ವೀರಬಾಹು, ವಲ್ಲಭ, ಮಲಯ, ಮುಂತಾದ ವಿಶಿಷ್ಟನರಪತಿಗಳು ತಮ್ಮತಮ್ಮ ರಾಣಿವಾಸ ಸಮೇತರಾಗಿ, ರವಿವರ್ಮನಿಂದೊಡಗೂಡಿ ಅಂದಿನ ಭೋಗಾಸಕ್ತರಾಗಿಬಂದು ಉದ್ಯಾನದಲ್ಲಿ ಬಿಹಾರಂಗೊಳ್ಳುವಸಮಯದಲ್ಲಿ ; ವೀರಬಾಹುಮಹಾರಾಯನು ;—ಎಲೈ ಕಾಮರೂಪನೆ ! ಮಾರ್ಗದಲ್ಲಿ ಬರುವಾಗ್ಯೆ ಶಪಥವಂ ಮಾಡಿಕೊಂಡು ನಾವಿಬ್ಬರು ನಮ್ಮ ಕುದುರೆಗಳನ್ನು ಕಂದಕದ ಮೇಲೆ ಹಾರಿಸಿದೆವಷ್ಟೆ ; ನಿನ್ನ ಕುದುರೆ ನಿರಾತಂಕವಾಗಿ ಹಾರಿದ್ದರಿಂದ ನಿನಗೇನು ಬಹುಮಾನ ಉಂಟಾಗಲಿಲ್ಲ. ನನ್ನ ಕುದುರೆ ಹಿಮ್ಮೆಟ್ಟಿದ್ದರಿಂದ ನನಗೇನೂ ಅವಮಾನವಾದಹಾಗೆ ಕಾಣುವದಿಲ್ಲ ನನ್ನನ್ನು ನೋಡಿ ಸ್ತ್ರೀಯರೆಲ್ಲಾ ಪಶ್ಚಾತ್ತಾಪಪಟ್ಟರೇ ಹೊರ್ತು, ನಿನ್ನನ್ನು ನೋಡಿ ಯಾರೂ ಮೆಚ್ಚಿದಹಾಗೆ ಕಾಣುವದಿಲ್ಲ. ನನ್ನ ಕುದುರೆ ಎಡವಿದ್ದನ್ನು ಕಂಡು ಯಾರೋ ಒಬ್ಬ ನಾರಿಯು ಅತ್ಯಂತ ಕನಿಕರಧ್ವನಿಯಿಂದ ಕೂಗಿಕೊಂಡಳು. ಅವಳು ನಿನಗೆ ಗೊತ್ತಿರುವದೇ ಏನಲು ;—

ರವಿವರ್ಮನು ;—ಸ್ವಾಮಿ ! ಆಕೆಯು ತಮ್ಮ ಆಸ್ಥಾನದ ವೈದ್ಯಶ್ರೇಷ್ಠನಾದ ಸುಬಾಹುವಿನ ಪುತ್ರಿ, ಕನ್ಯಾಶಿರೋಮಣಿಯಾದ ಕೈರವೇಯು. ಆಕೆಯ ವಿಷಯವು ನಮ್ಮ ರಾಮವರ್ಮರಾಯರಿಗೆ ನನಗಿಂತಲೂ ಚೆನ್ನಾಗಿಗೊತ್ತಿದೆ. ಆಕೆಯು ಸಂಗೀತದಲ್ಲಿ ಪ್ರೌಢಳು, ಆಕೆಯಗಾನವನ್ನು ಕೇಳಲು ಅವಳ ಮನೆಗೆ ಅವರು ಪದೇಪದೆ ಹೋಗುವದುಂಟೆಂದನು.

ರಾಮವರ್ಮನು ;—ಸ್ವಾಮಿ ! ರವಿವರ್ಮರಾಯರು ಹೇಳಿದ್ದುನಿಶ್ಚಯ. ಈಕೆಯ ವಿಷಯ ನನಗೆ ಕೊಂಚಗೊತ್ತುಂಟು. ಈಕೆಯು ಇನ್ನೂ ಪೂರ್ವವಯಸ್ಸಿನವಳು ಗಾನಲೋಲಳು. ವಿದ್ವಾಂಸರೆನ್ನಿಸಿಕೊಂಡಿರುವವರಲ್ಲಿ ಕೆಲವರು ಹಾಡಿದ್ದನ್ನು ಕೇಳಿರುತ್ತೇನೆ ; ಆದರೆ ಈಕೆಯ ಗಾನದಲ್ಲಿರುವಷ್ಟು ಸ್ವಾರಸ್ಯ ಅವರಲ್ಲಿ ನನಗೆ ಕಾಣಲಿಲ್ಲ : ಇವಳು ಸ್ವತಂತ್ರವಾಗಿ ತೊಡಕಿಲ್ಲದೆ, ರಾಗದ ಧಾಟಿಯನ್ನು ಹಿಡಿದು ಹೋಗುವ ಉಲ್ಲಾಸದಲ್ಲಿ ತನ್ನನ್ನು ತಾನು ಮರೆತಂತೆ ಕಾಣುವದು. ಇವಳ ಶಾರೀರವೋ ಕೇಳಿದವರಿಗೆ ದೇಹಸಂಕಟವಂ ಮರಿಸುವದು ; ಆಲಸ್ಯವಂ ನೀಗಲಾಡಿಸುವದು, ಮನವಂನೋವು ಇಟ್ಟ

ಟಿ

ಣಿಕಿನೋಡಲಸಾಧ್ಯವು, ಕ್ಲೇಶವು ಸ್ವರಮಾಧುರ್ಯಗತಿಯನ್ನವಲಂಬಿಸಿ ಮನೋಹರವಾದ ಶಾರೀರಧ್ವನಿಗೆ ಮರಳಾಗುವದು. ಈಕೆಯ ಸೂಕ್ಷ್ಮವಾದ ಧ್ವನಿಯಲ್ಲಿ ಮನುಷ್ಯನ ಇಂದ್ರಿಯಗಳನ್ನು ಕರಗಿಸತಕ್ಕ ಶಕ್ತಿ ಎಷ್ಟಿದೆಯೋ ಹೇಳಲಸಾಧ್ಯವೆನಲು ; ವೀರಬಾಹುಮಹಾರಾಯನು ;—ಈಕೆಯ ಪ್ರಶಂಸೆಯೆ ಇಷ್ಟು ಚೆನ್ನಾಗಿದೆ, ಇವಳು ಹ್ಯಾಗಿರುವಳೊ ಎಂದು ; ಎಲೈ ರಾಮವರ್ಮನೆ ! ನಮ್ಮ ಸುಬಾಹುವಿನ ಪುತ್ರಿಯು ಇಷ್ಟು ಪ್ರಾಜ್ಞಳಾದರೆ ಈದಿನದ ವಿನೋದವು ಈಕೆಯ ಗಾನ ಲೋಪದಿಂದಲ್ಪವೆನಿಸದಂತೆ, ಈಕೆಯನ್ನು ಆಸ್ಥಾನಕ್ಕೆ ಕರೆದುಕೊಂಡು ಬರುವನಾಗೆಂದು ಕಳುಹಿಸಿ ; ರವಿವರ್ಮನಂ ಕುರಿತು ;—ಎಲೈ! ನೀನು ನಿನ್ನ ಅತಿಥಿಗಳಂ ಸತ್ಕರಿಸುವನಾಗು: ನಾವು ನಮ್ಮ ಕೋಟಾಧೀಶ್ವರನಾದ ಕಳಿಂಗರಾಯನಲ್ಲಿ, ಮಾತನಾಡತಕ್ಕ ವಿಷಯಗಳಿರುವವು. ಆದರಿಂದ ನಿನಿಗೆ ಕೊಂಚ ಪ್ರಯೋಜನ ಉಂಟಾದೀತೆಂದು ; ಆತನನ್ನು ಕಳುಹಿಸಿ, ತನ್ನ ಕಡೆಗೆ ನೋಡಿದ ರಾಯನಂ ಕುರಿತು ; ಕಳಿಂಗನು ;—

ಸ್ವಾಮಿ ! ಈ ಕಾಮರೂಪಾಧಿಪನು ಸನ್ಮಾರ್ಗಾವಲಂಬನೆಯನ್ನು ಮಾಡಿದವನಾದರೆ ತಮ್ಮ ಪಾದಾರವಿಂದಗಳಿಗೆ ಪ್ರಯೋಜನಕರವಾದ ಕಾರ್ಯಗಳನ್ನು ಮಾಡತಕ್ಕ ಶಕ್ತನು. ಆದರೆ ಇವನ ಈಗಿನ ಸ್ಥಿತಿಯನ್ನು ನೋಡಿದರೆ ತಮ್ಮ ಆಸ್ಥಾನಕ್ಕೆ, ಪುರ ದ್ವಾರದಲ್ಲಿರತಕ್ಕ ಬಾವುಟದಂತೆ, ಅಲ್ಪವಾಗಿಯೂ ಅಂದವಾಗಿಯೂ ಇರುವನು. ಈ ದಿನದ ಉತ್ಸವವನ್ನೇ ಪರಾಂಬರಿಸಬಹುದು. ಇದರಿಂದ ಪ್ರಭುಗಳಿಗೆ ಕೊಂಚ ಸಂತೋಷ ಉಂಟಾಗುವದೊಂದು ಹೊರ್ತು ಉಳಿದ ವಿಷಯಗಳಲ್ಲಿ ವ್ಯರ್ಥವಾದದ್ದೆನಲು ; ವೀರಬಾಹುಮಹಾರಾಯನು ;—ಎಲೈ ಕಳಿಂಗನೇ ! ಈದಿನದ ಉತ್ಸವವು ನನ್ನ ಸಂತೋಷಾರ್ಥವಾಗಲ್ಲ, ಮತ್ತೊಬ್ಬರ ಮರ್‍ಯಾದಾರ್ಥವಾಗಿ. ಆಕೆಯು ಇದರಲ್ಲನುಗ್ರಹಿಸಿಡುವಳೆಂದು ಕೋರುವೆನು. ಎಲೈ ರಾಜೋತ್ತಮನೆ! ಬಂದುತಿಂಗಳಿಂದಲೂ, ನಿನ್ನ ಪುತ್ರಿ ಪದ್ಮಿನಿ ಚಂದ್ರನಗರಕ್ಕೆ ಬಂದಲಾಗಾಯಿತು, ಈಕೆಯಂ ಕುರಿತು ನಿನ್ನ ಸಂಗಡ ಮಾತನಾಡಬೇಕೆಂಬ ಉದ್ದೇಶವಿರುವದು. ಇವಳು ಮನೋಹರಳಾಗಿಯೂ, ನಮ್ರಳಾಗಿಯೂ, ವಯಸ್ಸಿಗೆ ಮೀರಿದ ಲಾವಣ್ಯದಿಂದಲೂ, ವೈಭವದಿಂದಲು ಕೂಡಿದ ಕನ್ಯಾರತ್ನವಾಗಿರುವಳು. ಇವಳ ರೂಪುಲಾವಣ್ಯವನ್ನೂ ವಯಸನ್ನೂ ನೋಡಿದಲ್ಲಿ ಈಕೆಗೆವಿವಾಹಪ್ರಯತ್ನವನ್ನು ಮಾಡಬೇಕೆಂಬದಾಗಿ ಎಂಥವರಿಗೂ ಮನಸ್ಸುಂಟಾಗುವದು. ಈಕೆಯ ರೂಪಿಗೆ ತಕ್ಕ ವರನನ್ನು ಸಂಪಾದಿಸುವದು ಸುಲಭ ಸಾಧ್ಯವಾಗಿ ಕಾಣುವದಿಲ್ಲವೆನಲು ; ಕಳಿಂಗನು ;—

ಮಹಾಸ್ವಾಮಿಯವರ ಅಪ್ಪಣೆಯು ಪ್ರಾಮಾಣಿಕವು. ಪ್ರಭುಗಳಿಗೆ ರಾಜತಂತ್ರದಲ್ಲೂ ಸಾಮಾನ್ಯ ಗೃಹಕೃತ್ಯದಲ್ಲಿಯೂ ಒಂದೇಸಮನಾದ ವಿವೇಕಉಂಟು. ಪಶುಪ್ರಾಯನಾದ ನಾನುಸಹ ಈ ವಿಷಯವನ್ನು ಆಲೋಚಿಸಿ ಆಕೆಗೆ ವರನನ್ನು ಗೊತ್ತುಮಾಡಿರುವೆನು. ರಾಜಾಧಿರಾಜರಾದ ತಮ್ಮ ಚಿತ್ತಕ್ಕೆ ನಾನು ನಿಷ್ಕರ್ಷಿಸಿರುವ ವರನುಗೊತ್ತಿರಬಹುದು. ಇವನಿಗಿಂತ ಉತ್ತಮನಾದವನು ಮತ್ಯಾರು ಇಲ್ಲನೆಂದುಪಾದಕ್ಕೆ ವೇದ್ಯವಾಗಿರುತ್ತೆಂದ; ಕಳಿಂಗನಂಕುರಿತು ;—

ಹೌದಯ್ಯಾ ನನಗೆ ಗೊತ್ತುಂಟು. ನೀನುವುದ್ದೇಶಿಸಿರುವ ವಲ್ಲಭಪತಿಯಾದ ಸುರೇಂದ್ರರಾಯನು, ಅಸಮಾನನಾದ ಯೋಗ್ಯನು, ಐಶ್ವರ್ಯವಂತನು ಹೌದು ; ಆದರೆ ಆತನ ವಯಸ್ಸು ಎಪ್ಪತ್ತುವರ್ಷಗಳಿಗೆ ಸಮೀಪವಾಗಿರುವದು. ಈಗ ಆತನ ಕೈಸೇರಿದವಳು ವೇಚಾಟವೂ, ವ್ಯಸನವೂ ಪಡಬೇಕಲ್ಲದೆ ಸುರೇಂದ್ರರಾಯನಲ್ಲಿ ಯಾವ ಸುಖವನ್ನೂ ಅನುಭವಿಸುವದಿಲ್ಲ. ಅದುಮಾತ್ರವಲ್ಲದೆ ಈ ನಾರೀಮಣಿಯು ಇಷ್ಟು ಗುಣಶಾಲಿನಿಯಾಗಿಯೂ ಬುದ್ಧಿವಂತೆಯಾಗಿಯೂ ಇರುವದರಿಂದ ಈಕೆಯ ಇಷ್ಟವನ್ನೂ, ಮನದಭಿಪ್ರಾಯವನ್ನೂ ತಿಳಿದು ಅವುಗಳಲ್ಲಿ ಗೌರವವಿಡಬೇಕೆಂಬ ರಾಯನಂ ಕುರಿತು ಕಳಿಂಗನು;—

ಪಾದದಲ್ಲಪ್ಪಣೆ ಕೊಡಿಸಿದ ಆಕ್ಷೇಪಣೆಯಲ್ಲಿ ಗುರುತ್ವವಿರುವದರಲ್ಲಿ ಸಂದೇಹವಿಲ್ಲ. ಆದರೆ ಪ್ರಕೃತದ ಕಾರ್ಯವು ಇಂಥಾ ಆಕ್ಷೇಪಣೆಗೆ ಗುರಿಯಾದದ್ದಲ್ಲ. ಆಕೆಯ ಇಷ್ಟಾನುವರ್ತಿಯಾಗಿರುವದೇ ನನಗೆ ಕರ್ತವ್ಯವೆಂದು ತಿಳಿದಿರುವೆನು. ಹೆಂಡತಿಯೆಂದುಗಸರಿಟ್ಟು, ದಂಡುಗಾರಿಕೆಗೆ ಗಂಟು ಕೊಡಿಸಿಕೊಂಡವಳ ಗಂಟುಕರಗಿಸಿ, ಭ್ರಾಂತಿಯಡಗಿ ನಂಬಿಡುವಹರೆಯದ ಮೋಜುಗಾರ್ರನ್ನು, ತೀವ್ರಮನಸ್ವಿಗಳನ್ನು, ಕಂಡರೆ ಎಚ್ಚರವಾಗಿರೆಂದವಳಿಗೆ ಜನ್ಮಾರಭ್ಯ ತಿಳಿಸಿರುವೆನು. ದೃಢವಾದ ವಿಶ್ವಾಸನು ವಯಸ್ಸಾದವರಲ್ಲಿ ಮಾತ್ರವಿರುವದೆಂದು ಉಪದೇಶಿಸಿರುವೆನು. ಅವಳು ವಿವೇಕಶಾಲಿಯು ಬುದ್ಧಿವಂತೆಯು, ಆದ್ದರಿಂದ ವೃದ್ಧರ ವಿಶ್ವಾಸವನ್ನೇ ಅಪೇಕ್ಷಿಸುತ್ತ ಅವರ ಪ್ರೀತಿಯಲ್ಲೇ ಸಂತುಷ್ಟಳಾಗುವಳೆಂದ ಕಳಿಂಗನಂಕುರಿತು, ವೀರಬಾಹುಮಹಾರಾಯನು ;—ಇವಳು ಹಾಗೆ ಇಥಾಳಲ್ಲವೆ ? ಆದರೆ ನಿನ್ನ ಪುತ್ರಿಯ ವಿಷಯವಾದ ನನ್ನ ಅನುಭವವು, ವಿವೇಕವು, ಕಾರ್ಯೋಚಿತವಾದದ್ದಲ್ಲವಾಗಿರಬೇಕು ; ಅಲ್ಲದಿದ್ದರೆ ಪದ್ಮಿನಿಯು ವಿಶ್ವಾಸದಲ್ಲಿ ಸುರೇಂದ್ರರಾಯನಿಲ್ಲವೆಂಬದಾಗಿ ಹೇಳಬೇಕು.

ಸ್ವಾಮಿ! ಪಿತೃವಿನ ಎಚ್ಚರಿಕೆಯು ಇತರರ ವಿವೇಕಕ್ಕಿಂತಲು ದೊಡ್ಡದು ಅಲ್ಲದಿದ್ದರೆ ತಮಿಗೆ ಅನುಭವಸಾಲದೆಂಬದಾಗಿ ಹೇಳತಕ್ಕ ಶಕ್ತನಲ್ಲವೆಂದ ಕಳಿಂಗನಿಗೆ; ಇದೇನೈಯ್ಯಾ! ಇವಳೆ ತನ್ನ ಮನಃಪೂರ್ವಕವಾಗಿ ಸುರೇಂದ್ರರಾಯನನ್ನು ಅಪೇಕ್ಷಿಸಿರುವಳೆ? ಎಂದ ರಾಯನಂಕುರಿತು:—ಇವಳು ಅವನಲ್ಲಿ ದೃಢಚಿತ್ತಳು, ಸಂಪೂರ್ಣತೆಯು ಉಳ್ಳವಳಾಗಿ ಥಾಳೆ. ಆತನನ್ನು ಮರೆಸತಕ್ಕದ್ದು ನನಿಗೆ ಅಸಾಧ್ಯವಾಗಿರುವದೆನಲು; ರಾಯನು; ಇದ್ದ ಆಶ್ಚರ್ಯವೆಸರಿ. ನೀನು ತಿಳದಿರುವನಾಗು. ಇವಳ ಕಟಾಕ್ಷವು ಮತ್ತೊಬ್ಬನ ಕಡೆಗೆ ತಿರಗಿರುವದೆಂದು ಪ್ರಮಾಣವಾಗಿ ಹೇಳುವೆನು. ಇವಳ ದೃಷ್ಟಿಯಲ್ಲಿ ರವಿವರ್ಮನಿರುವನೆನಲು; ಕಳಿಂಗನು:—ಇದುಮಾತ್ರ ಅಸಾಧ್ಯವು. ನಾನು ಮೊದಲಿಂದಲೂ ಯಾರನ್ನಬೇಕಾದರೂ ಮದುವೆಯಾಗಬಹುದು. ಇವನನ್ನಮಾತ್ರ ಕೂಡದೆಂದು ಎಚ್ಚರಿಸುತ್ತಾ ಇರುವೆನು. ಆತನ ಐಶ್ವರ್ಯವು, ಒಂದಾನೊಂದು ಕಾಲದಲ್ಲಿ ಅಪರಿಮಿತವಾಗಿತ್ತು. ಅಪರಿಮಿತವಾದ ದುಂದುಗಾರಿಕೆಯಿಂದ ಅದನ್ನೆಲ್ಲ ಘಳಿಯಲ್ಲಿ ತೂರುಬಿಟ್ಟನು. ಇವನ ಕಾಮರೂಪದೇಶದ ಗ್ರಾಮಗಳೆಲ್ಲ ಅವುಗಳ ಬೆಲೆ ಮೀರಿ, ಅದ್ಭುತವಾದ ಸಾಲಕ್ಕೆ ಸುರೇಂದ್ರರಾಯರಿಗೆ ಆಧಾರವಾಗಿರುವವು. ಇವು ವಿನಹ ಮತ್ತಿನ್ನೇನು ಇತ್ತೊ ಅವುಗಳು ಯಾರ್‍ಯಾರೊ ವರ್ತಕರ ಪಾಲಾಗಿರುವದು. ಇವನ ಪಿತರಾರ್ಜಿತವಾದ ಕೊಂಚ ದ್ರವ್ಯವು ಸಿಹ್ಮಳದ್ವೀಪದಿಂದ ಹಡಗಿನಲ್ಲಿ ಬರುತ್ತಾ ಇರುವದು. ಇದರಿಂದ ಈತನಿಗಿರತಕ್ಕ ಸಾಲವನ್ನು ತೀರಿಸಬಹುದು. ಆದರೆ ಇವನು ಇದನ್ನು ಸಾಲವನ್ನು ತೀರಿಸುವದಕ್ಕಾಗಿ ತರಿಸುವದಿಲ್ಲ. ಇದು ಎಷ್ಟು ಜಾಗ್ರತೆ ಬರುವದೊ, ಇದನ್ನು ಅಷ್ಟು ಜಾಗ್ರತೆಯಾಗಿ ಒಂದೆ ದಿವಸದಲ್ಲಿ ದುಂದುಮಾಡಿ ಕಳದುಕೊಳ್ಳುವನು. ಈ ದಿವಸದ ದುರ್ನ್ಯಾಯವನ್ನೆ ಮಹಾಸ್ವಾಮಿಯವರು ಪರಾಂಬರಿಸತಕ್ಕದ್ದು. ತಮ್ಮ ಮಿತ್ರನೆಂದು ತಿಳದು ಈ ರೀತಿ ಇವನನ್ನು ನಾನೂ ಹೇಳನಂಗೈವದಂ ಮನ್ನಿಸಬೇಕೆಂದು ಪ್ರಾರ್ಥಿಸುವೆನು. ಇಂತಾ ತೇವೆಯ ವಾತವಸ್ತ್ರಗಳಿಂ ಕೂಡಿರತಕ್ಕ ದೋಣಿಯೊಳು ಬಿರುಘಾಳಿಯಂ ಲಕ್ಷಿಸದೆ ನನ್ನ ಪುತ್ರಿಯಂ ಪ್ರಯಾಣಮಾಡಲು ಬಲಾತ್ಕರಿಸತಕ್ಕದ್ದು ಪಾಪಕೃತ್ಯವಲ್ಲವೆ? ಅಪ್ಪಣೆ ಕೊಡಿಸುವರಾಗಿ ಎನಲು;

ರಾಯನು; ನಾರಿಮಣಿಯು ಇಷ್ಟವನ್ನು ಬಲಾತ್ಕರಿಸತಕ್ಕದ್ದು ಅಸಂಗತವೇ ಸರಿ. ಆದರೆ ಇವಳೆ ತನ್ನ ಮನಃಪೂರ್ವಕವಾಗಿ ಸಮ್ಮತಿಪಟ್ಟರೆ; ನನ್ನ ಮಿತ್ರನಾದ ರವಿವರ್ಮಗೆ ನಾನು ಜಾಮೀನಾಗುವೆನು. ಇಂದಿನಾರಭ್ಯ ಇವನ ಭಾಗ್ಯನಾತರ್ಯವು ಸೋ

ರುವದಿಲ್ಲ. ನಾನು ಮಾಡತಕ್ಕ ಅಲ್ಪಸಹಾಯದಿಂದಿವನ್ನ ನೌತರ್ಯವಂ ನವೀನಪಡಿಸುವೆನು. ಹಾಗಾದಪಕ್ಷದಲ್ಲಿ ಹಿರಣ್ಯಗರ್ಭನ ಲಾವಣ್ಯಕೋಶವಂ ಸೂರೆಗೈದಿರ್ಪ ರವಿವರ್ಮನು, ಆಕಸ್ಮಿಕವಾಗಿ ತನ್ನ ಪೂರ್ವಪದವಿಯಂ ಪರಿಗ್ರಹಿಸಿದಲ್ಲಿ; ಕುಲೀನಳಾಗಿಯು, ಸಮಾನವಯೋರೂಪಿನಿಂದ ಪ್ರಕಾಶಿಸುವ ಕನ್ಯಾಮಣಿಯ ಕಟಾಕ್ಷಕ್ಕೆ ಪಾತ್ರನನ್ನಾಗಿ ಮಾಡಲು ನಿಮ್ಮ ಆಕ್ಷೇಪಣೆಯುಂಟೆ ಎಂದ ರಾಯನಂ ಕುರಿತು ;—

ಸ್ವಾಮಿ! ಇವಳ ಅಭಿಲಾಷೆಯು ಸುರೇಂದ್ರನಲ್ಲಿ ಸ್ಥಿರವಾಗಿ ನಿಂತಿರುವದು. ನಾನು ಮಾತುಕೊಟ್ಟಾಗಿರುವದು. ಆದರು ರವಿವರ್ಮನು ತನ್ನ ಗ್ರಾಮಗಳನ್ನು ಬಿಡಿಸಿಕೊಂಡು ಇವುಗಳನ್ನು ಸ್ತ್ರೀಧನವಾಗಿ ಬರದುಕೊಡುವದಾಗಿ ಒಪ್ಪಿ, ಸುರೇಂದ್ರರಾಯರಿಂದ ಆಕ್ಷೇಪಣೆ ಇಲ್ಲದಂತೆ ನಾನು ಬಿಡುಗಡೆಯಾಗಿ, ಈ ಮಗುವಿನ ಮನಸ್ಸು ಬದಲಾಯಿಸುವಂತೆ ಮಾಡಿದಲ್ಲಿ, ತಮ್ಮ—ಎಂದು ಹೇಳುತ್ತಿರುವ ಕಳಿಂಗನಂ ಕುರಿತುರಾಯನು ;—ಎಲೈ ಮಿತ್ರನೆ! ನೀನು ಹೇಳುವ ವಿದ್ಯಮಾನಗಳುಂಟಾಗುವದನ್ನು ಕೆಲವುದಿವಸಗಳಲ್ಲಿ ನೀನು ನೋಡುವನಾಗುತ್ತೀಯೆ. ಆಗ ನೀನು ಮಾತು ತಪ್ಪಬೇಡವೆಂದುಸುರಿದನು.

ಈರೀತಿ ಇವರೀರ್ವರು ಮಾತನಾಡಿಕೊಳ್ಳುತ್ತಿರಲು, ಮತ್ತೊಂದುಕಡೆ, ಒಂದು ಲತಾಗೃಹದಲ್ಲಿ, ಕಮಲಿನಿಯು ಪದ್ಮಿನಿಯಂ ಕುರಿತು;—ನನ್ನನ್ಯಾತಕ್ಕೆ ಒಬ್ಬಳನ್ನೆ ಇರಲಿಸುವದಿಲ್ಲ? ನಾನು ಹಾಡುವದಿಲ್ಲವೆಂದರು ಯಾತಕ್ಕೆ ಬಾಧಿಸುತ್ತೀಯೆ? ಎನಲು ; ರಾಮವರ್ಮರಾಯರು ಅಪೇಕ್ಷಿಸಿದರು ಹಾಡುವದಿಲ್ಲವೆ ಎಂದು ಸಖಿಯಂ ಕುರಿತು ;—ರಾಮವರ್ಮರಾಯನಿಗೊ! ಇವನಿಗಿಂತಲು ಶ್ರವಣಬಳಗುಳದ ಶ್ರವಣಪ್ಪ ಕೇಳಿದರೆ ನಾನು ಹಾಡಿದರು ಹಾಡಬಹುದೆಂದು ಹೇಳನಂಗೈದ, ಕಮಲಿಯಂಕುರಿತವಳ ಸಖಿಯು;—ಸಾಕು, ಸಾಕು, ಈ ಮಾತುಗಳನ್ನು ನಿಲ್ಲಿಸು. ನಿಶ್ಚಯವನ್ನು ಹೇಳಿದ್ದಾದರೆ, ಆ ರಥಿಕರಲ್ಲಿ ನಿನಿಗೇ ವಿಶೇಷವಾದ ಆಕ್ಷೇಪಣೆ ಇರುವಂತೆ ಕಾಣುವದಿಲ್ಲ. ಬರಿ ಮಾತುಗಳನ್ನು ಮಾತ್ರ ಹರಟುತ್ತಾ ಇರುವೆ ಎಂದಾದಕೆ ; ಕಮಲಿನಿಯು;—ವಿಶೇಷ ಆಕ್ಷೇಪಣೆ ಇಲ್ಲವೆಂಬುದಾಗಿಯಾದರು ತಿಳಿದಿರುವೆಯಲ್ಲ. ಅಲ್ಪವಾಗಲಿ, ಅಪಾರವಾಗಲಿ, ಆಕ್ಷೇಪಣೆ ಇರುವದು ಸಾಕಲ್ಲವೆ? ಇವನು ನಿರ್ದೋಷಿಯೇನೆ ಅಲ್ಲವಷ್ಟೆ. ಈತನ ದೋಷಗಳಲ್ಲಿ ಕೆಲವನ್ನುಮಾತ್ರ ಉದಹರಿಸುವೆನು ಕೇಳು. ಇವನು ಗಂಭೀರಸ್ವಭಾವಿಯು, ಮತ್ತು, ಸೂರ್ಯಕಿರಣಗಳನ್ನು ಕಂಡಕೂಡಲೆ ಓಡುವ ಕಾಳರಾತ್ರಿಯಂತೆ ಇವನ ಮುಖವನ್ನು ನೋಡಿದ ಕೂಡಲೆ ಹಾಸ್ಯರಸವು ಪಲಾಯನಂಗೈಯುವದೆನಲು ; ಪದ್ಮಿನಿಯು;—ಇದು

ಹೊರತು ಮತ್ತಿನ್ನಾವ ಆಕ್ಷೇಪಣೆಯಾದರು ಉಂಟೆ? ಈಗ ನೀನು ಹೇಳಿದ್ದು ಇವರ ಯೋಗ್ಯತೆಯನ್ನು ಸಹಾ ತೋರಿಸುವದು. ಹಾಸ್ಯವು ಅನೇಕವೇಳೆ ನಿಂದಿತವಾಗಿರುವದೆನಲು; ಕಮಲಿನಿಯು:—ಇವನು ಒರಟನು, ಮತ್ತು ಸತ್ಯವೆಂಬ ಕರಡಿಯನ್ನು ತನ್ನ ಕೈಕೋಲಿನಿಂದ ಯಾವಾಗಲು ಆಡಿಸುತ್ತಿರುವನೆನಲವಳ ಸಖಿಯು:—ಒರಟುತನದಲ್ಲಿ ಗುಣವೇನು ಕಾಣುವದಿಲ್ಲ. ಆದರೆ ಸತ್ಯವೆಂಬ ಕರಡಿಯಲ್ಲಿ ಇವರಿಗಿರತಕ್ಕ ವಿಶ್ವಾಸದ ತಪ್ಪಿತಕ್ಕಿಂತ ಅಧಿಕವಾದ ತಪ್ಪುಗಳಿವರಲ್ಲಿದ್ದರು, ಇವರಂ ಮನ್ನಿಸಬಹುದು. ಮತ್ತಿನ್ನೇನು ತಪ್ಪುಗಳಿರುವವು ಹೇಳೆನಲು; ಕಮಲಿನಿಯು:—ಇವನು ನಿಧಾನಿಯು, ಒಂದಾವರ್ತಿ ಇವನೊಂದು ಆಮೆಯ ಸಂಗಡ ಜೂಜನ್ನಾಡಿ, ನಡೆಯಲ್ಲಿ ಸೋತುಹೋದನು. ಮತ್ತೊಂದಾವರ್ತಿ ಒಂದು ವಿವಾಹದ ಮೆರವಣಿಗೆಯು, ಇವನನ್ನು ನಡೆಯಲ್ಲಿ ಸೋಲಿಸಿತೆನಲು; ಪದ್ಮಿನಿಯು; ಇವರಲ್ಲಿ ಕುಂದಕಗಳಿರಬಹುದು, ಆದರೆ ಅವು ಈಗ ನೀನು ಹೇಳಿದಂತಾವುಗಳೇ ಆದರೆ, ಇತರರು ಇವರಷ್ಟುಮಟ್ಟಿಗಾದರೂ ನಿರ್ದೋಷಿಗಳಾಗಿದ್ದರೆ ಸಾಕೆನಲು; ಕಮಲಿನಿಯು;—ಇತರರು ಹೀಗಿರಬೇಕಲ್ಲವೆ! ಇತರರಂದರೆ ಯಾರು ಹೇಳೆನಲು; ಸಖಿಯು ನನ್ನ ಅಭಿಪ್ರಾಯ ಬೇರೆ. ಇತರರಂದರೆ ಉಳಿದ ಮನುಷ್ಯರೆಲ್ಲರು ಎಂಬರ್ಥವು. ಎಲ್ಲರು ಇವರಂತೆ ನಿರ್ದೋಷಿಗಳಾಗಿರಲೆಂದು ಹೇಳಿದೆನೆನಲು; ಹೌದು ಹೌದು, ಪದ್ಮಿನಿಯೆ! ನೀನು ಹೇಳಿದ್ದು ನಿಶ್ಚಯವೇ ಸರಿ. ಮನುಷ್ಯಜಾತಿಗೆ ಕ್ಷೇಮವುಂಟಾಗಲೆಂಬ ತದೇಕಧ್ಯಾನವಲ್ಲಿರುವೆ. ಆದರೆ ಗುಣಾಢ್ಯರಾದ ರವಿವರ್ಮರಧಿಕರಿಗೆಮಾತ್ರ ಒಳ್ಳೆದಾಗಲೆಂದು, ಹರಸುವದರಲ್ಲಿ ಪಕ್ಷಪಾತವಾದ ಉದಾರಬುದ್ಧಿಯು ಕಾಣುವದು. ಇದೇನು! ಈ ನಿನ್ನ ಮುಖವಿಕಾರವು! ಇದರ ರಕ್ತತೆಯ ಅರ್ಥವೇನು? ನಿನ್ನ ಮುಖಬಿಂಬವು, ಅದೃಶ್ಯವಾದ ಕೈಗಳಿಂ ಚಾಂದ್ರದಿಂದ ಲಿಪ್ತವಾದಂತೆ ಕಾಣುತ್ತೆ. ನಾನುಸಹಾ ನಿನ್ನಂತೆಯೆ ಉದಾರಿಯಾಗಿ, ರವಿವರ್ಮರಾಯರಲ್ಲಿ ದುರುಳುತನ ಕೊಂಚವಾಗಿರಲೆಂದು ಪ್ರಾರ್ಥಿಸುವೆನೆಂದ ಕಮಲಿನಿಯಂಕುರಿತಳವಸಖಿ:—ರವಿವರ್ಮರಾಯರು ದುರುಳರೆ ಎನಲದಕ್ಕವಳು:—ದುಂದುಗಾರಿಕೆಯು ದುರುಳುತನವಲ್ಲವೆ. ಆತನ ಕಾಮರೂಪದೇಶವು ದಿನೆ ದಿನೆ ಆತನ ಕೈತಪ್ಪಿ ಹೋಗುತ್ತಿರುವದು ನಿನಗೆ ಗೊತ್ತಿಲ್ಲವೆ? ಎಂದುದಕೆ;—

ಪದ್ಮಿನಿಯು ಎಲೈ! ಸಖಿಯೆ! ನೀನು ಹೇಳಿದ್ದು ಸತ್ಯವೆ ಸರಿ. ಯಾವದೊಂದು ಚಿಂತೆಯಿಂದಲು ಹಲುಬದೆಯು, ಸಂಸಾರದಲ್ಲಿ ಮಿತಿಮಿರಿದ ಅಭಿಲಾಷೆ ಇಲ್ಲದೆಯು, ಲೌಕಿಕದಲ್ಲಿ ಮಗ್ನವಾದ ಬುದ್ಧಿ ಇಲ್ಲದವಳಾಗಿದ್ದ ನನ್ನ ತಾಯಿಯು, ಅವಸಾನಕಾಲ

ದಲ್ಲಿ, ನನ್ನನ್ನವಳು ಸಮೀಪದಲ್ಲಿ ಕುಳ್ಳಿರಿಸಿಕೊಂಡು ದುಂದುಗಾರ್‍ರನ್ನು ಕಂಡರೆ ಎಚ್ಚರವಾಗಿರು. ಅವರು ಯೌವ್ವನದಲ್ಲಿ ಹೌರವಾಗಿ ಕಾಣುವರೆ ಹೊರ್ತು ಮತ್ಯಾವ ದೋಷವು ಅವರಲ್ಲಿ ಕಾಣುವದಿಲ್ಲ. ದಿವಸಗಳು ಕಳದು ವಯಸ್ಸಾದಹಾಗೆಲ್ಲ ಯಾವ ವಿಷಯದಲ್ಲಿ ಮೃದುಸ್ವಭಾವವುಳ್ಳವರಾಗಿದ್ದರೊ ಅದೆ ವಿಷಯದಲ್ಲಿ, ಕಾಠಿಣ್ಯಹೃದಯ ರಾಗುವರೆಂದು, ಹಂಬಲಿಸುತ್ತಾ ಅಸುವಂ ನೀಗಿದಳೆನಲು ; ಕಮಲಿನಿಯು;—ಹಾಗಾದರೆ ನಾನು ಯಾವಾಗಲು ಹೌರವಾಗಿಯು ಕಾಠಿಣ್ಯಹೃದಯಳಾಗಿಯು ಇರುತ್ತೇನಷ್ಟೆ, ನನ್ನಲ್ಲಿ ಸ್ನೇಹ ಹ್ಯಾಗೆ ಬೆಳಸಿದೆ ಎನಲು, ನೀನು ಹ್ಯಾಗಿದ್ದರೆತಂನೆ ಕುಂದಕವೇನು. ವಿಪತೆಂಬುವದು ಕಾಠಿಣ್ಯವನ್ನು ಮೃದುವಾಗಿ ಮಾಡುವದು. ದೈವಸಂಕಲ್ಪದಿಂದನಿನಿಗೇನಾದರೂ ಅಸಂಗತ ಸಂಭವಿಸಿದರೆ, ಇದರಿಂ ನಿನ್ನ ಕಾಠಿಣ್ಯಸ್ವಭಾವವು ಹೋಗಿ ನೀನು ನಮ್ರತೆಯನ್ನೈದುವೆ. ಅನರ್ಥಕ್ಕೆ ನೀನು ತಗಲಿ ಶಿಷ್ಟತೆಯನ್ನು, ಘನತೆಯನ್ನು ಪಡಿಯಲೆಂಬುವದು ನನ್ನ ಉದ್ದೇಶವಲ್ಲ. ಇವುಗಳು ಅದರಿಂದುಂಟಾಗುವದೆಂದು ಹೇಳುವೆನು ನೀನು ಮೃದುವಾದದೊಂದು ಸಂಗೀತವನ್ನು, ಹೇಳುವಳಾಗು. ಸಂಗೀತಲೋಲಳಾದಾಗ ನಿನ್ನಸ್ವಭಾವವು ಸೌಮ್ಯವಾಗಿರುವದೆಂದ ಪದ್ಮಿನಿಯಂ, ಕುರಿತವಳಸಖಿಯು;—ಮೃದುವಾದ ಸಂಗೀತವಂದರೇನು ? ಮೋಹಸಮ್ಮಂಧ ಪಟ್ಟದ್ದಲ್ಲವೆ. ಇದರ ವಿಷಯವಾಗಿ ಕವಿಶ್ರೇಷ್ಟರು ಹೇಳಿರುವದನ್ನು ಹೇಳುವೆನು ಕೇಳೆಂದು ;—

ಗಿಳಿದೇರನಿಂಪೂಗೋರಿ.

ನಲಗ ಬರುವದೆಂದರಿತಗಂತಂನಿನಿಯಳೋಳ್
ಪೇಳಲೋರ್ವಪರಪುಟ್ಟಂ
ತಳಿತಮಾಮರದ ಚೆಂದಳಿರೊಳವಳಕಾಣದೆ
ಮರದಿಂದಮರಕ್ಕೆಸಾರ್ದು
ಮರವತ್ತಣಿಂದಂ ಮರೆಯಾಗಿರ್ದಳೆಂದುಂ
ಮರವೆಂಬಿಟ್ಟು ಪೋಗುತಂ
ಮಾರನ ಕಡುಹತಿಗೆ ಮತ್ ಮರವ ಶೇರ್ದುದದುಂ ॥

ಅಷ್ಟರಲ್ಲಿ ಮರೆಯಾಗಿ ಇವರೀರ್‍ವರ ಸಲ್ಲಾಪವಂ ಕೇಳುತ್ತಿದ್ದ, ರವಿವರ್ಮನಾ ಲತಾಗೃಹದ ಬಾಗಲಲ್ಲಿ ಬಂದು ನಿಂತು ;—ನೀವುಗಳು ಈ ಲತಾಗೃಹದಲ್ಲಿ ಬೇಜಾರುಪಡು

ತ್ತಾ ಇರುವಹಾಗೆ ಕಾಣುತ್ತೆ. ನಾಟಕಗಳಲ್ಲಿ ನಿಮಗೆ ಇಷ್ಟವಿದ್ದರೆ ಹೇಳುವರಾಗಿ. ಯಾವ ನಾಟಕವು ನಿಮಗೆ ರುಚಿಸುವದೆನಲು ?

ಕಮಲಿನಿಯು, ದುಃಖಕರವಾದ ನಾಟಕವಾಗಿ ರೋದನೆಯನ್ನುಂಟುಮಾಡುವದರಲ್ಲಿಷ್ಟವೆಂದವಳಂಕುರಿತು; ರವಿವರ್ಮನು:—ನಿಮಗೆ ಅಳುವದರಲ್ಲಿ ವಿಶ್ವಾಸವೋ ? ಅಲ್ಲದೆ ಕೇಳತಕ್ಕ ಸ್ವಭಾವದಿಂದ ಶೋಕರಸದ ನಾಟಕವನ್ನಪೇಕ್ಷಿಸುವರೋ ? ಎನಲು; ಕಮಲಿನಿಯು ಎಲೈ ಮಾನ್ಯರೆ! ಅಳುವದರಲ್ಲಿ ವಿಶ್ವಾಸ ಉಂಟೆ ? ಈಗಿನ ನಗುವವನ್ನು ಹೋಗಲಾಡಿಸಲದನಪೇಕ್ಷಿಸುವೆನು. ನಾನು ನಗುವದಕ್ಕೆ ಪೇಜಾರುಪಡುತ್ತಾ ಇರುವೆನು. ಇಲ್ಲಿ ಹಾಸ್ಯಾಸ್ಪದವಾದ ಪುರುಷರು ಸುತ್ತುಮುತ್ತಲು ಇರುವರು. ಇದಕ್ಕೆ ಉದಾಹರಣೆ ಬೇಕಾದರೆ, ಅಗೋ ! ಅಲ್ಲಿ ನೋಡಿ, ಆ ಸಂಪಿಗೆಗಿಡದ ಮರೆಯಲ್ಲಿ ರಾಮವರ್ಮನು ಕೈರವೆಯ ಕೈಯನ್ನು ಹಿಡಿದುಕೊಂಡು ಯಾವದೋ ಒಂದು ಗುಪ್ತಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾ ಇರುವನು. ಇದಕ್ಕೆ ಸಮನಾದ ಮತ್ತೊಂದು ಹಾಸ್ಯಗರ್ಭಿತವಾದ ನಾಟಕವಿರುವದೆ ? ಈತನನ್ನು ನೋಡಿದರೆ ಕಲ್ಮಷದಿಂ ಕೂಡಿದ ಈ ಭೂಲೋಕದ ಪಾಪವನ್ನು ನಿವಾರಣೆಮಾಡಲುದ್ಯುಕ್ತನಾಗಿ, ಜನಗಳಿಗೆ ಧರ್ಮಬೋಧನೆಯಂ ಮಾಡಲು ಆಶ್ರಮವಂ ಬಿಟ್ಟು ಬಂದಿರುವ ಋಷಿಶ್ರೇಷ್ಠನಂತೆ ಕಾಣುವನು ; ಭೋಗವನ್ನು ಭೋಗಿಯಂತೆ ಕಂಡಿರುವನಂತೆ ಕಾಣುವನು ; ಆದರೆ ಇವನ ವೃತ್ತಿಯನ್ನು, ಆಚರಣೆಯನ್ನು ನೋಡುವರಾಗಿ. ಗುರುಶಿಷ್ಯರೆಂಬ ಭೇದವಿಲ್ಲದೆ, ವಾವಿವರಸೆಯನ್ನು ನೋಡದೆ ಮದಾಂಧನಾಗಿ ನಾಚಿಕೆ ಇಲ್ಲದೆ ಮೇಲೆ ಬೀಳುವ ಪಣಾಂಗನೆಯರ ಕರಕಮಲ ಸ್ಪರ್ಶವಿಲ್ಲದೆ ಸಂಚರಿಸನು. ಇದು ಆಶ್ಚರ್ಯವಲ್ಲವೆ ? ಇದನ್ನು ಕಡೆಯವರಿಗು ಪರೀಕ್ಷಿಸಿ ನೋಡುವೆನೆಂದು ಕುಪಿತಳಾಗಿ ಲತಾಗೃಹವಂ ಬಿಟ್ಟು ತೆರಳಲು ; ನಿಲ್ಲು, ನಿಲ್ಲು, ನೀನಿಲ್ಲಿರದಿದ್ದರೆ ನಾನು ಇಲ್ಲಿರತಕ್ಕವಳಲ್ಲವೆಂದವಳ ಸಂಗಡ ಹೊರಟ ಪದ್ಮಿನಿಗೆ ರವಿವರ್ಮನಡ್ಡಲಾಗಿ ನಿಂತು:—

ನನ್ನ ಸಂಗಡ ಮಾತನಾಡದೆ ಹೋಗಕೂಡದು. ನೀವು ಲತಾಮಂಟಪದಲ್ಲಿ ಮಾತನಾಡಿಕೊಂಡದ್ದರಲ್ಲಿ ; ಈ ಆಸ್ತಾನಿಕರ ನಾಲಿಗೆಗಳು ನನ್ನನ್ನು ನಿಂದಿಸುವದರಲ್ಲಿ ಲಘುತರವುಳ್ಳವುಗಳಾಗಿ ಕಾಣಿಸುವಂತೆ ಕಾಣುವದು. ನನ್ನ ಚರಿತ್ರೆಯು ಜ್ಞಾನಿಗಳೆಂದೆನಿಸಿಕೊಂಡಿರುವವರಿಗೆ ಅದ್ಭುತವಾಗಿ ಕಾಣಿಸುತ್ತಿರುವಹಾಗೆ ಕಾಣುವದು. ಅವರು ತಮ್ಮ ಮನಸ್ಸಿಗೆ ತೋರಿದರೀತಿ ಆಶ್ಚರ್ಯಪಡುತ್ತಾ ಇರಲಿ. ಅದರಿಂದ ಕುಂದಕವೇನು. ಅದು ಮಾತ್ರವಲ್ಲದೆ ಇವರು ನನ್ನಲ್ಲಿ ಕೆಲವು ದೋಷಾರೋಪಣೆಯಂ ಮಾಡುವರು. ಅವುಗಳು

ಮಾತ್ರ ನನ್ನಲ್ಲಿರುವದಿಲ್ಲ. ನನ್ನಲ್ಲಿ ಕೊಂಚಮಟ್ಟಿಗೆ ತಪ್ಪುಗಳಿರುವದೇನೊ ನಿಜ. ಆದರಿಂದ ಅವರು ಪ್ರೇರೇಪಿಸುವ ಮಾತುಗಳಲ್ಲಿ ಬುದ್ಧಿಶಾಲಿನಿಯಾದ ನೀನು ಚಿತ್ತವಿಡಕೂಡದು. ನಾನು ಚಪಲಚರಿತ್ರೆಯುಳ್ಳವನಾದಾಗ್ಯೂ; ವಿಷಯಾಸಕ್ತನಾಗೆಂದು ಇದ್ದದ್ದಿಲ್ಲ. ಸೃಷ್ಟಿಕರ್ತನಿಂ ಕೊಡಲ್ಪಟ್ಟ ನನ್ನ ಹೃದಯವು, ಆತ್ಮಜನಿತವಾದ ಸಂತೋಷದಿಂದಲೆ ಸಂಪೂರ್ಣತೆಯಂ ಹೊಂದಿ ನನ್ನಜನ್ಮಾರಭ್ಯವಿರುವದರಿಂ, ಇತರಮೂಲಕದಿಂ ಸಂತೋಷಪಡಪೇಕೆಂಬ ಆವಶ್ಯಕತೆಯನರಿಯದು. ಇದುವರಿಗೆ ಈ ರೀತಿ ಕಾಲಕ್ರಮ ಜರಗಿತ್ತು. ತರಂಗಮಾಲೆಯಿಂ ಮೆರೆಯುತ್ತಿರ್ದ, ಕಡಲಂಬಿಟ್ಟು ನೀನು ಭೂಮಿಯೊಳ್ ಅಡಿಯಿಡಲು ಕೈಕೊಟ್ಟು ನಿನ್ನ ಕರಕಮಲಗಳಂ ಪಿಡಿದು, ಡೋಲಾಯಮಾನವಾದ ದೋಣಿಗೆ ಹೆದರಿದುದಂ ಕಂಡು ನಾನು ನಿನ್ನಂ ಬಾಹುಗಳಿಂ ಬಿಗಿದೆನ್ನ ಹೃದಯಮಧ್ಯದೊಳ್ ಸೇರಗೊಳಿಸಿದಾರಭ್ಯ; ತನ್ನೊಳ್ಪುಟ್ಟಿದ ಲಕ್ಷ್ಮಿಯಂ ವಿಷ್ಣುಗೊಪ್ಪಿಸಿದಂತೆ, ಸಮುದ್ರನಲ್ಲೋಲಕಲ್ಲೋಲ ತೆರೆಗೈಗಳಿಂ ನಿನ್ನನಿಸಿಗರ್ಪಿದಾರಭ್ಯ, ನೀನಿಲ್ಲದ ಧ್ಯಾನ ಒಂದುಂ ತಲೆದೋರದು. ನಿನ್ನನ್ನಳಿದ ಮನೋರಥವು ಅಂಕುರಿಸದು, ಉದಯಾರ್ಕನ ಕಿರಣಗಳು ಗವಾಕ್ಷಗಳಿಂ ಬಂದೆನ್ನನೆಬ್ಬಿಸಿ, ನಿನ್ನಂ ನನ್ನೊಳೆಬ್ಬಿಸುವವು ಇರುಳು ನಿನ್ನಂ ನನ್ನೊಳಡಗಿಸುವುದು. ಗಿರಿಗಳೊಳ್, ವನಗಳೊಳ್, ಭೂಪ್ರದೇಶಗಳೊಳ್, ನಿನ್ನಾಕಾರವೆ ಕಾಣುವದು. ಪುಷ್ಪಗಳು ನಿನ್ನ ಶ್ವಾಸಗಂಧವನ್ನೆ ಪ್ರಸರಿಸುವವು. ವಾಯುವು ನಿನ್ನ ಸ್ವರವನ್ನೆ ಆಲಾಪಿಸುವದು. ಜಗಚ್ಛೃಂಗಾರವೆ ನಿನ್ನಾತ್ಮಶೃಂಗಾರದಿಂದಾವಸಿರುವದು. ನಾನು ವಿವೇಕವಿಲ್ಲದೆ ಇದುವರಿಗೆ ಕಾಲ ಕಳೆದದ್ದರಿಂದ, ನನ್ನನ್ನು ಕಲ್ಮಷನು, ಅಪರಿಶುದ್ಧನು, ಇಂದ್ರಿಯವಶವರ್ತಿ ಎಂದು ತಿಳಿಯಬೇಡ. ನನ್ನಾತ್ಮವು ಸಹಾಯವಿಲ್ಲದೆ ಔನ್ನಿತ್ಯವನ್ನು ಹೊಂದಲು ಶಕ್ತ ಅಲ್ಲದಿದ್ದಾಗ್ಯೂ; ಔನ್ನಿತ್ಯವಸ್ತುವಿಶ್ವಾಸಸಹಾಯದಿಂದ ಅದಿರತಕ್ಕ ಪಾತಾಳವಂ ಬಿಟ್ಟುಸ್ವರ್ಗಾರೋಹಣ ಮಾಡತಕ್ಕ ಶಕ್ತಿ ಅಲ್ಲವೆಂದು ಪರಿಭಾವಿಸದಿರೆನುವ ರವಿವರ್ಮನಂ ಕುರಿತು ಪದ್ಮಿನಿಯು ;—

ಸ್ವಾಮಿ! ಈತರದ ವಾರ್ತೆಯನ್ನಾಗಲಿ ಈ ವಿಷಯವನ್ನಾಗಲಿ ಕೇಳಿರುವದಿಲ್ಲ. ಹಾಗೆ ಯಾರಾದರು ಹೇಳಿದ್ದರೆ ಈ ದೋಷಗಳು ಅವರ ನಾಲಿಗೆಯಮೇಲೆ ಇರುತ್ತಿತ್ತು. ತಮ್ಮ ಜಾಣತನವನ್ನು ಮಾತ್ರ, ಆಕ್ಷೇಪಿಸುವರು. ಇದನ್ನುಸುದ ಅವಿಶ್ವಾಸವಾದ ಮಾತುಗಳಿಂದ ವಿವರಿಸರು. ಎನಲದಕ್ಕವನು ;—

ಶಂಕೆ ಇಲ್ಲದ ಅವಿವೇಕವನ್ನು, ವಿಚಾರವಿಲ್ಲದ ಮುಂದುಗಾರಿಕೆಯನ್ನು ಜನಗಳು

ನನ್ನಲ್ಲಿ ಆರೋಪಿಸುವದುಂಟೆಂದು ನಾನು ಅನೇಕವೇಳೆ ಕೇಳಿರುವದುಂಟು. ಜನರು ವಿವೇಕವೆಂದು ಹೇಳುವದ್ಯಾವದು? ನಾನು ಖರ್ಚುಮಾಡುತ್ತಿರುವ ದ್ರವ್ಯವನ್ನಲ್ಲವೆ? ದ್ರವ್ಯವನ್ನು ನಾನು ಲಕ್ಷ್ಯಮಾಡತಕ್ಕವನಲ್ಲ. ವಿಹಾರಾರ್ಥವಾಗಿ ಮುನ್ನೀರಲೆಗಳ ಮಧ್ಯದಲ್ಲಿ ದೋಣಿಯೊಳ್ ಕುಳಿತು ನಾನು ಹೋದಾಗಲೆಲ್ಲ ಸಮುದ್ರೋದಕಬಿಂದುಗಳಂ ಲಕ್ಷೋಪಲಕ್ಷಂಗಳಂ ಘಾಳಿಗೆರಚಿದರೆ, ಕಡಲ ಉದಕವಂ ನಾನು ಹಾಳುಮಾಡುವನೆಂದು ಯಾರುತಾನೆ ಹೇಳುವರು. ಈ ಉದಕಬಿಂದುಗಳು ಜನಗಳಿಗೆ ಎಷ್ಟು ಅಲಾಭವಾಗಿ ಕಾಣುವವೊ ಅದಕಿಂತಲು ಕಡಿಮೆಯಾಗಿ ನಾನು ದ್ರವ್ಯವಂ ಕಂಡಿರುವೆನು. ಆದರೆ ಮೋಹಸರೋವರದೊಂದಣುಮಾತ್ರ ಮೋಹಬಿಂದುವಂ ಕೊಡುವಳಾಗು. ಇದರಿಂ ನನ್ನ ಹೃದಯದಲ್ಲಂಕುರಿಸುವ ಕೋರಿಕೆಯು ನನ್ನಾತ್ಮದಲ್ಲಿಬೇರುಕೊಟ್ಟು, ದಿಕ್ತಟಗಳನ್ನಾವರಿಸಿ ಬೆಳದು ಫಲಭರಿತವಾಗುವದು. ನಾನು ಲಕ್ಷಿಸುವದಿದು. ಇದರಲ್ಲಿ ನನ್ನ ಉಬ್ಧತನವನ್ನು ನೀನು ಕಾಣುವೆ ಎಂದ ರವಿವರ್ಮನಂ ಕುರಿತವಳು ;—

ಸ್ವಾಮಿ ತಾವು ಯಾರ ವಿಶ್ವಾಸವನ್ನಪೇಕ್ಷಿಸುವರೋ ಚನ್ನಾಗಿ ಆಲೋಚನೆ ಮಾಡಿ ನೋಡುವರಾಗಿ. ಧನಕಿಂತಲು ಮೋಹವೆಂಬುವದು ಎಷ್ಟತಿಶಯವಾದದ್ದೊ, ಮೋಹದಲ್ಲಿ ವಿಚಾರವೆಂಬುವದಷ್ಟತಿಶಯವಾಗಿರುವ್ವುದು. ನನ್ನವಿಷಯವಾಗಿ ಮಾತುಕೊಟ್ಟಾಗಿರುವದನ್ನು ತಾವು ತಿಳಿದೆ ಇರುವಿರನಲು; ಹೌದು, ಆದರೆ ನೀನು ಮಾತುಕೊಟ್ಟಿಲ್ಲವಷ್ಟೆ ಎಂದ ರವಿವರ್ಮನಂಕುರಿತವಳು ;—ನನ್ನ ಪ್ರಿಯಳಾದ ತಾಯಿಯು ಅವಸಾನಕಾಲದಲ್ಲಿ, ಎಲ್ಲಾವಿಷಯದಲ್ಲು ನಾನು ನಮ್ಮ ತಂದೆಯ ಆಜ್ಞೆಯ ಪ್ರಕಾರ ನಡದುಕೊಳ್ಳುವೆನು. ಅದರಲ್ಲು ಮುಖ್ಯವಾಗಿ ವಿವಾಹವಿಷಯವಾಗಿ ಆತನ ಮಾತು ಮೀರುವದಿಲ್ಲವೆಂಬದಾಗೆ ಅಭಯವಂ ಕೊಟ್ಟಿರುವೆನು. ನಮ್ಮ ತಂದೆಯ ಉದ್ದೇಶವು ನಿಮಗೆ ತಿಳದಿರುವದಷ್ಟೆ ಎನಲು ರವಿವರ್ಮನು ;—

ಹಾಗೆಂದಿಗು ಆಗಕೂಡದು ಇವನು ನಿನ್ನನ್ನೊಂದು ಜೀವಶ್ರವಕ್ಕೆ ಗಂಟುಹಾಕಕೂಡದು. ಇವನು ಆರಾಧಿಸುವ ಲೌಕಿಕವೆ ಇದನ್ನು ಕಂಡು ಅಸಹ್ಯಪಡುವದು. ಸಜ್ಜನರು ಲಜ್ಜಾಕ್ರಾಂತರಾಗುವರು. ದುರ್ಜನರು ಹೇಸನಂಗೈಯ್ಯುವರು. ಜನರೆಲ್ಲರು ಈ ನಿರ್ದಯಾತ್ಮಕನಾದ ತಂದೆಯನ್ನು, ಅರುಳುಮರುಳಾದ ವರನನ್ನು ಕಂಡು ಛಿ! ಛಿ! ಎನುವರೆಂದ ರವಿವರ್ಮಗವಳು ;—

ಸ್ವಾಮಿ ಶಾಮರೂಪರಾಯರೆ! ನಾನು ಚಿಕ್ಕ ವಯಸ್ಸಿನವಳಾಗಿರುವದರಿಂದ

ತಾವು ಈಗ ಹೇಳಿದ ಮಾತಿಗೇನು ಉತ್ತರ ಕೊಡಬೇಕೊ ನನಿಗೆ ತಿಳಿಯದು. ಆದರೆ ಇವುಗಳು ನನಿಗಸಮಾಧಾನವನ್ನುಂಟುಮಾಡುವವು. ದುಂದುಗಾರರಲ್ಲಿ ದೊಡ್ಡ ಮನಸ್ಸಿಲ್ಲವೆಂಬದಾಗಿ ಹೇಳುತಿದ್ದದ್ದನ್ನು ಕೇಳಿದೇನೆ. ಹಾಗೆ ಹೇಳುವದರಲ್ಲಿ ನಿಶ್ಚಯವಿರದಿರಲೆಂದಪೇಕ್ಷಿಸುವೆನು. ನಮ್ಮ ತಂದೆಗೆ ನನ್ನಲ್ಲಿ ಪುತ್ರಿವಾತ್ಸಲ್ಯವು ಅಧಿಕಾರವು ಉಂಟು. ನನಿಗೆ ನಮ್ಮ ತಂದೆಯಲ್ಲಿ ಭಕ್ತಿಯೂ, ವಿಧೇಯತೆಯು ಇರಬೇಕೆಂಬುವದನ್ನು ಮನಸ್ಸಿಗೆ ತಂದುಕೊಳ್ಳುವರಾಗಿ. ಮತ್ತು ಸುರೇಂದ್ರರಾಯರು ನಿಮಿಗೇನು ಅಪರಾಧವನ್ನು ಮಾಡಿರುವದಿಲ್ಲ. ಅಷ್ಟುಮಾತ್ರವೇ ಅಲ್ಲ, ಅವರು ತಮ್ಮ ದೀರ್ಘವಾದ ಆಯುಷ್ಕಾಲದಲ್ಲಿ ಸಾತ್ವಿಕರಾಗಿ, ಯಾರಿಗೊಂದು ಹಿಂಸೆಯನ್ನು ಮಾಡಿದವರಲ್ಲವೆಂಬದಾಗಿ ಹೇಳುವದರಲ್ಲಿ ಗೌರವವಿಡುವರಾಗಿ, ನನ್ನವಿಷಯವೆಂದರೊ ಒಂದು ಚಟ್ಟದ ಮರಕ್ಕೆ ಮದುವೆಯೆಂದು ಗಂಟುಹಾಕಿದರು ಸಮ. ವಿರಕ್ತಳಾದ ನಮ್ಮ ತಾಯಿಗೆ ನಾನುಕೊಟ್ಟ ಅಭಯ ಸಾರ್ಥಕವಾದರೆ ಸಾಕಾಗಿರುವದೆಂಬ ಪದ್ಮಿನಿಯುಂಕುರಿತವಂ ;—

ಎಲೈ ನಾರಿಮಣಿಯೆ ! ನಿನ್ನ ಆಕ್ಷೇಪಣೆಗೆ ನಾನು ಗುರಿಯಾಗಿರುವೆನು. ನನ್ನ ಕೆಟ್ಟನಡತೆಯನ್ನು ಮನ್ನಿಸುವಳಾಗು. ನಾನು ಅಸಭ್ಯನು, ಅನೀತನು, ಉದಾರರಹಿತನಾಗಿರುವೆನು. ಹೀಗಿರುವದು ನನ್ನ ಮೋಹದಾರ್ಢ್ಯದಿಂದಲೆ ಹೊರ್ತು ನನ್ನ ಸ್ವಭಾವಗುಣದಿಂದಮಾತ್ರವಲ್ಲ, ಒಂದು ವರವನ್ನುಮಾತ್ರ ಬೇಡುವೆನು. ಅದೇನಂದರೆ ನಿನ್ನನ್ನು ಮಾತುಕೊಟ್ಟುಕೈಮೀರಿ ಹೋದವಳಂತೆ ನಾನು ಭಾವಿಸುವದಿಲ್ಲ. ಪ್ರಭುಗಳಾದ ವೀರಬಾಹು ಮಹಾರಾಯರು ನನಿಗೆ ಸಹಾಯಕರಾಗಿರುವರು. ಪರಮ ರಾಜನಿಷ್ಠನಾದ ಸುರೇಂದ್ರರಾಯನು, ಪ್ರಭುಗಳ ಮಾತು ಮೀರತಕ್ಕವನಲ್ಲ. ಅವರು ಒಂದುಮಾತು ಹೇಳಿದರೆ ಇವನು ತನ್ನ ಉದ್ದೇಶವನ್ನು ಬಿಟ್ಟು ನಿನ್ನನ್ನು ಒಪ್ಪಿಸುವನು. ನಿಮ್ಮ ತಂದೆಮಾತ್ರ ಕಠಿಣಹೃದಯನು. ನಾನು ಭಾಗ್ಯದಲ್ಲಿ ಸುರೇಂದ್ರರಾಯನಿಗೆ ಸಮನಲ್ಲದಿದ್ದರು, ಅನೇಕರು ನನಿಗೆ ಸಮನಾಗರು. ಇದರದೆಶೆಯಿಂದ ನಿಮ್ಮ ತಂದೆಯನ್ನುಸಹಾ ಸಮ್ಮತಿಸುವದಕ್ಕೆ ಪ್ರಭುಗಳಿಗೆ ಮಾರ್ಗವಿಲ್ಲದೆ ಇಲ್ಲ. ಆದುದರಿಂ, ನೀನು ಈ ವಿವಾಹ ನಿಷ್ಕರ್ಷೆಯಿಂ ಬಿಡುಗಡೆಯಾಗಿ ಸ್ವತಂತ್ರ ಮನಸ್ವಿಯಾಗಿರಬಹುದೆಂದು ನಾನು ಆಲೋಚಿಸುವೆನು ನೀನುಸಹಾ ಇದೇರೀತಿ ತಿಳಿಯುವಪಕ್ಷದಲ್ಲಿ ನನ್ನ ಹರಕೆ ನೆರವೇರಿ, ನಿನ್ನಲ್ಲಿ ಸ್ನೇಹ ಬೆಳಸಲು ಅಭ್ಯಂತರವೇನಿರುವದು. ಆಗಲಾದರು ನನ್ನ ಮೋಹಕ್ಕೆ ಪ್ರತಿಫಲ ಉಂಟೆ? ಎಂದುದಕವಳು ;—

ನಮ್ಮ ತಂದೆಯು ತನ್ನ ಉದ್ದೇಶವನ್ನು ಬದಲಾಯಿಸುವದರಲ್ಲಿ ನನಗೆ ತುಂಬಾ ಅನುಮಾನತೋರುವದೆಂದವಳಂ ಕುರಿತು:—ನಿನಗೆ ಅನುಮಾನ ತೋರುವದೋ ? ಆ ಅನುಮಾನದಲ್ಲಿ, ಸಹಸ್ರೋಪಸಹಸ್ರ ಆಶೆಯು ಜನನಗೊಂಡು, ನನ್ನ ಹೃದಯವನ್ನು ಮುತ್ತುತ್ತಾ ಇರುವವು. ಇದರಿಂದ ಹಿಮ್ಮೆಟ್ಟದಿರು. ಈ ಮೋಹಾಗ್ನಿಯ ಒಂದು ಕಿಡಿಯು ಮುಂದೆ ಪ್ರಜ್ವಲಿಸುವದರ ಜ್ವಾಲೆಗೆ ಭಯಪಡದಿರು. ಇದನ್ನು ಆರಿಸಬೇಡ ರಮ್ಯವಾದ ಈ ಭೂತವನ್ನು ಪ್ರಜ್ವಲಿಸಿ ಮೇಲಕ್ಕೇಳಲೀಸು. ಆದರ ಜ್ವಾಲಾಕಾಂತಿಯಿಂ, ಅಜ್ಞಾನಾಸ್ಪದವಾದ ಭೂಲೋಕದ ಸಂಪತ್ತುಗಳು ಕಂದಿದರು, ಸ್ವರ್ಗಪಥವು ಮಬ್ಬಾಗಿರುವದನ್ನು ಕಾಂತಿಗೈವದು. ನನ್ನ ಪ್ರಯತ್ನವು ಫಲಿಸಲೆಂದು ನೀನು ಅಪೇಕ್ಷಿಸುವೆ. ಇದರಲ್ಲಿ ಮನಸಿಟ್ಟು ಶಿವರಾತ್ರಿ ಹಬ್ಬದವರಿಗೆ ಅವಕಾಶಕೊಡುವಳಾಗು; ಅಷ್ಟರಲ್ಲಿ ನಿಮ್ಮ ತಂದೆಯು ಕಠಿಣ ಮನಸ್ಸನ್ನು ಬದಲಾಯಿಸುವೆನೆಂದುದಕವಳು ;—

ಇದಕ್ಕೆ ಸಮ್ಮತಿಸುವದರಲ್ಲಿ ವಿಶೇಷವೇನು ಇರುವದಿಲ್ಲ ಸಂಪೂರ್ಣವಾದ ಮನಸ್ಸಿನಿಂದ ಒಪ್ಪುತ್ತೇನೆಂದವಳಂಕುರಿತವನು:—ನೀನು ಹೇಳಿದ್ದು ಸರಿಯೆ, ಆದರೆ ಯುವತಿಯರು ಪೂರ್ವವಯಸ್ಸಿನಲ್ಲಿ ಚಪಲಚಿತ್ತದಿಂದಲಾಗಲಿ, ಒಡಂಬಡಿಕೆಯಿಂದಲಾಗಲಿ ತಮ್ಮ ಸಂಕಲ್ಪವನ್ನು ಬಿಡುವ ರೀತಿಗು ; ಪಿತೃವಾತ್ಸಲ್ಯವೆಂಬ ನೆವವನ್ನಿಟ್ಟುಕೊಂಡು ತಾವು ಹಂಗಿಗರಾಗಿರುವದನ್ನುಪೇಕ್ಷಿಸುವಂತೆ ಮಾಡುವ ಮುಚ್ಚುಮರೆ ಮಾತುಗಳಿಗೆ ಮರುಳಾಗಿ, ಈಗ ಹೇಳಿದ ಅವಧಿಮರಿವಿಗು ಮತ್ತೊಬ್ಬನಿಗೆ ಒಡಂಬಡುವದಿಲ್ಲವೆಂಬದಾಗಭಯವಂ ಕೊಡುವಳಾಗೆಂದ ರವಿವರ್ಮಗಳು ;—

ಸ್ತ್ರೀಯರ ಉದ್ದೇಶದ ದೃಢವನ್ನು ಹೋಗಲಾಡಿಸುವ ಕೆಲವು ಪ್ರೇರೇಪಣೆಗಳಿಗೆ ವಶವರ್ತಿಯಾಗುವದಿಲ್ಲವೆಂಬುದನ್ನು, ಅನುಮಾನಕ್ಕಾಸ್ಪದ ಕೊಡುವದಿಲ್ಲ. ಇಷ್ಟು ಮಾತ್ರ ನಾನು ಮಾತುಕೊಡತಕ್ಕವಳು. ಇದಕ್ಕೆ ಹೆಚ್ಚಾಗಿ ಪ್ರವರ್ತಿಸತಕ್ಕವಳಲ್ಲ. ಈ ನನ್ನ ಅಭಯಲುಬ್ಧತೆಯಿಂದ ನಾನಿದನ್ನು ನೆರವೇರಿಸತಕ್ಕವಳೋ ಅಲ್ಲವೋ ನೀವೆ ಆಲೋಚಿಸಿಕೊಳ್ಳಬಹುದೆನ್ನುವಷ್ಟರಲ್ಲಿ ;—

ಆನಂದನೆಂಬ ಚಾರನು ಬಂದು, ಕೋಟಾಧೀಶ್ವರರಾದ ಕಳಿಂಗರಾಜರು ಪ್ರಯಾಣಸಿದ್ಧರಾಗಿ ತಮ್ಮ ಪುತ್ರಿಯ ಆಗಮನವನ್ನೆ ನಿರೀಕ್ಷಿಸಿಕೊಂಡಿರುವರು. ಸಂಧ್ಯಾಕಾಲದ ಹಿಮವು ಬೀಳಲುಪಕ್ರಮಿಸಿದ್ದರಿಂದ ತ್ವರಿತದಿಂ ಮನೆಯನ್ನು ಸೇರಬೇಕೆಂದು ಕಾದಿರುವರೆನಲು:—ಪದ್ಮಿನಿಯು:—ಜಾಗ್ರತೆ ಬರುವಳೆಂದುಸುರುವನಾಗೆಂದವನಂ ಬೀಳ್ಕೊ

ಟ್ಟು ರವಿವರ್ಮನಂ ಕುರಿತು ;—ಸ್ವಾಮಿ ! ಈಗಿನ ಕಾರ್ಯದಲ್ಲಿ ತಮಗೆ ತೋರುವಂತೆ ನನಗೆ ಜಯವು, ಕಾರ್ಯಸಿದ್ಧಿಯು ತೋರುವದಿಲ್ಲ. ಆದರು ಈಗಿನ ಉದ್ದೇಶವು ಭಗ್ನವಾದರೆ, ಅದರ ಯಾತನೆಯನ್ನು ನನ್ನ ಹೃದಯವು ತಾಳಲಾರದು ಅದನ್ನು ತರ ಹರಿಸಿಕೊಳ್ಳತಕ್ಕ ಶಕ್ತಿ ನನ್ನಲ್ಲಿಲ್ಲ. ನಾನು ಮಿತಿಮೀರಿ ಮಾತನಾಡುತ್ತಾ ಇರುವೆನು. ಆದರು ಅದು ಸ್ವಲ್ಪವಾಗೆ ಕಾಣುವದು. ಪ್ರಯಾಣಕ್ಕೆ ತಮ್ಮಪ್ಪಣೆಯನ್ನು ತೆಗದುಕೊಳ್ಳುವೆನೆನಲು ; ರವಿವರ್ಮನು ;—

ಎಲೈ ಸಖಿಯೆ ! ಆಗೋ ! ಗಗನಮಧ್ಯದಲ್ಲಿ ಪ್ರಕಾಶಿಸುವ ಚಂದ್ರಮಂಡಲವನ್ನು ನೋಡುವಳಾಗು. ಈ ಚಂದ್ರಬಿಂಬವು ತನ್ನ ಕಿರಣಗಳಿಂದ ಲೋಕಕ್ಕೆ ಕಾಂತಿಯನ್ನುಂಟುಮಾಡುವದು ಮಾತ್ರವಲ್ಲದೆ ; ಅವನ ಕಿರಣಭ್ರಮರಗಳು ಜಗದ ಉಲ್ಲಾಸ ಕಾಲದಲ್ಲಿ ಭೂಮಿಗೆ ಬಂದು, ಮೋಹಭರಿತಹೃದಯಕುಸುಮಗಳ ಮಕರಂದಪಾನವಂ ಮಾಡಿ, ಸ್ವರ್ಗಪಥನಾದ ಚಂದ್ರನಂ ಶೇರುವವು. ಎಲೈ ಪ್ರಿಯಳೆ ! ನನ್ನ ಹೃದಯ ಮೋಹಕುಸುಮಮಕರಂದವಂ ಪಾನಮಾಡಿ ಸಂತುಷ್ಟತೆಯನ್ನೊಂದಿದವುಗಳು, ಅದರ ನಿರ್ಮಲತೆಯಂ, ನೈಜವಂ ಕಂಡು ಕಳಂಕನಾದ ಹಿಮಕರನಂ ಬಿಟ್ಟು ಅಕಳಂಕಳಾದ ನಿನ್ನ ಮುಖಚಂದ್ರನಂ ಶೇರುವವು. ಇನ್ನು ನಿನಗೆ ಪ್ರಯಾಣಕ್ಕೆ ಹೊತ್ತಾಗುವದೆಂದವಳಂ ಕಳುಹಿಸಿಕೊಟ್ಟ ರವಿವರ್ಮನ ಬಳಿಗೆ ಆನಂದನು ಪುನಃ ಬಂದು ;—

ಸ್ವಾಮಿ ಮಂಜು ಬೀಳುತ್ತಾ ಇರುವದೇನೋ ನಿಶ್ಚಯ; ಆದರೆ ಈ ನಾರಿಮಣಿಯಂ ಬರಹೇಳಿದರೆಂದದ್ದು ಮಾತ್ರ ನನ್ನ ಕಲ್ಪನೆ. ಸಮಯವರಿಯದೆ ಹೀಗೆ ಹೇಳಿದನೆಂದು ಚಿತ್ತಕ್ಕೆ ಕೋಪಕೆಲಸವಿಲ್ಲ. ರಹಸ್ಯವಾಗವರಿಗೆ ತಿಳಿಯದಂತೆ ತಮ್ಮಸಂಗಡಲೆ ಹೇಳಬೇಕಾಗಿದ್ದ ಒಂದು ಮಾತಿಗೋಸ್ಕರ ಹೀಗೆ ಮಾಡಿದೆನು. ನಮ್ಮ ವಿದ್ಯುತು ತೀರಕ್ಕೆ ಬರುವಂತೆ ಕಾಣಿಸುತ್ತಿದ್ದ ಕೂಡಲೆ ಅದು ಕಣ್ಣಿಗೆ ಮರೆಯಾಗಿದೆ. ಕೆಲವರು ಅದು ಮುಳಗಿಹೋಗುತ್ತಾ ಇದ್ದದ್ದನ್ನು ಕಂಡೆವೆಂದು ಹೇಳುವರೆನಲು ;— ರವಿವರ್ಮನು ನೀನು ಹಾಗೆ ಹೇಳಬೇಡ. ಇದು ನಿಶ್ಚಯವಾದರೆ ನಾನುಸಹಾ ಮುಳಗಿಹೋಗುವೆನು. ಆದರೆ ಇದು ಹ್ಯಾಗೆತಾನೆ ಆದೀತು ? ಬಿರುಘಾಳಿಯು, ಮಂಜು ಮತ್ತಿನ್ಯಾವ ಅಪಾಯವು ಇಲ್ಲವಲ್ಲ. ಹಡಗು ಹ್ಯಾಗೆತಾನೆ ಮುಳಗುತ್ತೆ ? ಪ್ರಾಯಶಃ ಮುಳಗಿದ್ದು ಹಡಗಲ್ಲ, ಸೂರ್ಯಸಿರಬಹುದು. ಹಗಲಿನಲ್ಲಿ ಕಂಡದ್ದು ಕಾವಳದಲ್ಲಿ ಕಾಣದೆ ಇರಬಹುದು. ಆದರು ನೀನು ಖಂಡಿತವಾಗಿ ಹೇಳುವದರಿಂದ ಸಮುದ್ರದ ಬಳಿ ಹೋಗಿ

ವಿಚಾರಿಸುವೆನು. ನನ್ನ ಅತಿಥಿಗಳಲ್ಲಿ ಬಹುಜನ ಹೊರಟುಹೋಗಿರುವರು; ಉಳಿದಿರುವವರ ಬಳಿಗೆ ನೀನು ಹೋಗಿ ಕೊಂಚಹೊತ್ತು ಮಾತ್ರ ನಾನಿಲ್ಲದಿರುವದಂ ಕ್ಷಮಿಸಿರೆಂದು ಬೇಡುವನಾಗೆಂದು ಹೇಳಿ ಸಮುದ್ರಮಾರ್ಗವಾಗಿ ತೆರಳಿದನು.

ಆನಂದನು ಇನ್ನು ಕೆಲವು ನೀಚರುಳಿದಿರುತರು. ಇವರಂಸತ್ಕರಿಸತಕ್ಕ ರೀತಿಯನ್ನು ನಾನು ಚನ್ನಾಗಿಬಲ್ಲೆ. ಇಂಥಾ ಉದರಪೋಷಕರು ಸ್ವಕಾರ್ಯಧುರಂಧರರು ನಮ್ಮ ರವಿವರ್ಮರಾಯರಲ್ಲಿ ಸೇರಬಿದ್ದರೆ ಕಾಮರೂಪದೇಶದ ಭಾಗ್ಯದೊತ್ತಾಸೆಗೆ ಶಿಂಹಳ ದ್ವೀಪದಿಂದ ಸಮುದ್ರಮಾರ್ಗವಾಗಿ ದ್ರವ್ಯವು ಯಾತಕ್ಕೆ ಬರುತ್ತಿತೆಂದು ಆಲೋಚಿಸುತ್ತವರಂ ಕುರಿತು ಹೋಗುತ್ತಿದ್ದನು.

ಮತೊಂದುಕಡೆ, ಹಡಗು ಬಂದ ವರ್ತಮಾನವನ್ನು ಹೇಳಬೇಕೆಂದು ರಾಜಪ್ಪಶೆಟ್ಟಿಯು, ಭೋಗಪ್ಪಶೆಟ್ಟಿಯೊಡನೆ, ರವಿವರ್ಮನಂ ಹುಡುಕುತ್ತಾ ಆ ಉದ್ಯಾನವನವಂ ಪ್ರವೇಶಿಸುವಷ್ಟರಲ್ಲಿ; ನಾಗಪ್ಪಶೆಟ್ಟಿಯು, ಹರಿದ ಬಟ್ಟೆಗಳಿಂದಲೂ, ಎತ್ತಿದ ಕೈಗಳಿಂದಲೂ, ಮುಖವಿಕಾರದಿಂದಲೂ, ಸರ್ವಸ್ವವಂ ಕಳೆದುಕೊಂಡವನಂತೆ, ಘಾಬರಿಯಾಗಲ್ಲಿಗೆ ಬಂದವರಂಕುರಿತು ;—ನೀವು ಜಾಗ್ರತೆಬನ್ನಿ, ಹಡಗಿಗು ಅದರಲ್ಲಿದ್ದ ಐಶ್ವರ್ಯಕ್ಕು ಅಪಾಯ ಸಂಭವಿಸಿರುವದು. ನನ್ನ ಮನಸ್ಸೆಲ್ಲಾ ಅಲ್ಲೆ ಇದೆ. ಜಾಗ್ರತೆ ಬರುವರಾಗಿ. ನಾನು ಬೆಳಗಿನ ಹನ್ನೊಂದು ಘಂಟೆಯಾಗಾಯಿತ್ತು ಆರು ಘಂಟೆಯಾವರವಿಗು ಕೋಟೆಯ ಮೇಲೆ ನಿಂತು ಅದು ಬರುವದನ್ನೆ ನೋಡುತ್ತಿದ್ದೆ. ಇದ್ದದ್ದಕ್ಕೆ ಇದ್ದ ಹಾಗೆ ಅದು ಮರೆಯಾಗಿ ಕಣ್ಣಿಗೆ ಕಾಣಿಸದೆ ಹೋಯಿತು. ಅದರಲ್ಲಿದ್ದ ಆಭರಣಗಳೇನಾಯಿತೊ! ಭಂಗಾದರೆ ಘಟ್ಟಗಳ ಗತಿ ಯೇನು! ಮುಳುಗಿ ಹೋದರೆ ಮಾಡತಕ್ಕದ್ದೇನು! ನನಿಗೆ ಕಳವಳವಾಗುವದು. ಸಮುದ್ರದ ತೀರಕ್ಕೆ ನೀವು ಜಾಗ್ರತೆ ಬರುವವರಾಗಿರೆಂದು ಕೂಗುವದಂಕೇಳಿ, ರಾಜಪ್ಪಶೆಟ್ಟಿಯು ;—ಅಯ್ಯೋ! ಅಯ್ಯೋ! ನಾಗಪ್ಪಶೆಟ್ಟರೆ! ನಾನು ಕೆಟ್ಟೆನಲ್ಲ! ಮುಂದೇನುಗತಿ! ಸಮುದ್ರತೀರಕ್ಕೆ ಹೋಗೋಣ ನಡೀರಿ, ಆದರೆ ಭೋಗಪ್ಪಶೆಟ್ಟರೆ ನೀವು ಜಾಗ್ರತೆಹೋಗಿ ರವಿವರ್ಮನ ಮೇಲೆ ವಾರಂಟು ತೆಗೆದುಕೊಳ್ಳುವರಾಗಿ. ನನ್ನ ಸಾಲಕ್ಕಾಗಿವನಿಂದ ಜಾಮೀನು ತೆಗೆದುಕೊಳ್ಳಬೇಕಾಗುತ್ತೆಂದು ಹೇಳಿಕೊಂಡು ಹೊರಟು ಹೋದರು.

ಕೂಡಲೆ ಆನಂದನು ಬಂದು ಅಲ್ಲುಳಿದಿದ್ದ ನಾಟಕ, ನರ್ತನ, ಗಾಯಕರಂ ಕುರಿತು; ಎಲೋ ನೀಚರ! ಎಲೋ ಗುಲಾಮರ! ತೊಲಗಿ ತೊಲಗಿ. ಇಲ್ಲಿಂದ ಜಾಗೆ

ತೆತೊಲಗುವರಾಗಿ, ನೀವು ತಿಂದ ಭಂಡಕೂಳು ಸಾಲದೆ! ಬಾತಾಕಾನಿಗಳಾದ ಉದರ ಪೋಷಕರು ನೀವಲ್ಲವೆ? ಎಲೋ ಗಿಲೀಟಿನ ಗುಲಾಮರುಗಳಿರ! ಎಲೈ ಬಣ್ಣದ ರಂಭೆಯರೆ! ಎಲೋ ನಿಶಾಪತಂಗಗಳೆ! ನಿಮ್ಮ ಉದರಸಮೇತ ತೊಲಗುವರಾಗಿರೆಂದು ಕೂಗುವನಂಕುರಿತು—ಸೂತ್ರಧಾರನು; ಇದೇನು! ಇದೇನು; ಎಂದುದಕವನು;—ಇದೇನೆಂದು ಕೇಳುವಿಯು ಗುಲಾಮನೆ! ಇದೇನೆಂದು ಕೇಳಲು ನಿನಿಗೆ ಧೈರ್ಯವೆಷ್ಟು ನೀಚನೆ! ನೀನು ಹಂದಿ ಮುಸಡಿಯಲ್ಲಿ ಎಮ್ಮೆತುಟಿಗಳನ್ನು ತೆರದು ಇದೇನೆಂದು ಕೇಳುವಿಯು? ಕಾಸ್ತ್ರರನೆ! ಹೇಳುವೆನು ಕೇಳು. ನಮ್ಮೊಡೆಯನಾದ ಕಾಮರೂಪನು ಮುಳಗಿ ಹೋದನೆನಲು;—ಒಬ್ಬ ಗಾಯಕನು;—ಯಾರು ನಮ್ಮ ರವಿವರ್ಮರಾಯರೆ? ಎನಲು;—ಆನಂದನವನಂಕುರಿತು;—ಎಲೋ ಅಲ್ಪನೆ! ನೀನಲ್ಲವೆ ಕೇಳಿದ್ದು? ನೀನೇ ಅಲ್ಲವೆ! ಏಳುತಡವೆ ಛಡಿಯಾದರೂ ನಿನ್ನ ದುರ್ಮಾರ್ಗವನ್ನು ಬಿಡದಿರುವ ವಂಚಕನು? ಬ್ರಹ್ಮಸೃಷ್ಟಿಗೆ ಅಪಮಾನಿಯೆ! ಕೇಳು. ರವಿವರ್ಮರಾಯರೆ ಮುಳಗಿ ಹೋದವರು. ನಮ್ಮ ವಿದ್ಯುತು ಅವರಿಗುಳಿದಿದ್ದ ವಿಶಿಷ್ಟ ಐಶ್ವರ್ಯವನ್ನು ತರುತ್ತಿದ್ದು ತೀರದಲ್ಲಿವಡದು ಮುಳಗಿ ಹೋಯಿತು. ಅದಂಕೇಳಿ ಮತ್ತೊಬ್ಬ ಗಾಯಕನು ಆನಂದನಂಕುರಿತು;—ಸ್ವಾಮಿ! ಆ ಕೆಲಸವನ್ನು ನಾವು ಮಾಡಲಿಲ್ಲವಲ್ಲ. ನಮ್ಮನ್ನು ಯಾತಕ್ಕೆ ಬೈಯುತ್ತೀರೆನಲು;—ಆನಂದನು;—ತೊಲಗು, ತೊಲಗು, ಕೊಳತ ಹೃದಯದಿಂ ನಾರುವ ನೀಚನೆ! ನೀವು ಆ ಕೆಲಸವನ್ನು ಮಾಡದೆ ಇದ್ದಾಗ್ಯೂ ನಿಮ್ಮ ವಾಸನೆಯನ್ನು ಕಂಡು ಸಹಿಸಲಾರದೆ ಹಿಂತಿರುಗಿ ಓಡುತ್ತಿದ್ದ ಘಾಳಿಯು ಹಡಗನ್ನು ಮುಳಗಿಸಿತು. ಎಲೈ ಕತ್ತೆಗಳಿರ! ಆಚೆಗೆ ಹೋಗಿ. ಇಂದಿನಾರಭ್ಯ ನಿಮ್ಮ ಸಹಾಯ ಅವಶ್ಯಕವಿಲ್ಲ. ನಮ್ಮ ಗೊಂತು ಬರಿದಾಯಿತೆಂದವರನ್ನೆಲ್ಲಾ ಓಡಿಸಿದನು.

ಅಷ್ಟರಲ್ಲಿ ಕೃತ್ರಿಮದಿಂದ ವಿದ್ಯುತಂಕಡಲಲ್ಲಿ ಮುಳುಗಿಸಿ ಅದರಲ್ಲಿದ್ದ ಧನ ಕನಕ ವಸ್ತ್ರಾಭರಣಗಳನ್ನಪಹರಿಸಿಕೊಂಡು ತಡಿಯನ್ನು ಸೇರಿದ ಹಯಗ್ರೀವನು ಇವನ ಸಹಕಾರಿಗಳಾದ ಇಬ್ಬರು ನಾವಿಕರು, ತಾವು ತಂದ ಪದಾರ್ಥಗಳನ್ನು ಬಚ್ಚಿಡಲು ಹಯಗ್ರೀವನನ್ನು ಕಳುಹಿಸಿ, ತಡಿಯಲ್ಲಿ ನಿಂತು ಮಾತನಾಡಿಕೊಳ್ಳುವ ಕಾಲದಲ್ಲಿ ಒಬ್ಬನು ಮತ್ತೊಬ್ಬನನ್ನುಕುರಿತು;—ನಾವು ಮೂರುಜನವು ಹಡಗನ್ನು ಮುಳುಗಿಸಿದ್ದು ಬಹು ಆಶ್ಚರ್ಯವೊ? ದೈವಸಂಕಲ್ಪವಿದ್ದರೆ ಈ ಕೆಲಸವು ಮೂರು ಇಲಿಗಳಿಂದಲಾಗುತ್ತಿತ್ತು. ನಮಿಗೆ ಆ ಹಡಗಿನಲ್ಲಿ ಸಿಕ್ಕಿದ ಪದಾರ್ಥಗಳಿಂದ ಇಂಥಾ ಇಪ್ಪತ್ತು ಹಡ

ಗುಗಳನ್ನು ಮುಳುಗಿಸಿದ ಪಾಪ ನಿವರ್ತನೆಯಂ ಮಾಡಿಕೊಳ್ಳಬಹುದು. ಬೌದ್ಧರಿಗೆ ಸಂಬಂಧಪಟ್ಟವುಗಳಾದರೆ, ನಲವತ್ತು ಹಡಗುಗಳನ್ನು ಮುಳುಗಿಸಿದ್ದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬಹುದು. ಹಯಗ್ರೀವನು ಹಿಂತಿರಗಿ ಬರುವದರಲ್ಲಿ ಯಾತಕ್ಕೊ ಸಾವಕಾಶ ಮಾಡುತ್ತಿದಾನೆ. ಇವನು ಹೋದ ಹೊತ್ತಿನಲ್ಲಿ ಇದರ ಹತ್ತರಷ್ಟು ಪದಾರ್ಥಗಳನ್ನಾದರೂ ಆವಿಸಬಹುದಾಗಿತ್ತು. ಆಗೋ! ಕೋಟೆಬಾಗಲಲ್ಲಿ ಘಂಟೆಯಂ ಹೊಡ್ಡದು ಪಹರೆಯಂ ಬದಲಾಯಿಸುತ್ತಿದಾರೆ. ಇನ್ನೆಷ್ಟುಹೊತ್ತು ನಾವಿಲ್ಲಿ ಕಾದಿರಬೇಕು? ಸ್ಮಶಾನದ ಗವಿಗಳ ದಾರಿಯು ನಿನಗೆ ಗೊತ್ತಿದ್ದರೆ ಹೋಗಿ ಅವನನ್ನು ಓಡಿಸಿಕೊಂಡು ಬಾ ; ಇಲ್ಲದಿದ್ದರೆ ಆಕರ್ಷಿಣಿಯು ಇವನನ್ನು ಸಮರಾತ್ರಿಯವರಿಗು ನಿಲ್ಲಿಸಿಕೊಳ್ಳುವಳೆನಲದಕ್ಕವನು ;—

ಆದಾರಿಯು ನನಿಗೆ ಗೊತ್ತಿಲ್ಲ. ಈಗ ನಾವು ಇರತಕ್ಕಸ್ಥಿತಿ ಅವನಿಗೆ ಗೊತ್ತೇ ಇರುತ್ತೆ. ಆದ್ದರಿಂದ ಇವನು ಸ್ತ್ರೀವಿಲಾಸಕ್ಕೊಳಪಟ್ಟು ಸಾವಕಾಶಮಾಡಿರುವಹಾಗೆ ಕಾಣುವದಿಲ್ಲ. ಪ್ರಾಯಶಃ ಆವಳು ಇವನಿಗೆ ಮೋಸಮಾಡಿರುವಂತೆ ಕಾಣುತ್ತೆನಲದಕ್ಕವನು ;—ಹಾಗೇನಾದರೂ ಆಗಿದ್ದರೆ ನಾವು ಈಗ ತುಂಬಾ ಅಪಾಯಸ್ಥಿತಿಯಲ್ಲಿರುತ್ತೇವೆ. ಆಗೋ! ನೋಡು ಅಲ್ಲ್ಯಾರೋ ಬರುತ್ತಿರುವಂತೆ ಕಾಣುತ್ತೆ. ಅವನ ನಡೆಯನ್ನು ನೋಡಿದರೆ ರವಿವರ್ಮನ ಮುಖ್ಯಸ್ನೇಹಿತನಾದ ರಾಮವರ್ಮನಂತೆ ಕಾಣುತ್ತೆ. ಹೌದು! ಹೌದು! ದೋಣಿಯನ್ನು ತಳ್ಳು ತಳ್ಳು, ಹಯಗ್ರೀವನದೃಷ್ಟವಿದ್ದಂತಾಗಲೆಂದು ತಮ್ಮ ದೋಣಿಯನ್ನು ನೀರಿಗೆ ತಳ್ಳಿ, ಅದರಲ್ಲಿ ಕೂತುಕೊಂಡು ತ್ವರಿತದಿಂ ನಡಿಸುತ್ತಾ ಸಮುದ್ರಪ್ರವೇಶವಂಮಾಡಿದರು.

ಅಷ್ಟರಲ್ಲಿ ರಾಮವರ್ಮನು ತನ್ನ ಸ್ನೇಹಿತನಾದ ರವಿವರ್ಮನನ್ನು ಎಲ್ಲಾ ಕಡೆಯಲ್ಲೂ ಹುಡುಕಿ ಕಾಣದೆ, ಸಮುದ್ರತೀರದಲ್ಲಿ ಸಂಚರಿಸುತ್ತಾ ;—ರವಿವರ್ಮನು ತನ್ನ ಹಡಗು ಒಂದು ಕ್ಷಣಮಾತ್ರದಲ್ಲಿ ಯಾವದೊಂದು ಕಾರಣವು ಇಲ್ಲದೆ ಹ್ಯಾಗೆ ಮಾಯವಾಯಿತೊ ಹಾಗೆಯೆ ಇವನುಸಹ ಮಾಯವಾಗಿರುತ್ತಾನೆ. ಹಡಗು ಯಾವಕಾರಣದಿಂದ ಮುಳುಗಿಹೋಯಿತೆನ್ನುವದನ್ನು ಆಲೋಚಿಸಲಶಕ್ಯವಾದಾಗ್ಯೂ, ರವಿವರ್ಮನು ಕಾಣಿಸದೆ ಇರುವದಕ್ಕೆ ಕಾರಣವುಂಟು. ಇವನ ಹಡಗು ಮುಳುಗಿಹೋಯಿತೆಂಬ ವರ್ತಮಾನ ತಿಳಿದಕೂಡಲೆ ಇವನ ಸಾಲಗಾರರು ವಾರಂಟುಗಳನ್ನು ತೆಗೆದುಕೊಂಡು ಬರುವರು. ಆದಕಾರಣ ಯಾವದೋ ಒಂದು ಗುಪ್ತಸ್ಥಾನದಲ್ಲಿ ಬಿತುಕೊಂಡಿರಬಹು

ದೆಂದು, ದೂರದಲ್ಲಿ ಅಲೆಗಳ ಮಧ್ಯದಲ್ಲಿ ಒಂದು ಪದಾರ್ಥವನ್ನು ಕಂಡು ಇದೇನು ಹಣ್ಣು ತೆಂಗಿನಕಾಯೋ! ಅಥವಾ ಮನುಷ್ಯನ ತಲೆಯೋ! ಎಂದು ಅಂದುಕೊಳ್ಳುತ್ತಾ; ಅಷ್ಟರಲ್ಲಿ ಅಲೆಗಳಲ್ಲಿ ಬಡ್ದಾಡುತ್ತಿರುವ ಒಬ್ಬ ಮನುಷ್ಯನನ್ನು ಕಂಡವನಂ ಕುರಿತು;— ಒಂದು ಕ್ಷಣಮಾತ್ರ ಧೈರ್ಯವಂ ತಂದುಕೊಂಡು ತಲೆಯನ್ನು ಮೇಲಕ್ಕೆತ್ತಿಕೊಂಡಿರು. ನಾನು ನಿನಗೆ ಸಹಾಯವಾಗಿ ಬರುತ್ತೇನೆಂದು, ನೀರಿನಲ್ಲಿ ಅಲೆಗಳಮಧ್ಯ ನುಗ್ಗಿ ಆಯಾಸದಿಂದ ಮುಳಗಿಹೋಗುತ್ತಿದ್ದೊಬ್ಬ ನಾವಿಕನನ್ನು ತಡಿಗೆಳದುಕೊಂಡು ಬಂದವನನ್ನು ಆದರಂಗೈದು ಅವನಿಗೆ ಕೊಂಚ ಪ್ರಜ್ಞೆಬಂದವಡನೆ;—ನೀನು ನಿನ್ನ ಪ್ರಾಣಕ್ಕಾಗಿಬಹಳವದ್ದ್ಯಾಡಿದೆ, ಅದು ಸಾರ್ಥಕವಾಯಿತು. ಇನ್ನು ನಿನ್ನ ಪ್ರಾಣಭಯವೇನೂ ಇರುವದಿಲ್ಲ. ಇಗೋ ನಿನ್ನ ಮುಖ, ಕಾಂತಿಕೂಡುತ್ತಿರುವದು. ಆದರೆ ನೀನ್ಯಾರು? ನೀರುಪಾಲಾದ ವಿದ್ಯುತ್ತು ಹಡಗಿನ ನಾವಿಕರಲ್ಲಿ ಉಳಿದವನೊ? ಎಂದು, ನಾವಿಕನು ದೈವಸ್ಮರಣೆಯಂ ಮಾಡುತ್ತಿರುವದನ್ನು ಕಂಡು ಸುಮ್ಮನಾದನು.

ನಾವಿಕನು ದೇವರನ್ನು ವಂದಿಸಿದನಂತರ ನಿಮ್ಮನ್ನು ವಂದಿಸುವೆನು. ನನ್ನ ಭಾಗಕ್ಕೆ ನೀವೇಪ್ರತ್ಯಕ್ಷದೈವವು. ನಿಮ್ಮ ಸಹಾಯದಿಂದ ನನ್ನ ಪ್ರಾಣ ವುಳದುಕ್ಕೊಂಡಿತು. ಎರಡು ತಾಸುಗಳವರಿವಿಗೂ ನಾನು ಬಲವಾಗಿ ಈಜಿದೆನು. ನಂತರ ಬಲಕುಂದಿ ಸಮುದ್ರದ ಪಾಲಾಗುತ್ತಿದ್ದೆ, ಅಷ್ಟರಲ್ಲಿ ನಿಮ್ಮ ಸಹಾಯ ದೊರಕಿತು. ನನ್ನ ಪ್ರಾಣಕ್ಕಾಗಿ ದೇವರನೊಂದಿಸುವೆನು. ಮತ್ತು ನನಿಗೆ ಈ ವಿಪತ್ತನ್ನುಂಟುಮಾಡಿದ ದಯಾರಹಿತರಾದ ದುರಾತ್ಮರಂತೆ ಎಲ್ಲಾ ಮನುಷ್ಯರನ್ನು ಸೃಷ್ಟಿಸಲಿಲ್ಲವಾಗಿ ಮತ್ತು ದೇವರನ್ನು ಪ್ರಾರ್ಥಿಸುವೆನು. ನನ್ನನ್ನು ಈ ಕಷ್ಟಕ್ಕೆ ಗುರಿಮಾಡಿದ ದುರಳುತನವನ್ನು ನೋಡಿದರೆ ಮನುಷ್ಯರನ್ನು ಸೃಷ್ಟಿಸಿದ ದೈವವೆ ಲೋಕಕಂಟಕವಾದದ್ದೆಂದು ತಿಳಿದುಕೊಂಡಿರುತ್ತಿದ್ದೆ, ಆದರೆ ಆ ಕಷ್ಟದಿಂದ ನಿವಾರಣೆಮಾಡಿದ ತಮ್ಮ ಔದಾರ್ಯದಿಂದ ಜಗದ್ವ್ಯಾಪಕನ ಮಾಹಾತ್ಮೆ ಚನ್ನಾಗಿ ಗೊತ್ತಾಯಿತೆಂದ ನಾವಿಕನಂಕುರಿತು, ರಾಮವರ್ಮನು;—ದ್ರೋಹದಿಂದ ಹಡಗು ಮುಳಗಿಹೋಯಿತೊ? ಅಲ್ಲವೆ ಬಿರುಗಾಳಿಯಿಂದಲೊ? ಎಂದುದಕ್ಕೆ;—

ನಾವಿಕನು ಪಂಚಭೂತಗಳಲ್ಲಿ ತಪ್ಪೇನು ಇರುವದಿಲ್ಲ. ಹಡಗು ಒಡದು ಮುಳಗಿದ್ದು ಮನುಷ್ಯಪ್ರಯತ್ನವು. ಉಡುಪಪತಿಯು ಆತನ ಸಹಕಾರಿಗಳಾದ ಇಬ್ಬರು ನಾವಿಕರು ಹಡಗಿಗೆ ತೂತು ಕೊರದು ಅದನ್ನು ಮುಳಗಿಸಿ ಅದರಲ್ಲಿದ್ದ ಐಶ್ವರ್ಯವನ್ನು

ತೆಗೆದುಕೊಂಡು ಬಂದು ದೋಣಿಯಲ್ಲಿ ಕೂತುಕೊಂಡು ಓಡಿಹೋದರೆಂದನು.

ಅದಕ್ಕೆ ರಾಮವರ್ಮನು ಹಾಗೋ? ಈಗತಾನೆ ನಾನಿಬ್ಬರನ್ನು ಕಂಡೆನು. ನಾನು ಬರುವದನ್ನು ಕಂಡು ಭಯಗ್ರಸ್ತರಂತೆ ದೋಣಿಯಲ್ಲಿ ಕೂತುಕೊಂಡು ಓಡಿಹೋದರು. ಎನಲು ನಾವಿಕನು ;—ಮೂರುಜನರಿರಬೇಕು. ಇವರು ಬರ್ಬರದೇಶದವರಂತೆ ರುಮಾಲಿಗೆ ಚುಂಗು ಬಿಟ್ಟಿದ್ದರೆ ಎನಲು, ರಾಮವರ್ಮನು ;—ಹೌದು, ಅವರು ತಮ್ಮ ಸೂರೆಯೊಂದಿಗೆ ಸಮುದ್ರದಲ್ಲಿ ಓಡಿಹೋಗುತ್ತಾ ಇರುವಂತೆ ಕಾಣುತ್ತೆ. ಆದರೆ ಈಗ ನೀನು ಹೇಳಿದಮೇರೆ ನಿನ್ನ ಪ್ರಾಣಭಯವೆವರಿಂದುಂಟಾಯಿತು ಪ್ರಾಣಬಚಾವಣಿ ನನ್ನಿಂದಾಯಿತೆಂನ್ನುವದು ನಿಜವಾದರೆ, ಈಗ ನಾನು ಹೇಳುವರೀತಿ ಕೇಳುವನಾಗು. ಇಗೋ ಇಲ್ಲೊಂದು ದೋಣಿ ಬಿಟ್ಟಿರುವದು. ಇದರಲ್ಲಿ ಕೂತು ನನ್ನಸಂಗಡ ಬರುವನಾಗು. ನಾವು ಇವರಿಬ್ಬರನ್ನು ಹಿಡಿಯೋಣವೆಂದು, ದೋಣಿಯಲ್ಲಿ ಅವರೀರ್ವರುಂ ಕೂತು ನಾವಿಕರು ಹೋದ ಮಾರ್ಗವಾಗಿ, ಬ್ರಹ್ಮಪುತ್ರಾನದಿಯಲ್ಲಿ ದೋಣಿಯನ್ನು ನಡಿಸಿಕೊಂಡು ಹೋದರು.

ತೃತೀಯಾಶ್ವಾಸ.

ಅತ್ತಲಾ ಹಯಗ್ರೀವನು ವಿದ್ಯುತನ್ನು ಸೂರೆಮಾಡಿದ, ಧನಕನಕ ವಸ್ತ್ರಾಭರಣಗಳಂ ತನ್ನ ಸಹಕಾರಿಗಳಾದ ನಾವಿಕರೊಂದಿಗೆ ತಡಿಗೆ ತೆಗೆದುಕೊಂಡುಬಂದು, ಅವರೀರ್ವರನ್ನಲ್ಲಿ ಕಾದಿರುವಂತೆ ನೇಮಿಸಿ ಸಾಮಾನುಗಳನ್ನು ಭದ್ರಪಡಿಸಲು ಪೂರ್ವ ಸಂಕೇತದಮೇರೆ, ಆಕರ್ಷಿಣೀಯು ಬಂದು ಕಾದಿರುವ ಸ್ಮಶಾನದಬಳಿ ಗವಿಗೆ ಬಂದು, ಆಕೆಯನ್ನು ಕಂಡವುಗಳನ್ನವಳವಶಕ್ಕೆ ಕೊಟ್ಟು ಭದ್ರಪಡಿಸಿದನು. ಇವನ ದುರಳುತನವನ್ನು ಕಂಡು ಆಕ್ಷೇಪಿಸಲುಪಕ್ರಮಿಸಿದ ಆಕರ್ಷಿಣಿಯಂಕುರಿತು ;—ಸಾಕು ಸಾಕು—ನಿನ್ನ ಮಾತು ನಿಲ್ಲಿಸು. ನಾನು ನಿನ್ನಬಳಿಗೆ ನನ್ನ ಪಾಪನಿವಾರಣೆಮಾಡಿಕೊಳ್ಳಲು ಬರಲಿಲ್ಲ. ಒಬ್ಬನನ್ನಾಗಲಿ ಐವತ್ತು ಜನಗಳನ್ನಾಗಲಿ ಸಮುದ್ರದ ಮೊಸಳೆಗಳಿಗೆ ಆಹುತಿಯನ್ನಾಗಿ ಕಳುಹಿಸಿದರೇನಾಗುವದು? ಇದರಿಂದ ಪಾಪವೆಂದರೇನು? ಅಧಮರಾದ ನಾವಿಕರ ಸಮುದಾಯದಲ್ಲಿ ಒಬ್ಬನಿಗೆ ಮತ್ತೊಬ್ಬ ಹೀಗೆ ಮಾಡುವದು ಸ್ವಭಾವವು.

ಇವರಲ್ಲಿ ಕೆಲವರಿಗೆ ಇಂಥಾ ಧೈರ್ಯವು ಅನುಕೂಲವು ಇಲ್ಲದ್ದರಿಂದ ಚಿಕ್ಕ ಚಿಕ್ಕ ಕಳ್ಳತನಹೊರ್ತು ಇಂಥಾ ಕಾರ್ಯಕ್ಕೆ ಪ್ರವೇಶಿಸುವದಿಲ್ಲ. ಆ ಸೊಗಸಾದ ಹಡಗು ಮುಳುತ್ತಿರುವದನ್ನು ಕಂಡು ನನಗೆ ನಿಶ್ಚಯವಾಗೂ ಪಶ್ಚಾತ್ತಾಪ ಉಂಟಾಯಿತು. ಅದು ಬಹಳ ಒಳ್ಳೇಹಡಗು. ಆದರದರ ನಾವಿಕರನ್ನು ದಿವಸಕ್ಕೆ ಎರಡುಸಲವಾದರು ಮುಳುಗಿಸುವೆನು. ಇದರಲ್ಲಿ ಕೊಂಚವಾದರು ಪಶ್ಚಾಪ ಉಂಟಾಗಲಾರದು. ಕಣ್ಣುಗಳನ್ನು ಬಿಡೆದೆ ಇರುವ ಹೊಸನಾಯಿಮರಿಗಳನ್ನು ನೀರಿನಲ್ಲಿ ಹಾಕುವದರಲ್ಲಿ ಉಂಟಾಗುವ ಪಶ್ಚಾತ್ತಾಪಕ್ಕಿಂತ ಬೇರೆ ಹೆಚ್ಚಾದ ಪಶ್ಚಾತ್ತಾಪ ಈ ಜನಗಳಲ್ಲುಂಟಾಗುವದಿಲ್ಲ. ನೀನು ಸುಖವಾಗಿರೆಂದೊಂದು ಉಂಗರವನ್ನು ತೋರಿಸಿ, ಈ ಉಂಗುರವನ್ನು ತಂದು ತೋರಿಸುವವನಿಗೆ ಹೊರ್ತು ಬಾಕಿ ಯಾರಿಗೂ ಇಲ್ಲಿಟ್ಟಿರತಕ್ಕ ಭಾಗ್ಯವನ್ನು ತೋರಿಸಬೇಡ. ಚೆನ್ನಾಗಿ ಜ್ಞಾಪಕವಿಟ್ಟುಕೊ. ಅವನಮುಖಾಂತ್ರವೆ ಚಂದ್ರನಗರದಲ್ಲಿ ಈವಿಷಯವಾಗೇನು ಮಾತನಾಡಿಕೊಳ್ಳುತ್ತಾರೆ, ಹೇಳಿಕಳುಹಿಸುವದೆಂದವಳಂ ಆಲಿಂಗಿಸಿಕೊಂಡು ಹೊರಟುಹೋದನು.

ಆಕರ್ಷಿಣಿಯು ;—ಎಷ್ಟು ಅದ್ಭುತವಾದ ಪಾಪಕೃತ್ಯವನ್ನು ಈ ಕ್ರೂರನಾದ ಪಶ್ಚಾಪವಿಹೀನ ಪಾಪಿಯು ಮಾಡಿರುವನು. ನನ್ನ ವಿಶ್ವಾಸವು ಇದನ್ನೆಲ್ಲಾ ಸಹಿಸಿಕೊಂಡು ಹೋಗುವದೆಂದು ತಿಳಿದಿರುವನು. ನನ್ನ ಕಿವಿಗಳಲ್ಲಿ ನಿಟ್ಟುಸುರೆ ತುಂಬಿರುವವು. ಹೃದಯವು ಕಂಪನಂಗೈಯುವದು. ಶರೀರವೆಲ್ಲಾ ತಣ್ಣಗಾಗುತ್ತಿರುವದು. ನಾನು ಮೂರ್ಛೆಹೋಗುವಂತೆ ಕಾಣುವದು. ಈ ಭಯಂಕರವಾದ ಸ್ಥಳದಲ್ಲಿ ಹಾಗಾದರೇನು ಗತಿ? ಈ ಸಮಯದಲ್ಲಿ ಬೆಳಕು ಕೆಟ್ಟುಹೋದರೇನುಗತಿ? ಎಂದು ತಲ್ಲಣಿಸುತ್ತಿಲ್ಯಾರೋ ಬರುವಂತೆ ಕಾಲು ಶಬ್ದವಾಗುತ್ತಿಂದು, ಅಲ್ಲಿ ಬರತಕ್ಕವರ್ಯಾರೆಂದು ಕೂಗಿಕೊಂಡು, ನಿಂತಹಾಗೆಯೇ ಮೂರ್ಛೆ ಹೋದಳು.

ಅಷ್ಟರಲ್ಲಿ ನೀನ್ಯಾರೆಂದು ರವಿವರ್ಮನು ಸಾಲಗಾರರಬಾಧೆಯನ್ನು ತಪ್ಪಿಸಿಕ್ಕೊಳ್ಳಲು ಬೆತುಕೊಂಡಿರಬೇಕೆಂದು ಆ ಗವಿಗೆ ಬಂದವಳಂಕಂಡು ;—ಇವಳು ಆಕರ್ಷಿಣಿಯಲ್ಲವೆ, ಎಂದುಕೊಂಡು, ಇವಳು ಕಲ್ಲಿನಂತೆ ತಣ್ಣಗೆ ಯಾತಕ್ಕಿರುವಳು. ಇಲ್ಲಿ ಗ್ಯಾತಕ್ಕೆ ಬಂದಳೆಂದವಳಿಗೆ ಶೈತ್ಯೋಪಚಾರವನ್ನುಮಾಡಿ, ಧೈರ್ಯವನ್ನುತಂದುಕೊ ಕಣ್ಣುಬಿಟ್ಟು ನೋಡುವಳಾಗು, ನಿನಗೆ ಸ್ನೇಹಿತನ ಸಹಾಯದೊರಕಿರುತ್ತೆ. ಹೆದರಬೇಡ, ನನ್ನ ಗುರುತು ನಿನಗಿಲ್ಲವೆ, ಎಂದುದಕೆ ಆಕರ್ಷಿಣಿಯು ಸ್ಮೃತಿಯಂತಾಳಿ;—ನಿಮ್ಮನ್ನು

ನಾನು ಬಲ್ಲೆನು. ನಮ್ಮ ಪ್ರಭುಗಳು, ಸ್ವರ್ಗದಿಂದ ಬಂದಂತೆ ಕಾಣುವದು. ಈಗ ನಿಮ್ಮ ಸಂಗಡ ಹೇಳತಕ್ಕದೊಂದು ಮಾತಿರುವದೆಂದು ಹೇಳಲುಪಕ್ರಮಿಸುವಷ್ಟರಲ್ಲಿ;

ಅಲ್ಲೆ ಬೆತುಕೊಂಡಲ್ಲಿಯ ವಿದ್ಯಮಾನವನ್ನು ಹೊಂಚುಕಾದು ಕೇಳುತ್ತಿದ್ದ ಹಯಗ್ರೀವನು ;—ನೀನು ಹೇಳತಕ್ಕ ಮಾತುಗಳನ್ನು ಸ್ವಭಾವವಾದ ಬಾಯಲ್ಲಿ ಹೇಳಲಾಗುವದಿಲ್ಲ. ನಿನ್ನ ಗೋಮಾಳೆಯಲ್ಲಿ ಹೊಸದಾಗಿ ಮಾಡಲ್ಪಟ್ಟ ರಕ್ತಭರಿತವಾದ ಬಾಯಲ್ಲಿ ಹೇಳೆಂದು, ತನ್ನ ಕೈ ಕಠಾರಿಯಿಂದವಳ ಕುತ್ತಿಗೆಯನ್ನು ತಿವಿದನು. ಘಾಯವನ್ನು ಹೊಂದಿದ ಆಕರ್ಷಿಣಿಯು ಗವಿಯಂಬಿಟ್ಟು ಓಡಿಹೋದಳು. ನಂತರ ಹಯಗ್ರೀವನು ;—ಇವಳಸಂಗತಿಯಾಯಿತು ಇನ್ನು ನಿಮ್ಮನ್ನು ವಿಚಾರಿಸಿಕೊಳ್ಳುವೆನೆಂದು, ಕಠಾರಿಯಿಂದ ರವಿವರ್ಮನನ್ನು ತಿವಿಯಲುಪಕ್ರಮಿಸಿದನು. ರವಿವರ್ಮನು ;—ನಿನ್ನ ಶೌರ್ಯವೆಲ್ಲ ಹೆಂಗಸಿನ ಕೊಲೆಗೆ ಯೋಗ್ಯವೇಹೊರ್ತು ನನ್ನಲ್ಲಿ ಜರಗುವದಿಲ್ಲವೆಂದವನಸಂಗಡ ಮಲ್ಲಯುದ್ಧವಂ ಮಾಡಿ ಅವನನ್ನು ತನ್ನ ಆಯುಧದಿಂದ ಹೊಡದು ನೆಲಕ್ಕೆ ಉರಳಿಸಿ;—ಇವನು ಸತ್ತಹಾಗೆ ಕಾಣುವದಿಲ್ಲ. ಮೂರ್ಛೆ ಹೋಗಿರಬಹುದು. ಆದರೆ ಆ ದೌರ್ಭಾಗ್ಯಳಾದ ಆಕರ್ಷಿಣಿಯೆಲ್ಲಿರುವಳು, ಗವಿಯಿಂದಾಚೆಗೆ ಓಡಿಹೋದಹಾಗೆ ಕಾಣುತ್ತೆ. ಈ ದುರಾತ್ಮನನ್ನು ಇವನ ಕೃತ್ಯವನ್ನು ನೋಡಿದರೆ ಇಲ್ಲೆ ಬಾಯಲ್ಲಿ ನಿಃರುಚಿಡುವವರಿಲ್ಲದೆ, ಪ್ರಾಯಶ್ಚಿತ್ತವೂ ಇಲ್ಲದೆ, ಸಾಯಲು ಅರ್ಹನು. ಆದರೆ ಇವನಿಗೆ ಪ್ರಜ್ಞೆಬಂದು ಈ ಕತ್ತಲೆಯಲ್ಲಿ ಸಾಯುತ್ತಾ ಇರುವದನ್ನು ತನ್ನ ಕಲ್ಮಷ ಹೃದಯವು ಪ್ರಾಯಶ್ಚಿತ್ತವಿಲ್ಲದೆ ಯಮದೂತರ ವಶವಾಗುತ್ತಿರುವದನ್ನು ಕಣ್ಣಾರ ಕಾಣುತ್ತಾ ಭಯಗ್ರಸ್ತನಾಗುವನು. ಸಮೀಪದಲ್ಲೆ ಸಮುದ್ರತೀರದಲ್ಲಿ ವೈದ್ಯಶ್ರೇಷ್ಠನಾದ ಸುಬಾಹುವಿನ ಮನೆ ಇರುವದು. ಇವನನ್ನಲ್ಲಿಗೆ ತೆಗೆದುಕೊಂಡು ಹೋಗುವೆನು. ಆತನ ಆದರಣೆಯಿಂದಿವನು ಬದಿಕಿಕೊಂಡು ಇನ್ನುಮೇಲಾದರು ತನ್ನ ಪಾಪಕೃತ್ಯಗಳನ್ನು ಬಿಟ್ಟು ಜೀವಿಸಿದರೆ ಉತ್ತಮ; ಅಲ್ಲವಾದರೆ ತಕ್ಕ ಪ್ರಾಯಶ್ಚಿತ್ತವನ್ನಾದರು ಮಾಡಿಕೊಂಡು ಪ್ರಾಣವನ್ನು ಸುಖದಿಂದ ಬಿಡಲೆಂದವನನ್ನು ತೆಗೆದುಕೊಂಡು ಸುಬಾಹುವಿನ ಮನೆಗೆ ಹೋದನು.

ಚಂದ್ರನಗರದಲ್ಲಿ ವಿದ್ಯುತ್ತು ಮುಳಗಿಹೋದದ್ದು, ರವಿವರ್ಮನು ಸೇಲಗಾರ್ರ ಬಾಧೆಯಂ ತಡಿಯಲಾರದೆ ಬೆತಿರುವದು, ರಾಮವರ್ಮನ ನೆಲೆಯಿಲ್ಲದೆ ಇರುವದು, ಜನಜನಿತವಾಗಿ, ಎಲ್ಲರು ಮಾತನಾಡಿಕೊಳ್ಳುತ್ತಿರುವಾಗೊಂದುದಿವಸ ; ಕೋಶಾಧೀಶ್ವರನಾದ ಕಳಿಂಗನ ಅರಮನೆಯ ಉದ್ಯಾನದಲ್ಲಿ, ಕಮಲಿನಿಯು ಪದ್ಮಿನಿಯು ಸೇರಿ ಮಾತನಾಡಿ

ಕೊಳ್ಳುತ್ತ, ಕಮಲಿನಿಯು, ಪದ್ಮಿನಿಯಂಕುರಿತು ;—ನನ್ನ ಮಾತಿನಲ್ಲಿಷ್ಟು ಬೇಸರ ವ್ಯಾತಕ್ಕೆ? ಇಷ್ಟು ಚಿಂತಾಕ್ರಾಂತಳಾಗಿರುವದು ಸರಿಯಲ್ಲ. ನೀನು ದೃಢಚಿತ್ತಳಾಗಿಯು ಧೈರ್ಯಶಾಲಿನಿಯಾಗಿರೆಂದು, ಹೇಳುವದಂಕೇಳಿ ಪದ್ಮಿನಿಯು ;—ನಾನು ಶಾಂತಳಾಗಿಲ್ಲವೆ ಎಂದುದಕೆ ಕಮಲಿನಿಯು;—ಹೌದು ನೀನು ಹಾಗಿರುವದು ನಿಜ; ಆದರೆ ನೀನು ಉಲ್ಲಾಸವಾಗಿಯೂ ಇರಬೇಕೆಂಬುವದು ನನ್ನ ಕೋರಿಕೆ. ನನ್ನನ್ನು ನೋಡುವಳಾಗು, ನನ್ನ ಪ್ರಿಯನುಸುದ ಮಾಯವಾಗಿರುವದಿಲ್ಲವೆ? ನೀನುಮಾತ್ರ ಯಾತಕ್ಕಿಷ್ಟು ವ್ಯಸನಪಡುವೆ? ಎನಲು ಪದ್ಮಿನಿಯು ;—ಹೌದು ನೀನು ಹೇಳಿದ್ದು ನಿಜ. ಆದರೆ ವ್ಯಸನವು ಯಾವಾಗಲು ಸ್ವಾರ್ಥಸ್ವಭಾವವುಳ್ಳದ್ದು. ನಿನ್ನ ಕಷ್ಟವನ್ನು ನನ್ನ ವ್ಯಸನದಲ್ಲಿ ಮರತುಬಿಟ್ಟೆನು. ಆದರೆ ಮತ್ತೊಬ್ಬ ನನ್ನು ಮದುವೆಯಾಗೆಂದು ಬಲಾತ್ಕಾರಪಡಿಸಲ್ಪಡದಿದ್ದರೆ, ನಾನು ನಿನ್ನಂತೆಯೆ ಉಲ್ಲಾಸವಾಗಿರಬಹುದಾಗಿತ್ತೆಂದುದಕೆ, ಕಮಲಿನಿಯು ;—ನಿನ್ನನ್ನು ಬಲಾತ್ಕಾರಪಡಿಸುತ್ತಿರುವದನ್ನು ಕಂಡು ನಾನು ಪಶ್ಚಾತ್ತಾಪಪಡುತ್ತಿರುವೆನು. ಆದರೆ ನನ್ನ ಪ್ರಿಯನ ಗೋಚರವಾಗಿರುವದಂಕಂಡು, ನೀನು ಪಶ್ಚಾತ್ತಾಪಪಡಬೇಕಾದ್ದಿಲ್ಲ. ಯಾತಕೆಂದರೆ, ಅಗೋ! ಆ ಸೂರ್ಯಬಿಂಬವು, ಅವನ ಕಿರಣಗಳು, ಇಲ್ಲಿರತಕ್ಕ ಪುಷ್ಪಗಳು, ನನಿಗೆ ಮೋಹಕಿಂತಲಧಿಕವಾದ ವಸ್ತುಗಳಾಗಿವೆ. ಇವುಗಳಿಂದ ನನಿಗೆ ಸಂತೋಷವುಂಟಾಗುವದೆನಲು; ಪದ್ಮಿನಿಯು ;—ಹಾಗಾದರೆ ನಿನ್ನ ಸಂತೋಷವೆಂಬುವದು ಪತಂಗಗಳ ಸಂತೋಷದಂತೊಂದುವಸಂತದಲ್ಲಿ ಪೂರೈಸಿಹೋಗುವ್ವದೆ? ಅದುಹಾಗಿರಲಾರದೆಂದವಳಂ ಕುರಿತು, ಕಮಲಿನಿಯು ;—ನಾನು ಪತಂಗವಲ್ಲ. ಆದರೆ ಪಕ್ಷಿಗಳಂತೆ ಇದ್ದುಕೊಂಡು ವರುಷಕ್ಕೊಂದಾವರ್ತಿ ಮೋಹವಶವಾಗುವಂತಿದ್ದರೆ ಚೆನ್ನಾಗಿತ್ತೆಂದು ಹಂಬಲಿಸುವೆನು. ನಾನೊಂದು ಕವಿವಾಕ್ಯವನ್ನು ಹೇಳುವೆನು ಕೇಳು. ಅದರಿಂದ ನಿನಗೆ ಸುಖತೋರುವುದೆಂದು;—

ಕಂದ ॥ ಪಕ್ಷಿಗಳುಮಾತ್ರಮೆನಗಿರ ।
ಲೀಕ್ಷಣ ದೋಳ್ ಪಾ ರುತಂಬಿ ಡುತಿರ್ದೆ ಕ್ಷಿತಿಯಂ ॥
ಈಕ್ಷಿಸೆ ನುಮೋಹ ಶರವಂ ।
ಪಕ್ಷಿಗಳಂತೊರುಮೆಕೋರ್ಮೆ ಯಲ್ಲದೆ ನಾನುಂ ॥
ಮಾರುತನಕಾಣ್ಕೆಮುಗಿಲೋಳ್ ।
ಪರಿಪರಿಯ ಬೆಳಕುಪೊಳೆವ್ವದ ಕಾಣ್ಕೆಗ ಗನದೋಳ್ ॥

ಮರಗಳೊಳೆಲೆಮನೆಯುಂಗೈದು ।
ಮರೆವೆನುಮೆಂಬರನನುಪಕ್ಷಮೆನಗಿರುತಿರ್ದೊಡೆ ॥

ಪದ್ಮಿನಿಯು ;—ನೀನು ಹೇಳಿದ ವಾಕ್ಯಗಳೇನೊ ಹೊಸದು; ಆದರದರಭಿಃ ಪ್ರಾಯು ಹಳದಾಗಿರುವದು. ಇದು ಪ್ರಪಂಚವಿರುವವರಿಗು ಏಕರೀತಿಯಲ್ಲಿರವದು. ಈ ಪ್ರಪಂಚವು ಈಗಿನಸ್ಥಿತಿಯುಂಮೀರಿ ಉತ್ತಮಸ್ಥಿತಿಯನ್ನೈದುವವರಿಗು ಈ ವಾಕ್ಯಗಳ ಭೀಪ್ರಾಯುವೇಕರೀತಿ ಇರುವದೆನಲು ; ಕಮಲಿನಿಯು ;—ಹೌದು, ಪೂರ್ವದಲ್ಲಿ ಅಶೋಕ ವೃಕ್ಷದಲ್ಲಿದ್ದ ಪಕ್ಷಿಗಳು ಸೀತಾದೇವಿಗೆ ಈ ಪದ್ಯದಭೀಪ್ರಾಯುವನ್ನು ತಮ್ಮ ಮೃದುಸ್ವ ರದಿಂ ಹೇಳಿದಾರಭ್ಯ, ಇದುವರಿಗು ಇದು ಒಂದೇರೀತಿ ಇರುವದು. ಪಕ್ಷಿಗಳಿಗೆ ಮರಣ ಸಂಭವಿಸಿದರು ಅದು ಅವುಗಳಿಗೆ ತಿಳಿಯುವದಿಲ್ಲ. ಮೋಹ ಭಂಗವಾದರು ಅವುಗಳು ನಿಟ್ಟುಸುರನ್ನು ಬಿಡುವದಿಲ್ಲವೆನಲು ;

ಪದ್ಮಿನಿಯು ;—ಇದು ಹಾಗಿರಲಿ, ಅಲ್ಲಿ ಕಾಣಿಸುವವನು ನಮ್ಮ ತಂದೆಯಲ್ಲವೆ? ಆತನನ್ನು ನೋಡುವದುಸಹಾ ನನಿಗೀಗೆ ಭಯುವನ್ನುಂಟುಮಾಡುವದೆನಲು ; ಕಮಲಿನಿ ಯು ;—ಹೌದು ನಾನು ಹಾಲುಕೊಡುವ ತಾಯಿಯಾಗಿದ್ದರೆ ನನ್ನ ಎದೆಯು ಹಾಲುಸುದ ಅವನಂ ಕಂಡಕೂಡಲೆ ಹುಳಿಯಾಗುತ್ತಿತ್ತೆನಲು ;—ಪದ್ಮಿನಿಯು ;—ಅವನು ಹೇಳಿದ ಕಥೆ ಯುನ್ನೇ ಹೇಳುತ್ತಿರುವನು. ಅದೇನಂದರೆ, ರವಿವರ್ಮನಿನ್ನಾರಿಗು ಗೋಚರವಾಗುವ ದಿಲ್ಲ. ಬಲ್ಲಭರಾಯರಿನ್ನು ಸಾವಕಾಶಕ್ಕೆ ಸಮ್ಮತಿಸುವದಿಲ್ಲವೆಂದು ಹೇಳುತ್ತಿರುವನೆನ ಲದಂಕೇಳಿ ಕಮಲಿನಿಯು ;—ಹೌದು ಅವರು ಹೇಳುವ ಕಥೆಯಲ್ಲೊಂದು ತತ್ವವಿರು ವದು. ಅದೇನಂದರೆ;—ಶ್ರೀಮಂತನಾದ ರವಿವರ್ಮ ನಿನ್ನಾರಿಗು ಕಾಣಿಸುವದಿಲ್ಲ. ಬಲ್ಲಭ ರಾಯುನಿಗೆ ಈಗಿನ ವಯುಸ್ಸುಸಹಾ ಮುಂದಿರುವದಿಲ್ಲ. ನಿಮ್ಮ ತಂದೆಯು ಭಯುಪಡ ಲೊಂದು ಕಾರಣವಿರುವದು. ಈಗಿನ ಲಗ್ನಬಳಿಸತಕ್ಕ ಉದ್ದೇಶ ಭಂಗವಾಗಲು ಕಾರ ಣವಾದ ವೃದ್ಧಾಪ್ಯದ ಶ್ಲೇಷ್ಮವೃದ್ಧಿಯಿಂ ಬಲ್ಲಭರಾಯುರಾಕಸ್ಮಿಕವಾಗಿ ಗುದ್ದಲಿಪುರ ಕ್ಕೆ ಸವಾರಿ ಬೆಳಸ್ಯಾರೆಂಬುವದೆನಲು ;—

ಪದ್ಮಿನಿಯು ;—ಛಿ, ಛಿ, ಸುಮ್ಮನಿರುವಳಾಗು. ನಿನ್ನಿಷ್ಟು ಹಗುರವಾದ ಮಾತಿ ನಿಂದ ನನಿಗೆ ವ್ಯಸನ ಉಂಟಾಗುವದೆಹೊರ್ತು ಸಂತೋಷವನ್ನುಂಟುಮಾಡುವದಿಲ್ಲ. ಬಲ್ಲ ಭರಾಯುರಲ್ಲಿ ನೀನು ಮೆಚ್ಚತಕ್ಕ ಗುಣಗಳಿಲ್ಲದಿದ್ದಾಗ್ಯೂ, ಅವರು ಯಾವಾಗಲು ನಿರ್ವಂ ಚಕರಾಗಿಯು, ಮರ್ಯಾದಸ್ತರಾಗಿಯೂ, ಉದಾರಿಗಳಾಗಿಯೂ, ಸತ್ಪ್ರಸಂಗಿಗಳಾಗಿಯೂ,

ದೊಡ್ಡಮನಸ್ಸುಳ್ಳವರಾಗಿಯೂ, ಅವರ ಸಾಧುತ್ವಕ್ಕೆ ತಕ್ಕ ತಿಳುವಳಿಕೆಯುಳ್ಳವರಾಗಿಯೂ, ಇರುವರೆನಲು ; ಕಮಲಿನಿಯು ;—ಹೌದು, ಇವರಲ್ಲಿದೆಲ್ಲಾ ಇದೆ ಎಂಬದಾಗೊಪ್ಪುತ್ತೇನೆ. ಆದರೆ ಈ ಕುಲೀನವಾದ ಫಲವು ಹಣ್ಣಾಗಿ ಹೊಂಬಣ್ಣವಾಗಿರುವದು. ತೋಟಗಾರನದಂ ಕೀಳಲೇಣಿಯಂ ತರುವಷ್ಟರಲ್ಲಿದು ಬಿದ್ದು ಹೋಗಬಹುದು. ಅಗೋ! ಅಲ್ಲಿ ನಿಮ್ಮ ತಂದೆ ಇರುವನು. ಅವನಬಳಿ ಮತ್ಯಾರೊ ಇರುವರು. ವೈದ್ಯಶ್ರೇಷ್ಠನಾದ ಸುಬಾಹುವಂತೆ ಕಾಣುವದು. ಅವರು ತುಂಬಾ ಆಲೋಚನೆಯಂಮಾಡುತ್ತ ಮತ್ತೊಂದು ಮಾರ್ಗದಲ್ಲಿ ಹೋಗುತ್ತಿರುವರು. ಅವರು ಬರುವಷ್ಟರಲ್ಲಿ ಮತ್ತೊಂದು ಕವಿವಾಕ್ಯವಂ ಹೇಳುವೆನು ಕೇಳೆಂದು ;—

ಕಂದ ॥ ಮರಿಕೋಗಿಲೆಯತಳಿತಮಾ ।
ಮರದೊಳ್‌ಕಂಡುಂ ಬಸಂತಥೋಲೆಯು ಬರುವೆನೆಂ ॥
ದರಿಯದೆ ನೀನೇತಕಿರುವೆ ।
ಬರಿದುಂ ನಿನ್ನಾಟವಾಯ್ತು ಪಣ್ಬಲೆಯೆ ಕೇಳು ॥
ಸಾರೆಲೆಸಾರೆನದಿರ್ಪುದೆ ।
ಮಾರನಮರಿಗಿಣಿಯು ಪರ್ಕಿರಿದು ಬೇಡಿದೊಡಂ ॥
ಪರಪುಟ್ಟಗೆ ಪಣ್ಣಲೆಯೊ ।
ಳೇಂರುಚಿ ರುಚಿಯುಳಿದಿರುವನೊಳೇಂರುಚಿಕರಿಂಮದೋಳ್ ॥

ಅಷ್ಟರಲ್ಲಿ ಕಳಿಂಗನು, ಸುಬಾಹುವಿನೊಡನೆ ಅವರಿದ್ದಬಳಿಗೆ ಬಂದು, ಪದ್ಮಿನಿಯಂಕುರಿತು ;—ಎಲೈ ಮಗಳೆ! ನನ್ನಸಂಗಡ ಪರಮ ಸ್ನೇಹಿತನಾದ ಮತ್ತು ಚಮತ್ಕಾರಿಯಾದ ವೈದ್ಯಶಿರೋಮಣಿಯಂ ಕರತಂದಿರುವೆನು. ಈತನು ಧನ್ವಂತ್ರಿ ಹೇಳಿರುವ ವ್ಯಾಧಿಗಳಿಗಿಂತ ಹೆಚ್ಚಾದ ವ್ಯಾಧಿಗಳನ್ನು ವಾಸಿಮಾಡಬಲ್ಲನು. ಈತನು ನಿನ್ನ ಸಂಗಡ ಕೆಲವು ಮಾತನಾಡಬೇಕೆಂಬದಾಗಿದಾನೆ, ಕೇಳುವಳಾಗೆನಲು ; ಪದ್ಮಿನಿಯು ;—ಸುಬಾಹುವು ನನಿಗು ಸ್ನೇಹಿತರು. ಇವರಗತ್ಯ ದಯಮಾಡಿಸಬಹುದು. ಇವರ ಶಾಸ್ತ್ರ ಪ್ರಯೋಗಮಾಡಲು ನನ್ನಲ್ಯಾವಾಗಲು ಅವಕಾಶವಿಲ್ಲದಿದ್ದಾಗ್ಯೂ, ಇವರ ಮಾತಿನಿಂದ ನನಿಗನೇಕವೇಳೆ ಹಿತಕರವಾಗಿರುವದೆನಲು ;—ಸುಬಾಹುವು ;—ಎಲೈ ತಂಗಿಯೆ! ನನ್ನ ಕೈಲಾದಮಟ್ಟಿಗು ನಿಮಗೆ ಸುಖವನ್ನುಂಟುಮಾಡಲು ಶಕ್ತನಾಗಲೆಂಧು ಹಾರೈಸುವೆನೆಂದುದಂಕೇಳಿ ;

ಕಮಲಿನಿಯು ;—ಸುಖವನ್ನುಂಟುಮಾಡಲು ಶಕ್ತಿ ಸಾಲದಿದ್ದರೊಳ್ಳೆದಾಯಿತು; ನಿಮ್ಮ ಮುಖದಿಂದಲಾದರು ಕೊಂಚ ಸುಖತೋರುವಂತೆಮಾಡಿ. ನಿಮ್ಮ ಮುಖವಂ ನೋಡಿದರೆ ವಿಪತ್ತು ನಿವಾರಣೆಯಾಗತಕ್ಕ ಆದರದ ಸ್ವಭಾವ ಕಾಣುವದಕ್ಕೆ ಬದಲಾಗಿ, ವಿಪತ್ತು ಮುಖಾವಲೋಕನವಂ ಮಾಡಿದಂತೆ ಕಾಣುವದು.

ಕಳಿಂಗನು ಪದ್ಮಿನಿಯಂ ಕುರಿತು ;—ಇವರು ಆದರವನ್ನು ಮಾಡದೆ ಇದ್ದಾಗ್ಯೂ ಇವರಲ್ಲಿ ಚಿಕಿತ್ಸೆಗಳುಂಟು. ಹುಡುಗುತನಕ್ಕು, ಅರಳುಮರುಳಾದ ಹುಚ್ಚಿಗು, ಇವರಲ್ಲಿ ಚಿಕಿತ್ಸೆಯುಂಟು. ಸ್ತ್ರೀಯರ ವಿಚಾರವಿಲ್ಲದ ನಂಬಿಕೆಗು ಇವರಲ್ಲಿ ಚಿಕಿತ್ಸೆಯುಂಟು. ನಿನ್ನಲ್ಲಿ ಮೋಹಗೊಂಡವನಂತೆ ನಟಿಸುತ್ತಿದ್ದ ಪಾಪಿ ರವಿವರ್ಮನು ಮತ್ತೊಬ್ಬಳಲ್ಲಿ ಮೋಹ ಬೆಳಸಿದ್ದನು. ಇದೊಂದು ಅಕಾರ್ಯಮಾಡಿದ್ದು ಸಾಲದೆ ಮೋಹಪೀಡಿತನಾಗಿ ಕ್ರೂರಕರ್ಮವಲಂಬನಂಗೈದು ಇವನ ಪೋಟಿದಾರನಾದ ಮತ್ತೊಬ್ಬನನ್ನು ಕೊಂದು ಆ ತಪ್ಪಿತಕ್ಕೆ ಜವಾಬುದಾರನಾಗಿರುವನೆನಲು ಪದ್ಮಿನಿಯು ;—ಅದು ಹ್ಯಾಗೆ! ಆತನಲ್ಲಿ ಮತ್ತ್ಯಾವ ತಪ್ಪಿದ್ದರು ಈ ತಪ್ಪಿತಮಾತ್ರವವನಲ್ಲಿರಲಾರದು. ಆತನು ವಿಷಯಾಸಕ್ತನೆಂದು ಯಾರೂ ದೂಷಿಸುವದಿಲ್ಲ. ನನ್ನಲ್ಲಿ ಮೊದಲು ವಿಶ್ವಾಸ ಬೆಳಸಿದ್ದಹೊರ್ತು ಅದಕ್ಕೆ ಮುಂಚೆ ಮತ್ತ್ಯಾರಲ್ಲು ಇಲ್ಲವೆಂಬದಾಗಿ ಆತನೆ ಹೇಳಿರುತ್ತಾನೆನಲು ;—

ಕಳಿಂಗನು ;—ಅಯ್ಯೊ ಮರುಳೆ ! ಅವನು ಹಾಗೆ ಹೇಳಿದನಲ್ಲವೆ ? ಅವನು ಮತ್ತಿನ್ನೇನು ಹೇಳ್ಯಾನು. ಅವನು ಹಾಗೆ ಹೇಳುವದರಲ್ಲಿ ಆಶ್ಚರ್ಯವೇನು. ದುಂದುಗಾರನು ಯಾವಕಾಲದಲ್ಲು ಸುಳ್ಳುಗಾರನು. ಸಾಲಗಾರನು ಮೋಸಗಾರನಲ್ಲದೆ ಇಲ್ಲವೇ ಇಲ್ಲ. ಇನ್ನಾದರು ಮನಸ್ಸಿಗೆ ಧೈರ್ಯತಂದುಕೊ. ನೀಚರನ್ನು, ಠಕ್ಕಗರನ್ನು, ದಗಲ್‌ಬಾಜಿಗಳನ್ನು, ಮರಿಯತಕ್ಕ ಮನೋವ್ಯಥೆಯು ಅಲ್ಪವಾದದ್ದು. ಪಂಡಿತರೆ! ನಿಮಗೆ ತಿಳಿದಿರತಕ್ಕ ಸಂಗತಿಯನ್ನು ಹೇಳುವರಾಗಿರೆನಲು; ಸುಬಾಹುವು;—ಈಗ ನಾನು ಹೇಳತಕ್ಕ ವಿಷಯವು ಬಹಳ ವ್ಯಸನಕರವಾದದ್ದು. ಆ ಕೆಲಸವನ್ನು ಕೈಕೊಳ್ಳುವದು ನನಿಗೆ ಬಹಳ ಅಸಮಾಧಾನವಾದದ್ದು. ಆದರೂ ಇದನ್ನು ಹೇಳಬೇಕಾದ್ದು ನನ್ನ ಕೆಲಸವಾದ್ದರಿಂದ ಹೇಳುವೆನು. ಅದೇನೆಂದರೆ ಸುಮಾರು ಎರಡುತಿಂಗಳುಗಳ ಕೆಳಗೆ ರವಿವರ್ಮನು ತಪ್ಪಿಸಿಕೊಂಡು ಹೋದದಿವಸ ನಾನು ಸಮುದ್ರತೀರದಿಂದ ನನ್ನಮನೆಗೆ ಬರುತ್ತಾ, ನನ್ನ ಮನೆಯಲ್ಲಿ ಘಾಯಹೊಂದಿರಕ್ತಹಾನಿಯಿಂದ ಮೂರ್ಛೆಹೋಗಿರುವ ಒಬ್ಬ ಮನುಷ್ಯನನ್ನು ಕಂಡೆನು. ಅವನ ಘಾಯಗಳು ವಾಸಿಯಾಗತಕ್ಕವಲ್ಲದೆ ಅವು

ಗಳೆಂದವನು ಪ್ರಾಣಬಿಡುವನೆಂಬದಾಗಿ ತಿಳಿದಿದ್ದರು ನನಿಗೆ ಇದ್ದ ಬುದ್ಧಿವಂತಿಗೆಯು ನ್ನೆಲ್ಲಾ ಖರ್ಚುಮಾಡವನಿಗೆ ಚಿಕಿತ್ಸೆಯುಂಮಾಡಿ ಆದರಿಸಿದೆನು. ಆದರೂ ದಿನೆದಿನೆ ಬಲ ಹೀನನಾಗಿ ನಿನ್ನೆದಿವಸ ತನ್ನವಸಾನಕಾಲ ಬಂತೆಂಬದಾಗಿ ತಿಳಿದು ನನ್ನನ್ನು ಕರದು ತನಿಗೆ ಈ ದೆಸೆ ಯಾತಕ್ಕೆ ಬಂತು ಹೇಳುವೆನು ಕೇಳೆಂದನು. ಅದುವರಿಗೂ ಏನುಕಾರಣ ದಿಂದಲೊ ಈ ಸಂಗತಿಯನ್ನು ನನ್ನಸಂಗಡ ಹೇಳಲು ಇಷ್ಟವಿಲ್ಲದವನಾಗಿದ್ದು ನಿನ್ನೆ ಮಾತ್ರ ಹೇಳಿದನು. ಅದೇನೆಂದರೆ ಸಮುದ್ರತೀರದಲ್ಲಿ ನನ್ನ ಮನಿಗೆ ಸ್ವಲ್ಪ ದೂರದಲ್ಲಿ ರುವ ಗವಿಗಳಲ್ಲಿ ತನಿಗೆ ನಿಶ್ಚಿತಾರ್ಥವಾಗಿರುವ ನಾರಿಯು ಈ ಪುರದ ಒಬ್ಬ ದೊಡ್ಡಮ ನುಷ್ಯನ ಸಂಗಡ ಮೋಹವಾರ್ತೆಗಳನ್ನಾಡುತ್ತಿದ್ದದ್ದನ್ನು ಕಂಡು ಜಗಳವಾಡಿ ಘಾಯ ಹೊಂದಿ ನೆಲಕ್ಕೆ ಬಿದ್ದು ಪ್ರಜ್ಞೆತಪ್ಪಿತು. ನಂತರ ಏನಾಯಿತೊ ಕಾಣೆ. ನನ್ನ ಮನೆಗೆ ಹ್ಯಾಗೆ ಬಂದೆನೊ ಅದುಸುದಾ ತಿಳಿಯದೆಂದು ಹೇಳಿದನು. ಅವನನ್ನು ಯಾರು ಮರಣ ಘಾತವನ್ನು ಮಾಡಿದರೆಂದು ಕೇಳಿದ್ದಕ್ಕೆ; ಕಾಮರೂಪೇಶನಾದ ರವಿವರ್ಮನೆಂದು ಹೇಳಿ ಪ್ರಾಣಬಿಟ್ಟನೆಂದನು.

ಕಳಿಂಗನು:–ಈ ಭಯಂಕರವಾದ ಕಥೆಯನ್ನು ಕೇಳಿದ! ಇವನಲ್ಲವೇ ನನ್ನ ಮಗಳನ್ನು ಮದುವೆಯಾಗಬೇಕೆಂದಿದ್ದವನು! ಇವನು ತನ್ನಸ್ವಭಾವವನ್ನಿಷ್ಟುಜಾಗ್ರತೆ ತೋರಿಸಿದ್ದಕ್ಕವನನ್ನು ವಂದಿಸುವೆನು. ಎಲೈಮಗಳೆ! ನಿನ್ನನ್ನು ನಾನು ಕೇಳಿಕೊಳ್ಳು ವೆನು. ನೀನು ಇನ್ನುಮೇಲೆ ಮಾತುಕೊಟ್ಟಿರುವೆನು. ಇನ್ನು ಕೊಂಚ ಸಾವಕಾಶವಾಗಿ ಉತ್ತರ ಕೊಡುತ್ತೇನೆ ಎಂಬ ಮುಂತಾದ ಹರಟೆಗಳನ್ನಾಡಬೇಡ. ಮುಂದಿನವಾರದಲ್ಲಿ ಯಾವದಾದರೊಂದುದಿವಸವನ್ನು ನಿಷ್ಕರ್ಷೆಯುಂಮಾಡು ನಿನ್ನ ವಿವಾಹ ಜಾಗ್ರತೆಯಾಗಿ ಆಗಬೇಕೆನಲು;

ಪದ್ಮಿನಿಯು:–ಎಲೈ ತಂದೆಯೆ ಕೊಂಚ ಸಾವಕಾಶಮಾಡು. ಆಲೋಚನೆ ಮಾಡುವದಕ್ಕಾದರು ಸಮಯ ಕೊಡು. ನನ್ನ ಬುದ್ಧಿಯು ಅಲ್ಲೋಲಕಲ್ಲೋಲವಾ ಗಿರುವದು. ನನಿಗೆ ಹೇಳಿದ್ದನ್ನು ತಿಳಿದುಕೊಳ್ಳಲಾರೆ. ನಾನು ಏನು ಹೇಳುತ್ತೇನೊ ಅದುಸುದಾ ನನಿಗೆ ತಿಳಿಯದು. ಕೂಡಲೆ ಈಗಿನ ಮಂಕು ಹೋಗುವದು. ನಂತರ ಹ್ಯಾಗೆಮಾಡಬೇಕೊ ನನಿಗೆ ಯಾವಗತಿಯೊ ಹೇಳುವೆನು. ಆದರೆ ಈಗ ನನಗೆ ಜಲ ಪ್ರಳಯವಾದಂತೆ ಕಾಣುವದೆನಲು.

ಕಳಿಂಗನು: ಹಾಗಲ್ಲ. ನೀನು ಯಾವದನ್ನೂ ನಿಶ್ಚೈಸುವವರಿಗೂ ಹಲವು

ಬಗೆಯಾದ ಆಲೋಚನೆಗಳು ನಿನ್ನ ಮನಸ್ಸನ್ನು ಹಿಡಿಸುವವು. ನಾನು ಹೆಂಗಸರ ಸ್ವಭಾವವನ್ನು ಬಲ್ಲೆ. ಯಾವ ಕೆಲಸವನ್ನು ಮಾಡಬೇಕೊ ಅದನ್ನು ಮಾಡಿದರದರಿಂದಲೆ ತೃಪ್ತಿಯುಂಟಾಗುವದು. ವಿಶ್ವಾಸವಲ್ಲೆ ಹುಟ್ಟುವದು. ಆದ್ದರಿಂದ ನೀನೆ ಯಾವ ದಿವಸ ಆಗಬೇಕೋ ಹೇಳುವಳಾಗು. ಸೋಮವಾರವೋ? ಮಂಗಳವಾರವೋ? ಅಥವಾ ಬುಧವಾರವೋ? ಶುಕ್ರವಾರವೇತಕ್ಕೆ ಬೇಡ. ಬೃಹಸ್ಪತಿವಾರವಾಗಲಿ ಶನಿವಾರವಾಗಲಿ ಆಗಬಹುದು. ನೀನು ಯಾವದಿವಸ ಹೇಳುತ್ತೀಯೋ ಆ ದಿವಸವೇ ನಿನ್ನ ಮದುವೆಯಂ ಮಾಡುವೆನು. ನೀನು ಮನೆಗೆ ಹೋಗುವಳಾಗು.—ನಿನಗೆ ಯಾವಯಾವಪದಾರ್ಥಗಳಲ್ಲಿ ಇಷ್ಟವೋ ತರಿಸುವಳಾಗು. ನಿನ್ನ ಮದುವೆಯನ್ನು ಬಹಳ ಶೋಭಾಯಮಾನವಾಗಿ ಮಾಡುವೆನು. ನೀನು ಜಾಗ್ರತೆ ಹೋಗು.—ಇವನು ಓಡಿಹೋಗಲುಬಳ್ಳೀಕಾರಣವಿತ್ತು. ಈ ಕಿರಾತನು ತಪ್ಪಿದ್ದೇ ಒಳ್ಳೇದಾಯಿತೆಂದುಕೊಂಡವರ ಕರದುಕೊಂಡು ಗೃಹಾಭಿಮುಖನಾದನು.

ನಾವಿಕರನ್ನು ಸಮುದ್ರಮಾರ್ಗವಾಗಿ ಓಡಿಸಿಕೊಂಡು ಹೋದ ರಾಮವರ್ಮನು ಕಾಮರೂಪದೇಶದ ಒಂದು ಗ್ರಾಮದಬಳಿ, ಆಕಸ್ಮಿಕವಾಗಿ ಸಾಲಗಾರ್ರಬಾಧೆಯನ್ನು ತಪ್ಪಿಸಿಕೊಳ್ಳಲು ಅಲ್ಲಿಗೆ ಓಡಿಬಂದಿದ್ದ ರವಿವರ್ಮನಂಕಂಡು, ತನ್ನ ವೃತ್ತಾಂತವಂ ಹೇಳಲುಪಕ್ರಮಿಸಿಂತೆಂದನು:—ನಾನು ಮತ್ತು ಮುಳುಗುತ್ತಿದ್ದ ನಾವಿಕನು ದೋಣಿಯಲ್ಲಿಕೂತುಕೊಂಡು ಆರಾತ್ರಿ ಮತ್ತು ಮಾರನೆದಿವಸವೆಲ್ಲ ಕಳ್ಳನಾವಿಕರನ್ನುಓಡಿಸುತ್ತಾ ಕ್ರಮೇಣ ಕೊಂಚ ಕೊಂಚ ಸಮೀಪಕ್ಕೆ ಬರುತ್ತಾ ಇರುವಷ್ಟರಲ್ಲಿ, ಸಾಯಂಕಾಲಕ್ಕೆ ಸರಿಯಾಗಿ ನಿನ್ನ ಮುಂಗೈ ಗಾತ್ರಕ್ಕಿಂತಲು ದಪ್ಪವಲ್ಲದ ಒಂದುಮೋಡವು ಕಾಣಿಸಿತು. ನಂತರ ಬಂದರಕ್ಷಣದಲ್ಲೆ ಅದು ಆಕಾಶವನ್ನೆಲ್ಲಾ ಅಡರಿಬಿರುಘಾಳಿ ಬೀಸಲುಪಕ್ರಮಿಸಿನಮ್ಮ ಕಣ್ಣುಯದುರಿಗೇನೆ ಅವರು ಅವರ ದೋಣಿ ಅದರಲ್ಲಿದ್ದ ವಿಶಿಷ್ಟ ಸಾಮಾನು ಸಮುದ್ರದಫಾಲಾದರು. ಬಿರುಘಾಳಿಯು ನಮ್ಮನ್ನುಮಾತ್ರ ಉಳಿಸಿತು. ಆವರು ಆರಾತ್ರಿಯೆಲ್ಲ ಹಸಿವಿನಿಂದಲೂ ಬಾಯಾರಿಕೆಯಿಂದಲೂ ಬಹಳ ಶ್ರಮಪಟ್ಟೆವು. ಮಾರನೆ ಪ್ರಾತಃಕಾಲ ನಾವು ದಡವನ್ನು ಸೇರಿದಾಗ ನನ್ನಚೈತನ್ಯವೆಲ್ಲ ಅಡಗಿ ಹೋಗಿತ್ತು. ಕೂಡಲೆ ನನಿಗೆ ಜ್ವರಬಂದು ಬಹುದಿವಸ ಮಲಗಿದ್ದೆನು. ಅದು ಬಿಟ್ಟನಂತರ ನೀನು ಇಲ್ಲಿರುವೆಯೆಂಬ ವರ್ತಮಾನವನ್ನು ಕೇಳಿಕೊಂಡಿಲ್ಲಿಗೆ ಬಂದೆನು. ನಿನ್ನ ವಿಷಯವನ್ನು ಹೇಳುವನಾಗೆನಲು.

ರವಿವರ್ಮನು ನನ್ನವಿಷಯ ಹೇಳತಕ್ಕದ್ದು ಕೊಂಚವಾಗಿರುವದು. ನಾನು

ಗವಿಗಳಲ್ಲಿ ಹಯಗ್ರೀವನೊಂದಿಗೆ ಯುದ್ಧಮಾಡಿದನಂತರ ಅವನನ್ನೊ ಅಥವಾ ಅವನು ಸತ್ತುಹೋಗಿದ್ದರೆ ಅವನ ಶವವನ್ನೊ ಸಮುದ್ರತೀರದಲ್ಲಿರುವ ಸುಬಾಹುವಿನ ಮನೆಯಲ್ಲಿ ಬಿಟ್ಟು ಅವನು ಮನೆಯಲ್ಲಿಲ್ಲದಿದ್ದಾಗ್ಯೂ ಅವನು ಬರುವವರಿವಿಗೂ ಕಾದಿರದೆ ಪುನಃ ಗವಿಗೆ ಹೋಗದರ ಪ್ರತಿಮೂಲೆಯನ್ನು ಹುಡುಕಿದೆ. ಆಕರ್ಷಿಣಿಯನ್ನು ಕಾಣಲಿಲ್ಲ. ಆ ದಿವಸವನ್ನೆಲ್ಲಾ ಗವಿಗಳಲ್ಲಿ ಕಳೆದೆ. ಆದಿನದ ರಾತ್ರಿಯನ್ನು ನನ್ನ ತೋಟದಲ್ಲಿ ಕಳೆದೆನು. ನನ್ನ ತೋಟದಲ್ಲಿರುವ ಜಯಂತನ ಪ್ರತಿಮೆಯ ಹಿಂದೆ ಒಂದು ಸುರಂಗವಿರುವದು. ಅದರ ಬಾಗಿಲುಗಳು ಬಳ್ಳಿಗಳಿಂದ ಮುಚ್ಚಿಕೊಂಡು ಜನಗಳಿಗೆ ಗೊತ್ತಾಗುವದಿಲ್ಲ. ಈ ಸುರಂಗದ ಮಾರ್ಗವಾಗಿ ಸ್ಮಶಾನದ ಗವಿಗಳಿಗೆ ದಾರಿಯುಂಟು. ಇದು ನಾನು ಹುಡುಗನಾಗಿದ್ದಾಗ್ಯೆ ಚೆನ್ನಾಗಿ ಗೊತ್ತಿತ್ತು. ಈ ಮಾರ್ಗವಾಗಿ ನಾನು ತೋಟಕ್ಕೆ ರಾತ್ರಿಯಲ್ಲಿ ಹೋದೆನು. ಅಲ್ಲಿ ಒಬ್ಬನೆ ಇರಲು ಬೇಜಾರಾಗಿ ಇನ್ನೆಲ್ಲಿಗಾದರು ಓಡಿಹೋಗಬೇಕೆಂಬ ಆಲೋಚನೆ ಮಾಡಿದೆ. ನಾನು ಎಲ್ಲಾ ಸ್ಥಳವನ್ನು ಬಿಟ್ಟು ಇಲ್ಲಿಗೆ ಬಂದದ್ದಕ್ಕಾಗಿ ನೀನು ಆಶ್ಚರ್ಯಪಡಬಹುದು. ಆದರೆ ನಾನು ಬಾಲ್ಯದಾರಭ್ಯ ನನ್ನ ದೇಶಕೋಶಗಳನ್ನು ನೋಡದೆ ಇದ್ದದ್ದರಿಂದವುಗಳನ್ನು ನೋಡಬೇಕೆಂಬ ಏನೋ ಒಂದು ಮನಸ್ಸಾಯಿತು. ಮತ್ತು ಈ ದೇಶವು ನನ್ನದಾದರು ನನ್ನ ಗುರ್ತು ಇಲ್ಲಿಯ ಜನರಿಗೆ ತಿಳಿಯದೇಲು ನಾನು ಇಲ್ಲಿರುತ್ತಾನೆಂಬ ಗುಮಾನಿ ಜನಗಳಿಗೆ ತೋರದೆ ಇರಬಹುದೆಂದು ಇಲ್ಲಿಗೆ ಬಂದೆನು. ಪೂರ್ವ ಆಧಾರದಾರನಾದ ಬಲ್ಲಭರಾಯನ ಕಡೆ ಜನಗಳುನನ್ನ ಭೂಮಿಯನ್ನು ಈಗವರೆ ಯಜಮಾನರಾಗಿ ಆಕ್ರಮಿಸಿಕೊಂಡಿರುವದನ್ನು ನೋಡಿದೆನು.

ಅದಕ್ಕೆ ರಾಮವರ್ಮನು ಇಲ್ಲಿಗೆ ಯಾತಕ್ಕೆ ಬಂದೆ. ನೀನು ಕಳದುಕೊಂಡ ಸ್ಥಿತಿಗಳನ್ನು ನೋಡುವದರಿಂದ ನಿನಗೆ ಸ್ವಲ್ಪವಾದರೂ ಸಂತೋಷ ಉಂಟಾಗಲಾರದೆನಲು ;—ರವಿವರ್ಮನು ನಾನು ಕಳದುಕೊಂಡ ದಿವಸಗಳನ್ನು ನೋಡಿದರೆ ಇದಕ್ಕಿಂತಲೂ ಕಮ್ಮಿಯಾದ ಸಂತೋಷ ಉಂಟಾಗುವದು. ಆ ದಿವಸಗಳಿಗೆ ಪೂರ್ವಸ್ಥಿತಿಯಾದ ನನ್ನ ಬಾಲ್ಯಾವಸ್ಥೆಯನ್ನು ಜ್ಞಾಪಿಸಿಕೊಳ್ಳಲು ಆ ಬಾಲ್ಯವನ್ನು ಕಳದ ಈ ಸ್ಥಳಕ್ಕೆ ಬಂದೆನು. ಅದರಿಂದೇನಾದರೂ ಸಂತೋಷವುಂಟಾದೀತೇನೋ ಎಂದು ತಿಳಿದುಕೊಂಡಿದ್ದೆ. ಅದು ಹಾಗಾಗಲಿಲ್ಲ ನನ್ನ ಬಾಲ್ಯವು ಅದರ ಸಂತೋಷವನ್ನು, ಉಲ್ಲಾಸವನ್ನು ವಿನೋದರೂಪನಿಂದಮಾತ್ರ ಪರಿಹಾಸ್ಯಮಾಡಿದ ವ್ಯರ್ಥವಾದ ನನ್ನ ಯವ್ವನವನ್ನು ಬಹಳ ಕಠಿಣೋಕ್ತಿಯಿಂದ ನಿಂದಿಸುವದು. ವಿಚಾರವಿಲ್ಲದ ಬಾಲ್ಯದಲ್ಲಿ ಆಟವಾಡಿದ ಪ್ರತಿಗಿಡಗಳಲ್ಲು

ಮರಗಳಲ್ಲು ಲತಾಗೃಹಗಳಲ್ಲು ನನ್ನ ಧೀರಬಾಲ್ಯವು ನಿಂತು ನನ್ನ ಅಲ್ಪ ಯೌವನವನ್ನು ಹಿಯಾಳಿಸುವದು. ಅಷ್ಟುಮಾತ್ರವೆ ಅಲ್ಲ, ಇವಕ್ಕಿಂತಲೂ ಕಠಿಣವಾದ ನಿಷ್ಠುರೋಕ್ತಿಗಳನ್ನು ನನ್ನ ರೈತರ ಮುಖಭಾವದಿಂದ ತಿಳಿಯುವೆನು. ಇವರ ಮುಖಗಳು ಕಳೆಗುಂದಿ ಸತ್ವವಿಲ್ಲದೆ ನನ್ನ ಲಜ್ಜಾಶಾಸನಗಳಂತೆ ಕಾಣುವವು. ಗ್ರಾಮಾಂತರದ ಅನ್ಯಾಯವು, ಪ್ರಜಾಪೀಡನವು, ರಾಜಾಸ್ಥಾನದ ಅಧರ್ಮಕ್ಕಿಂತಲು ಹೆಚ್ಚಾದ ಕಾಠಿಣ್ಯದಿಂದ ನನ್ನ ಪಾಲನೆಗೊಳಪಟ್ಟವರನ್ನು ಪೀಡಿಸುತ್ತಿರುವವು. ದುರ್ಭಿಕ್ಷವು, ದುರಾಚಾರವು, ಹಿಂಸೆಯು, ಅನರ್ಥವು, ನನ್ನ ದೇಶವನ್ನೆಲ್ಲಾ ತುಂಬಿರುವದು. ಇದನ್ನು ಕಾಣದೆ ಇದ್ದ ನಾನು ನನ್ನ ಸರ್ವಸ್ವವನ್ನು ಹಾಳುಮಾಡಿ ಮೋಸಗಾರರ ಉದರಪೋಷಣೆಯನ್ನು ಮಾಡಿದೆನು. ಎಲೈ ರಾಮವರ್ಮನೆ! ನಾವು ಸ್ವಸಂತುಷ್ಟಿಗಾಗಿ ಹಾಳುಮಾಡುವದನ್ನು, ನಾವು ಅಜಾಗ್ರತೆಯಿಂದ ಬಿಸಾಡುವದನ್ನು, ಔದಾರ್ಯಗುಣವೆಂದು ಅಥವಾ ಮತ್ತಿನ್ಯಾವ ಹಿತವಾದ ಶಬ್ದದಿಂದ ಕರದಾಗ್ಯೂ ಒಂದುಮಾತ್ರ ಸತ್ಯ. ಮನುಷ್ಯನು ದುಂದುಗಾರಿಕೆ ಎಂಬ ತಪ್ಪಿತಕ್ಕಿಂತ ಹೆಚ್ಚಾದ ಅಮಾನುಷವಾದ ಪಾಪವನ್ನು ಮಾಡುವದಿಲ್ಲ. ಮನುಷ್ಯನು ಸಾಲಕ್ಕಿಂತ ಹೆಚ್ಚಾದ ಅಮರ್ಯಾದೆಯನ್ನು ಕಾಣುವದಿಲ್ಲ.

ರಾಮವರ್ಮನದಂಕೇಳಿ ಸಂತೋಷಪಟ್ಟು;—ನನ್ನ ಕೆಲಸವಿಂದಿಗೆ ಪೂರೈಸಿತು. ಇಂದಿನಾರಭ್ಯ ನಿನಿಗೆ ನನ್ನ ಹಿತೋಕ್ತಿಗಳು ಅವಶ್ಯಕವಿರೂವದಿಲ್ಲ. ಮೊದಲಿಂದಲೂ ಹೀಗಾಗುತ್ತೆಂದು ತಿಳಿದು ವ್ಯಸನಪಡುತ್ತಿದ್ದ ನನಿಗೆ ಇಂದಿನಾರಭ್ಯ ಸಂತೋಷ ಉಂಟಾಗುವದು. ಒಂದು ಕೆಲಸವಾದಹಾಗೆ ಆಯಿತು. ಈಗಿನ ಕಷ್ಟವೆಂಬೂವದಿವೊಂದಮೂಲ್ಯವಾದ ಫಲವನ್ನುಂಟುಮಾಡಿತು. ಇಂದಿನಾರಭ್ಯ ನೀನು ಹೋಗತಕ್ಕ ಮಾರ್ಗವು ಕತ್ತಲೆಗವಕಾಶವಿಲ್ಲದೆ ನಿನ್ನ ಭವಿಷ್ಯತ್ತು ಸುಖಪಥವಾಗಿರುವದೆಂದು ಹೇಳುವೆನೆನುವ ರಾಮವರ್ಮನಂ ಕುರಿತು, ರವಿವರ್ಮನು;—ಹಾಗೆಂದಿಗು ಆಗಲಾರದು ನಾನು ಗಾಢಾಂಧಕಾರದಲ್ಲಿ ಗಮಿಸತಕ್ಕದ್ದಾಗಿರುವದು. ನನ್ನ ಮಾರ್ಗದಲ್ಲಿ ಸೂರ್ಯಕಿರಣಗಳೆಂದಿಗೂ ಪ್ರಕಾಶಿಸುವದಿಲ್ಲ. ದಾರಿದ್ರದಿಂದ ನನ್ನ ಪಥವು ಮೊಬ್ಬಾಗದು. ಅನೇಕ ವಿಷಯಗಳಲ್ಲಿ ನಾನು ತಪ್ಪಿತಸ್ತನಾಗಿರುವೆನು. ಆದರೆ ಭಾಗ್ಯವೆಂಬೂವದು ಅಲ್ಪಾನುಕೂಲ್ಯವಸ್ತುವೆಂದು ತಿಳಿದಿದ್ದದ್ದು ತಪ್ಪಿತವೆಂದು ಭಾವಿಸುವದಿಲ್ಲ. ಅಲ್ಲದೆ ಮನೋನಿಂದೆಗೂ ಜಗ್ಗತಕ್ಕವನಲ್ಲ. ಅದು ಈಗ ಕಠಿಣವಾಗಿದ್ದಾಗ್ಯೂ ಕ್ರಮೇಣ ಅದನ್ನು ಶಾಂತಿಪಡಿಸಬಲ್ಲೆನು. ಲೋಕಾಪವಾದಕ್ಕೂ ಹಿಂಜರಿಯತಕ್ಕವನಲ್ಲ. ಇದನ್ನು ಸಹ ಸೂಕ್ಷ್ಮವಾಗಿ ಪರಿಹರಿಸಿಕೊಳ್ಳ

ಬಲ್ಲೆನು. ಆದರೆ ನನ್ನ ಮನದೇಶ್ಮೆಗಂಧಾರವಾದೊಂದು ಅರ್ಕನು ನನ್ನ ಯೌವ್ವನದ ಗಾಢಾಂಧಕಾರವನ್ನು ಹೋಗಲಾಡಿಸುತ್ತಿದ್ದನು. ಅವನುಸುದಾ ಈಗ ಮುಳಗಿಹೋದನು. ಮತ್ತೆ ಉದಯಪರ್ವತವನೆಂದಿಗೂ ಅವನಲಂಕರಿಸನು. ಈ ವಿಷಯದಲ್ಲಿ ನಾನು ಕಷ್ಟಕ್ಕೆ ಗುರಿಯಾಗಿರುವೆನು. ಸ್ವಭಾವಿಕವಾದೆನ್ನ ಉಲ್ಲಾಸವು ವಿಶಿಷ್ಟದನಾಪವಾದವನ್ನು ಲೋಕಕಷ್ಟಗಳನ್ನು ಜೈಸಬಲ್ಲದೆಂದ ರವಿವರ್ಮಗೆ ರಾಮವರ್ಮನು ;—ಹಾಗಂದರೇನು ಪದ್ಮಿನಿಯು ಅಪ್ರಮಾಣಿಕಳೆ? ಎಂದುದಕೆ—

ರವಿವರ್ಮನು;—ಎಲೈ ಮಿತ್ರನೆ! ಹಾಗೆ ಹೇಳಬೇಡ ಅಪ್ರಮಾಣಿಕಳಾಗಿರಬೇಕೆಂಬುವದು ಅವಳ ಉದ್ದೇಶವಲ್ಲ. ಸ್ವರ್ಗದಲ್ಲಿ ಮರಣವು ಹ್ಯಾಗೆ ತಲೆದೋರದೊ ಹಾಗೆ ಆಕೆಯಲ್ಲಿ ಸಟೆಯು ಕಾಣುವದಿಲ್ಲ. ಶಿವರಾತ್ರಿಯವರೆಗೆ ಯಾರಿಗೂ ಮಾತುಕೊಡದೆ ನನಿಗಾಗಿ ಕಾದುಕೊಂಡಿರುವೆನೆಂಬದಾಗಭಯವನ್ನು ಕೊಟ್ಟದ್ದದ್ದೇನೊ ನಿಜ, ನಾಳದಿವಸ ಸುರೇಂದ್ರರಾಯನು ಆಕೆಯನ್ನು ಮದುವೆಯಾಗುತ್ತಾನೆಂದು ಬಹಿರಂಗವಾದ ವರ್ತಮಾನವಿರುವದುಸಹಾ ನಿಜ. ಆದರೆ ನಾನು ಓಡಿಬಂದಿರುವದರಿಂದ ಆಕೆಯು ತನ್ನ ಬಂಧವಿಮೋಚನೆಯಾಗಿರುವದೆಂದು ತಿಳಿದಿರಬಹುದು. ಅಂದಿನ ದುರ್ದೆಶೆಯ ರಾತ್ರಿಲಾಗಾಯಿತು ನಾನು ಓಡಿಹೋದನೆಂಬದಾಗಿಮಾತ್ರ ತಿಳಿದಿರುವಳು. ಆ ಶ್ರೀಮಂತಳಿಗೆ ಅವಳ ಪೂರ್ವದಭಯವನ್ನು ಜ್ಞಾಪಗವಿಟ್ಟುಕೊಂಡದಂನೆರವೇರಿಸುವದೆಂದು ದರಿದ್ರನಾಗಿರುವ ನಾನು ಹ್ಯಾಗೆತಾನೆ ಹೇಳಲಿ. ಅದರಿಂದ ಫಲವೇನು? ಅವಳು ಅವಧಿಮರಿಮಿಗೆನಿರೀಕ್ಷಿಸಿದಾಗ್ಯು ಅದರ ಫಲಪ್ರಯೋಜನವು ಆಕೆಯ ತಂದೆಯ ಅನುಮತಿಯಿಂದಲೆ ಆಗಬೇಕಾಗಿರುವದು. ಈಗ ಕಳಿಂಗನು ಯಂದಿಗೆವಪ್ಯಾನು. ಯಾರುತಾನೆ ಅವನಂ ವಡಂಬಡಿಸಬಲ್ಲರು. ಎನಲು ;

ರಾಮವರ್ಮನು;—ಪತಕ್ಕಾಗಿ ಆಕೆಯು ಕಾದಿರಬೇಕೆಂಬ ವಿಷಯವಂತಿರಲಿ ನಮಗಸಾಧ್ಯವೆಂಬುವದು ಸಂಘಟಿಸಿದರು ಸಂಘಟಿಸಬಹುದು. ನೈಜವಾದ ಹೃದಯವು ಪ್ರಾಮಾಣಿಕತೆಯಲ್ಲಿ ಮನವಿಡಬೇಕೇಹೊರ್ತು ಸಂದರ್ಭವನ್ನೈಯ್ಯಕೊಡದು. ನಾಳೆಯಲ್ಲವೆ ಲಗ್ನ ಬೆಳಸತಕ್ಕದ್ದು. ಲೋಕದಲ್ಲಿ ಯಾವದಾದರು ಒಂದು ಕುದರೆಯಿಂದ ಇಷ್ಟು ದೂರ ಪ್ರಯಾಣ ಮಾಡಬಹುದಾದರೆ ನನ್ನ ಮರುತ್ಮನು ಹೋಗಬಲ್ಲದು. ಅದುದರಿಂದ ಈ ಅರಿಷ್ಟವಾದ ಮುಹೂರ್ತಕ್ಕೆ ಮುಂಚೆಯೆ ನಾನಿಲ್ಲಿದ್ದು ಆಕ್ಷೇಪಿಸುವೆನು. ನಾಳೆ ಮಧ್ಯಾಹ್ನಕ್ಕೆ ಮುಂಚೆಯೆ ಪದ್ಮಿನಿಯು ಎದುರಿಗೇನೆ ನಿಂತು ಪಸೆಹಗುಳಿಯು

ಸಮೀಪದಲ್ಲಾದರುಸುದ ಈ ವಿವಾಹಮಂತ್ರಗಳನ್ನು ಆಕೆಯ ಪೂರ್ವಾಭಯದಿಂದಲೋ ಡಿಸುವೆನೆಂದು ; ತನ್ನ ಮರುತ್ಮನಿಗೆ ಜೇನು ಬಿಗದು ಆರೂಢನಾದವನಂ ಕಂಡು ; ರವಿವರ್ಮನು ; ಎಲೈ ಮಿತ್ರನೆ ! ನಿನ್ನಂ ನೋಡುವಲ್ಲಿ ಸ್ನೇಹಿತರಲ್ಲಾದರೂ ಸತ್ಯವಿರುವದೆಂದು ಕಾಣುವದು. ಆದರೆ ಪದ್ಮಿನಿಯನ್ನು ನೀನು ಸೌಮ್ಯವಾಗಿ ಕಾಣೂವದೆಂದವನಂ ಬೀಳ್ಕೊಟ್ಟನು.

ಚಂದ್ರನಗರದಲ್ಲಿ ಸುರೇಂದ್ರರಾಯರಿಗು ಪದ್ಮಿನಿಗು ದಿವಾಲಗ್ನವಾಗಿ ದೇವಸ್ಥಾನದಿಂದ ಮೆರವಣಿಗೆಯಾಗಿ ಮನೆಗೆ ಬರುತ್ತಾ; ಆ ದೇಶದ ಪದ್ಧತಿಪ್ರಕಾರ ಬಂದುಕಡೆ ಬ್ರಹ್ಮಚಾರಿಗಳಾದ ಯೌವನಸ್ಥರು ಮೇಳಗೊಂಡು ಅವರ ಪಕ್ಕದಲ್ಲೇ ಮತ್ತೊಂದು ಸಾಲಿನಲ್ಲಿ ಕನ್ಯಾಮಣಿಗಳು ತಟ್ಟೆಗಳಲ್ಲಿ ಪುಷ್ಪಗಳಂ ತುಂಬಿಕೊಂಡು ಮೇಳಗೊಂಡು, ವಧುವರರ ಪ್ರಶಂಸೆಯನ್ನು ವಿವರಿಸುತ್ತ ಬ್ರಹ್ಮಚಾರಿಗಳಕಡೆ ಕನ್ಯೆಯರು ತಿರಗಿಕೊಂಡು;—

ಕಂದ॥ ವರರಿಲ್ಲದಿರ್ಪ ವರ್ಣ್ಯಾರ್ ।
ನರರೆಲ್ಲರುನಮ್ಮಪದ್ಮಿನಿಯ ನೂಪುರವಂ ॥
ಕಿರುಗೆಜ್ಜೆಮೊಳ್ಕೆಯಿಂದಂ ।
ಪರಿವರ್ತಿಸುತಿದ್ದುದಿಲ್ಲವೆ ಇದುವರಿಗಿವಳಂ ॥

ಬಿಡುಬೇಕೀಗಿವರಿವಳಂ ।
ಬಡನಡು ಭಾಮಾಮಣಿಗಳು ಮತ್ಯಾರಿವರೀ ॥
ಜಡನೇತ್ರಕ್ಕಾನಂದವ ।
ನೀಡುವಳೈ ಮರೆವರಿವರ್, ನಿತು ಪದ್ಮಿನಿಯಂ ॥

ಈಗಿನ ಬಲೆಯರಿವರಸೋ ।
ಲ್ಮೊಗಮಂ ನೋಳ್ಪಪರೆ ನೋಳ್ಪ ಸೋಲ್ವರಿ ಮನವಂ ॥
ನಗುಮುಖದಿಂಮೊಶಾಳ್ವರೆ ।
ನಗುಪಾಟಾಗಿರ್ಪಿವರನು ನಾನೊಲ್ಲೆನೊಲ್ಲೆ ॥

ಎಂದು ತಮ್ಮ ಕರಕಮಲದಿಂ ಕಮಲಗಳಂ ಬ್ರಹ್ಮಚಾರಿಗಳಮೇಲೆಸೆದವರನ್ನು ಹೊರಚ್ಚುಮಾಡುತ್ತಿದ್ದರು. ಇದನ್ನಲ್ಲಿದ್ದ ತ್ರಿಭುವನನೆಂಬ ಆಸ್ಥಾನದ ವಿದೂ

ಷಕನಾದ ಹುಚ್ಚನು ಕಂಡು ;—ಎಲೈ ಕನ್ಯಾಮಣಿಗಳೆ ! ಚನ್ನಾಗಿ ಹೇಳಿದಿರಿ. ನಿಮಿಗೆ ಬಣ್ಣಗಳಲ್ಲಿ ಇಷ್ಟವಿದ್ದರೆ ನನ್ನಕಡೆ ನೋಡುವರಾಗಿ. ಆಲಿಂಗನೆಮಾಡತಕ್ಕ ನನ್ನ ಬಾಹುಗಳನ್ನು ನೋಡಿ. ದುರಾತ್ಮನೆ ಶ್ವಾಸಬಿಡಲು ಆಗುವದಿಲ್ಲ ನನ್ನನೊಬ್ಬಳನ್ನೆ ಇರಲೀಸೆಂದಿತುನಾನೊಂದು ಹೆಣ್ಣಾನೆಯ ಸೊಂಟವನ್ನು ಆಲಿಂಗನೆ ಮಾಡಿಕೊಂಡಾಗ. ಆದರೆ ಈ ಬ್ರಹ್ಮಚಾರಿಗಳಿಂದ ನಿಮಗೆ ಉತ್ತರವೇನು ಇಲ್ಲವೆ ಎಂದನು. ಬ್ರಹ್ಮಚಾರಿಗಳು ಕನ್ನೆಯರಕಡೆ ತಿರಿಗಿನೋಡುತ್ತ—

ಕಂದ॥ ಇವಳ ಕ್ಕರೆಯೊಳಿ ರುವೆವಂ ।
ದಿವೆಳಂಗಿರಿಜಾ ತೆಯಪದ ಕೆರಗೊಂ ದಿಪವೊಲ್ ॥
ನಾವಿವ ಳಂಬೇಡಿದೊಡಂ ।
ಇವಳನು ರಾಗನ ಮಗಿಲ್ಲ ದಿರ್ದುದು ದಿಟಟಾ ॥
ಇವಳೊಳ್ ಸಾನ್ನಿಧ್ಯಸುಖವ ।
ಸವಿದೆಮ ಗೆಮತ್ತ ನುರಾಗ ಕೋರ್ಪುದೆ ಪರರೊಳ್ ॥
ನೀವ್‌ನಮ್ಮಂ ಬಯಸಿದೊಡಂ ।
ಯೌವ್ವನ ಮಿರ್ದೊಡ ನದುತಲೆಯನು ದೋರ್ಪುದೆಗಡ ॥
ಇವಳಕ ರೆಯೊಳಿರು ವೆವುನಾವ್ ।
ಇವಳನು ರಾಗನ ಮಗಿಲ್ಲ ದೀಗಿ ರ್ದೊಡನುಂ ॥
ನೀವೇ ತಕೆಮ್ಮಪಳಿವಿರಿ ।
ನಾವಿವ ಳಂಮರೆ ಯವುಗಡ ನಿಜಮಿದು ನಿಜಮಿದು ॥

ತ್ರಿಭುವನನು ;—ಶಾಬಾಸು! ದೆಸೆಗೆಟ್ಟವಂಟಿಗರೆ ! ನಿಮ್ಮನ್ನು ನಾನು ತುಂಬಾ ಮೆಚ್ಚುವೆನು. ನೀವು ವಿಯೋಗತಾಪವನ್ನು ನಟಿಸುತ್ತಿದ್ದಾಗ್ಯು ನಿಮ್ಮ ಉಡುಪು ಇಂದ್ರಚಾಪದೆಲ್ಲಾ ಬಣ್ಣಗಳಿಂದಲೂ ಕೂಡಿರುವದು. ನೀವು ನವಿಲುಗಳಂತೆ ಹಾಡುವಿರಿ, ಜಾಗ್ರತೆ ಬರುವರಾಗಿ. ಇದನ್ನು ಅರಮನೆಯಲ್ಲಿ ನೀವು ಹಾಡಬೇಕು. ಎಲೈ ! ಸಂಗೀತದ ಕನ್ಯೆಯರೆ! ಎಲೈ! ನಾನಾಬಣ್ಣದ ಮನುಷ್ಯರೆ! ನೀವೆಲ್ಲಾ ಬನ್ನಿ. ಇಹದಲ್ಲಿ ಹಾಡಿರಿ ಪರಲೋಕದಲ್ಲಿ ನಿಮಗೆ ಬಹುಮಾನವಾಗುವದು. ಕಳಿಂಗನು ಕೊಡತಕ್ಕದ್ದು ಒಂದು ಗೋಟಡಿಕೆ ತರಗೆಲೆಮಾತ್ರವೆ ಅಲ್ಲ. ಎಂದುಕೊಂಡು ಉತ್ಸವವು ಮುಂದಕ್ಕೆ ಜರಗಿತು.

ಅಷ್ಟರಲ್ಲಿ ರಾಮವರ್ಮನು ಅಲ್ಲಿಗೆ ಬಂದು, ಕುದುರೆಯಿಂದ ಕೆಳಕ್ಕಿಳಿದು, ಆಯಾಸಪಟ್ಟಿರುವ ಆ ಅಶ್ವದ ಭುಜವಂ ತಟ್ಟಿ, ಜಿಯ್ಯಾಳನ್ನು ಸವರುತ್ತ ಇತರರ ಪಾಪಕ್ಕಾಗಿ ನೀನು ಶ್ರಮಪಟ್ಟೆ ಎಂದು, ಮರುತ್ತನಿಗೆ ಮುದ್ದಿಟ್ಟು ಅದನ್ನು ಆದರಿಸುವಂತೆ ಒಬ್ಬ ಚಾರನ ಕೈಲಿ ಕೊಟ್ಟು ಲಾಯಕ್ಕೆ ಕಳುಹಿಸಿ ಜನದಕಡೆ ತಿರುಗಿ ನೋಡಿ;—ಇದೇನು ವಿವಾಹೋತ್ಸವದಂತೆ ಕಾಣುತ್ತೆ. ನನಿಗ್ಯಾತಕ್ಕೋ ಶಂಕೆಯುಂಟಾಗುವದೆಂದು ನಿಂತಲ್ಲೆ ನಿಂತನು. ಅಲ್ಲಿದ್ದ ನೋಟಕರಲ್ಲೊಬ್ಬನು ಮತ್ತೋರ್ವನಂಕುರಿತು ;—ನನಿಗೆ ಸಾಕಪ್ಪಾ ಇನ್ನು ಮುಂದೆ ನಾನು ಬರುವನಲ್ಲ. ನನಿಗೆ ಅಸಹ್ಯವಾಗುವದು ಇದೇನೋ ಹೊಲಸು ದೊಂಬಿಯು ಎನಲು, ಮತ್ತೋರ್ವನು ;—ಬಿಸಲು ಚುರುಕಾಗಿರುವದು ನಾನು ಸಹಾ ಇನ್ನುಮುಂದಕ್ಕೆ ಬರಲಾರೆನು. ಆದರೆ ಈ ರಾತ್ರಿ ಅರಮನೆಯಲ್ಲಿ ವಧುವರರ ಮರ್ಯಾದಾರ್ಥವಾಗೊಂದು ವೇಷನಾಟ್ಯವಾಗುವದೆನಲು; ಮತ್ತೋರ್ವನು ;—ವೇಷನಾಟ್ಯವೆಂದರೇನೆಂದುದಕನನು ;—ಇದು ವಿಚಿತ್ರವಾದ ನಾಟ್ಯವು ಇದರಲ್ಲಿ ವೇಶ್ಯಾಸ್ತ್ರೀಯರು ನರ್ತಿಸುತ್ತಾ ಸಾಮಾಜಿಕರು ಕೂತುನೋಡುವದಿಲ್ಲ ಸಾಮಾಜೀಕರೆಲ್ಲರು ನಟಿಸುವರು. ಒಬ್ಬ ಪುರುಷನು ಒಬ್ಬ ಸ್ತ್ರೀಯೊಂದಿಗೆ ನರ್ತಿಸುವನು. ನಟನಿಗು ನಟನಿಗು ಯಾವದೊಂದು ಸಂಬಂಧವಿದ್ದರೂ ಸರಿಯಿಲ್ಲದಿದ್ದರೂ ಸರಿ, ನರ್ತನವಾಗುವಾಗ್ಯೆಮಾತ್ರ ಅವರು ದಂಪತಿಗಳಂತೆ ನರ್ತಿಸು ವರು. ಒಬ್ಬರ ಗುರ್ತು ಮತ್ತೊಬ್ಬರಿಗೆ ತಿಳಿದು ಬಾಂಧವ್ಯದ ಸ್ನೇಹ ಮತ್ತು ಪದವಿಯಿಂದುಂಟಾಗತಕ್ಕ ನಾಚಿಕೆಯು ಅಥವ ಮರ್ಯಾದೆಯು ಆತಂಕವಿಲ್ಲದೆ ಇರುವಂತೆ ವೇಷಧಾರಿಗಳಾಗಿ ರಂಗಸ್ಥಳಕ್ಕೆ ಸಾಮಾಜೀಕರು ಬರುವರೆನಲದಕ್ಕವನು ;—ವೀರಬಾಹುರಾಯರ ಸಭಾಯೋಗ್ಯನಾಗಿ ನಾನಿದ್ದು ಈ ನಾಟ್ಯರಂಗಕ್ಕೆ ಕರಿಯಲ್ಪಟ್ಟಿದ್ದರೆ ನಾನು ನಟಿಸುತ್ತಿರಲಿಲ್ಲವೆಂದುದಂ ಕೇಳಿ ಮತ್ತೋರ್ವನು ;— ಅದೇತಕ್ಕೆನಲವನು ;—ಈ ವಿವಾಹವನ್ನು ನೋಡಿದರೆ ಉಲ್ಲಾಸದಿಂದ ನಟಿಸತಕ್ಕವರಲ್ಲೊಬ್ಬರಾದರು ನಟಿಸರು. ಇದರಲ್ಲಿ ಲೇಶವಾದರೂ ಹರ್ಷ ನನಿಗೆ ತೋರುವದಿಲ್ಲವೆಂದುದಕೆ ಮತ್ತೋರ್ವನು ;—ಅದೇತಕ್ಕೆ ವೈಭವದಿಂದಲು ದ್ರವ್ಯಕೊರತೆ ಇಲ್ಲದೆಯು ವಿವಾಹ ನಡಿಸುತ್ತಾಇದಾರೆ ಎನೆಲದಕ್ಕವನು ;—ಪ್ರಯೋಜನವೇನು. ಇದೊಂದು ದುರುಳದಾಂಪತ್ಯವು. ವಧುವು ಸಮಾನರಹಿತವಾದ ಮನೋಹರಳಾದ ನಾರೀಮಣಿಯು ಅವಳ ಮುಖಚಂದ್ರನು ಲೋಕಚಂದ್ರನನ್ನು ಹಿಯ್ಯಾಳಿಸುವನು. ವರನನ್ನು ನೋಡಿದರೆ ತಾಂಬ್ರಶಿರಸ್ಸಿನ ನರಿತ ಕೂದಲ ವೃದ್ಧ

ನಾದ ಭೋಜ್ಯರಾಯನು. ಅವನ ಒಂದುಕಾಲುಗಲೆ ಕಾಡುಪುರದಲ್ಲಿರುವದು. ಮತ್ತೊಂದು ಕಾಲು ಬಿಸಿನೀರಿನಲ್ಲಿರುವದು. ಅವನು ಹಸೇಜಗುಲಿಯಮೇಲೆ ಕೋಲೂರಿಕೊಂಡು ನಿಂತಿದ್ದದ್ದನ್ನು ನೀವು ನೋಡಲಿಲ್ಲವೆ? ತಾಳಿಯನ್ನುಕಾಲುಘಂಟೆವರಿಗು ಜೇಬಿನಲ್ಲಿ ತಡಕಿ ಕಡೆಗೆ ಈಚೆಗೆ ತೆಗೆದದ್ದು ಸುಲೋಚನವಲ್ಲವೆ? ಅದುಸಹ ಕೈನಡಿಗಿನಿಂದ ನೆಲಕ್ಕೆ ಬಿದ್ದು ಒಡೆದು ಹೋಗಲಿಲ್ಲವೆ? ಎನಲು ಮತ್ತೋರ್ವನು ಅವನು ನಿಷ್ಕಪಟಿಯು ದಯಾಳುವು ಸಂಭಾವಿತನು ನಿಧಾನಿಯು ಹೌದು ಆದರೆ ನೀನು ಹೇಳುವಂತೆ ಅವನು ಅತ್ಯಂತ ವೃದ್ಧನು. ಅವನ ಕಾಲು ನಡುಗುತ್ತಾ ಇರುವವು. ಅವನು ಹ್ಯಾಗಿದ್ದರೆ ನಮಗೇನು ಬನ್ನಿ. ಅರಮನೆಯ ಉದ್ಯಾನಕ್ಕೆ ಹೋಗಿ ಸ್ಥಳಗಳನ್ನು ಮಾಡಿಕೊಳ್ಳೋಣ. ಈ ರಾತ್ರಿ ಮದ್ದಿನ ನೋಟವುಂಟೆಂದು ಹೊರಡುವಷ್ಟರಲ್ಲಿ, ರಾಮವರ್ಮನು ಅವರ ಸಮೀಪಕ್ಕೆ ಬಂದು;—ಎಲೈ! ಸ್ನೇಹಿತರೆ ಯಾರ ಮದುವೆಯ ವಿಷಯವಾಗಿ ನೀವು ಮಾತನಾಡಿಕೊಳ್ಳುತ್ತಲಿರುವಿರಿ. ಇದೇನು ಸುರೇಂದ್ರರಾಯರ ಮದುವೆಯೊ ಎನಲು ;—ಹೌದು ಎನಲವನು ಪುನಃ ;—ಮಹಾರಾಯನು ವೇಷನಾಟ್ಯವನ್ನು ಮಾಡಿಸುತ್ತಾನೆಂದು ಹೇಳಿದಿರಲ್ಲವೆ ಎಂದುದಕವರು. ಹಾಗೆಂದು ನಾವು ವರ್ತಮಾನ ಕೇಳಿರುವೆವೆಂದು ಹೇಳಿ ಉದ್ಯಾನದಕಡೆ ತೆರಳಿದರು.

ರಾಮವರ್ಮನು ಇದು ಹೀಗಾಯಿತೆ ಮೀರಿಹೋಯಿತಲ್ಲ ಈಗೇನುಮಾಡಲಿ ಆದರು ತತ್ವವೇನೋ ಬಹಿರಂಗವಾಗಲಿ ಕೆಲಸ ಮೀರಿಹೋಗಿ ಬದಲಾಯಿಸಲಾಗದಿದ್ದರು ಯಥಾರ್ಥವನ್ನಾದರು ಜನರಿಗೆ ತಿಳಿಸುವೆನೆನುತ್ತ—

ಕಂದ॥ ಬರ ಬೇಡೆಂ ದೊಡನುಬಿಡದೆ ।
ಬರುವಂ ಘೋರನ ಟನೋರ್ವ ನೀನಾ ಟ್ಯದೊಳುಂ ॥
ಕರಿಯದೆ ದಕ್ಷನ ಯಾಗವ ।
ವರವೀ ರಭದ್ರ ನುಪೊಕ್ಕ ತೆರದಿಂ ದಮಮಾ ॥

ವೀರಬಾಹುಮಹಾರಾಯನು ವಧುವರರ ಮರ್ಯಾದೆ ಮತ್ತು ವಿನೋದಾರ್ಥವಾಗಿ ವೇಷನಾಟ್ಯಮಂ ಮಾಡಲೊಸುಗ ತನ್ನ ಮನೋಹರವಾದ ಅರಮನೆಯಲ್ಲಿ ಮದನ ವಿಲಾಸ ತೋಟ್ಟಿಯಂ ನಾಟ್ಯರಂಗವಾಗಲಂಕರಿಸಿ ಆಸ್ಥಾನದ ದೊಡ್ಡಮನುಷ್ಯರಿಗು ಅವರ ರಾಣಿವಾಸಕ್ಕು ಔತಣಂಗೈದಿರಲವರೆಲ್ಲರು ತಮ್ಮ ಇಚ್ಛೆಬಂದಂತೆ ವೇಷಧಾರಿ

ಗಳಾಗಿ ಬಂದು ಸೇರುತ್ತಿದ್ದರು. ರಾಜನು ವಿಶ್ವಾಮಿತ್ರನಂತೆ ವೇಷವನ್ನಳವಡಿಸಿಕೊಂಡು ಊರ್ವಸಿ ವೇಷದಿಂದಿದ್ದ ಕೈರವಿಯೊಡನೆ ನಾಟ್ಯರಂಗದ ಮುಂಭಾಗದೊಂದು ಕೊಟ್ಟಡಿಯಲ್ಲಿ ಕೈರವಿಯ ಗಾನಸುಧೆಯಂ ಸವಿದು ಆನಂದಭರಿತನಾಗಿ ;—

ಎಲೈ ಸುರನಾರಿಮಣಿಯೆ ನೀನೀಗ ಹೇಳಿದ ಸಂಗೀತವು ಕೊಂಚವಾದರು ಮಾಧುರ್ಯ ಕಡಮೆಯಾಗಿದ್ದರೆ ನನ್ನ ಬುದ್ಧಿ ನನ್ನ ಸ್ವಾಧೀನದಲ್ಲಿದ್ದು ಮತ್ತಿನ್ಯಾವ ರಾಗವನ್ನಾದರು ಹೇಳೆಂದು ಹೇಳಬಹುದಾಗಿತ್ತು. ಹಾಗಲ್ಲದೆ ನಿನ್ನ ರಾಗಕ್ಕೆ ಸಂಪೂರ್ಣವಾಗಿ ಮರುಳಾಗಿರುವವದರಿಂದ ನನಿಗೇನು ತೋರುವದಿಲ್ಲ. ನೀನೇ ನಿನ್ನ ಮನಸ್ಸಿಗೆ ಬಂದ ರಾಗವನ್ನು ಹಾಡೆನಲು ;—

ಗಂಧರ್ವಳು ಸ್ವಾಮಿ ನನಿಗೆ ತಿಳಿದಿರತಕ್ಕವೆ ಇಂಥಾರಾಗಗಳು. ನಾನು ಚಿಕ್ಕವಯಸ್ಸಿನವಳು ಸಂಗೀತವನ್ನು ಯಾರಲ್ಲೂ ಕಲಿತವಳಲ್ಲ. ಸ್ವಾಭಾವಿಕವಾಗಿ ಬಂದ ಕೆಲವು ರಾಗಗಳನ್ನು ಬಲ್ಲೆನು. ನಾನು ಪಕ್ಷಿಗಳಂತೆ ನನ್ನ ಹೃದಯದೊಳು ಹುಟ್ಟಿದ ರಾಗವನ್ನುಮಾತ್ರ ಹಾಡುವೆನೆನಲದಕ್ಕವನು ; ಅದರಲ್ಲಿ ಹುಟ್ಟಿದ ರಾಗವನ್ನೆ ಹಾಡುವಳಾಗು. ನಿನ್ನ ಗಾನವು ನನ್ನ ಇಂದ್ರಿಯಗಳನ್ನು ಕೆಣಕುವದು. ಅವು ಮಿತಿ ಮೀರಿ ಲೋಕದಲ್ಲಿ ಅವಮಾನಕೃತ್ಯವಂ ನಡಿಸ್ಯಾವು ; ಆದರೆ ಇದುವರಿಗಿನ ಆನಂದಬಾಷ್ಪಗಳು ಆಕ್ಷೇಪಣೆಗೆ ಕಾರಣವಾದವುಗಳಲ್ಲ. ಇಲ್ಲಿ ವೇಷಧಾರಿಗಳು ಬಂದುಸೇರುತ್ತಾ ಇರುವರು. ನೀನು ಹೇಳತಕ್ಕ ಗಾನಗಳು ಎಲ್ಲರೂ ಕೇಳತಕ್ಕವುಗಲ್ಲ. ಇಗೋ ಈ ಬಾಗಲಿಂದ ಬಂದು ಗುಪ್ತಸ್ಥಾನಕ್ಕೆ ಹೋಗಬಹುದೆಂದು ಅವಳಂ ಕೈಹಿಡಿದು ಕರದುಕೊಂಡು ಹೋಗುತ್ತಾ ;—

ಕಂದ॥ ನಿನ್ನಯ ಗಾನಸುಧಾಕರ।
ಕೆನ್ನನೆ ಪೆರಗುತ್ತ ನಿನ್ನ ಕೈಸೇರ್ದಪುದೇಂ ॥
ನಾನಂ ಧನಾಪಮೊದನುಂ।
ಎನಗೇ ಕನೇತ್ರ ಚಕೋರಗಳುಚಂದ್ರಮುಖೀ ॥
ಕಿರಿಯಾ ಣ್ಣಂನಾ ನಾಗೀ।
ತೆರದೋಳ್ ಪಗಲಿರುಳು ನಿನ್ನೊಡನಾಡಿಅಳೀ॥
ತರಹರಿ ಸಲಾರ ದಮೋಹ।
ಶರಕೀಡಾದೆ ನ್ನನೆಂತು ಮಾರಾರಿ ಪ್ರೇರೆವಂ ॥

ಅಷ್ಟರಲ್ಲಿ ರಾಮವರ್ಮನು ವೇಷಧಾರಿಯಾಗಿ ಅಲ್ಲಿಗೆಬಂದು ; ಅವರೀರ್ವರು ಗುಪ್ತಸ್ಥಾನಕ್ಕೆ ಪೋದುದಂ ಕಂಡು ;—ಆ ಗಾಯಕಿಯ ಧ್ವನಿಯಂ ನೋಡಿದರೆ ಅವಳು ಕೈರವೆಯಾಗಿರಬೇಕು. ವಿಶ್ವಾಮಿತ್ರನಂತಿದ್ದವನೆ ರಾಯನಾಗಿರಬೇಕು. ಓಹೋ ರಾಯನ ಗಾಣಿಕ್ಕವಳು ತಗಲಿದಂತಿರುವದು. ಅವನ ಮೃದುನುಡಿಗಳವಳಿಗೆ ಕರ್ಣಾನಂದವಾಗಿರುವವು. ಅವಳ ತಂದೆ ಬಹುಶಃ ಇಲ್ಲಿಗೀಗ ಬರುವನು. ಅವನನ್ನು ಕೊಂಚ ಎಚ್ಚರಿಸುವೆನೆನುನಷ್ಟರಲ್ಲಿ—

ಅನೇಕ ವೇಷಧಾರಿಗಳು ನಾಟ್ಯರಂಗಕ್ಕೆ ಆ ಕೊಟ್ಟಡಿಯ ಮಾರ್ಗವಾಗಿ ಹೋಗುತ್ತಾ ಬರುತ್ತಾ ಒಬ್ಬ ವೇಷಧಾರಿಯು ಮತ್ತೊಬ್ಬನಂಕುರಿತು ;—ನೀನು ನರೇಂದ್ರನಲ್ಲವೆ ಅಹುದಹುದು ನಿನ್ನ ರುಮಾಲಿನ ಜುಂಗಿನಿಂದ ಗೊತ್ತಾಗುವದು. ನೀನು ನರ್ತಿಸಿ ಆಯಿತೆನಲದಕ್ಕವನು;—ಹೌದು ಆದರೆ ಈ ಉತ್ಸವಗಳು ವ್ಯಸನವನ್ನುಮಾತ್ರ ಉಂಟುಮಾಡುವವು. ಅಗೋ ಅಲ್ಲಿ ದೂರದಲ್ಲಿರುವ ವಧುವು ನಿನಗೆ ಕಾಣಿಸುವಳೆ ? ಸತ್ಯವಾಗಿಯೂ ಅವಳು ಹಿಮದಲ್ಲಿರತಕ್ಕ ಕಲ್ಲಿನ ಪ್ರತಿಮೆಯಂತೆ ಕಾಣುವಳೇಹೊರ್ತು ಇಂದ್ರಿಯಂಗಳಿಂ ಕೂಡಿದ ವಧುವಿನಂತೆ ಕಾಣುವದಿಲ್ಲವೆಂದು ವೇಷಧಾರಿಯು ರಾಮವರ್ಮನಕಡೆ ತಿರಗಿ ನಿಮಗೆ ಕಾಣುವಳೆ ಸ್ವಾಮಿ ! ಅಲ್ಲಿ ನೋಡಿ ಅವಳನ್ನು ನೋಡಿದರೆ ಪಶ್ಚಾತ್ತಾಪ ಉಂಟಾಗುವದು. ಕ್ಷೀಣಿಸತಕ್ಕ ವಯಸ್ಸನ್ನು ಇಂಥಾ ಮನೋಹರಳಿಂದ ಅಲಂಕರಿಸುವ ವೃದ್ಧರು ಏನು ಸುಖಪಡುವರೋ ಎಂದು ಆಶ್ಚರ್ಯವಾಗುವದು. ಸ್ವಾಮಿ ! ಕಾಲಾಗ್ನಿಗೆ ಮುಡಿಸಿದ ಪುಷ್ಪದಂತಿರುವ ಧವಳಮುಖ ಕಮಲವೆಂಬುದಂ ಕೇಳಿ ವೇಷಧಾರಿಯು ಇದುಮಾತ್ರ ಆಶ್ಚರ್ಯವೇನು. ಯೌವ್ವನದಲ್ಲನುಭವಿಸತಕ್ಕ ಪದಾರ್ಥ ಸಂಘಟಿಸಿದಮಾತ್ರಕ್ಕೆ ಯೌವ್ವನದ ಸುಖಪಡಬಹುದೆಂದು ವಯಸ್ಸಾದವರು ಮಾಡತಕ್ಕ ಸಾಧಾರಣ ತಪ್ಪಿತವಾಗಿರುವದು. ಆದರೂ ಈ ವಿವಾಹಮಾತ್ರ ಕಳಿಂಗನಿಂದ ಆದದ್ದೆಹೊರ್ತು ಸುರೇಂದ್ರರಾಯನಪೇಕ್ಷೆಯಿಂದ ಆದದ್ದಲ್ಲ. ನಾವಿಲ್ಲಿ ನರ್ತನಕ್ಕಾಗಿ ಬಂದಿರುವೆವಾದ್ದರಿಂದ ರಂಗಸ್ಥಳಕ್ಕೆ ಹೋಗೋಣ ಬನ್ನಿರೆಂದು ಹೋದರು.

ರಾಮವರ್ಮ ಅಲ್ಲೆ ಮರೆಯಾಗಿ ನಿಂತು ಅಲ್ಲಿದ್ದ ಮತ್ತೊಬ್ಬ ವೇಷಧಾರಿಯಂಕಂಡು ನೀನ್ಯಾರು ಸುಬಾಹುವಂತೆ ತೋರುವದೆನಲವನು ಹೌದು ನಿಮ್ಮ ಧ್ವನಿಯಿಂದ ನೀವು ರಾಮವರ್ಮರಾಯರಂತೆ ನನಿಗೆ ತೋರುತ್ತೀಂದವನಂಕುರಿತು ; ಎಲೈ ಸುಬಾಹುವೆ! ನಾನಿಲ್ಲಿರುವದನ್ನು ಹೊರಚ್ಚುಮಾಡಬೇಡ. ನಾವು ಒಳಗೆ ನಾಟಕರಂಗಕ್ಕೆ

ಹೋದಾಗ ನಾನು ಪ್ರತ್ಯೇಕ ನಿಂತಿರುವೆನು ಜನದ ಗುಂಪನ್ನಗಲಿಸಿ, ಅಲ್ಲಿಗೆ ಪದ್ಮಿನಿ ಬರು ವಂತೆ ಮಾಡುವನಾಗು. ಎಲೈ ಮಿತ್ರನೆ ನಿನ್ನ ಕುಮಾರಿಯು ರಾಮನ ರಹಸ್ಯದಲ್ಲಿರುವ ದನ್ನು ತಿಳದಿರುವನಾಗೆನಲದಕ್ಕವನು:—ಆ ಮಾತನ್ನು ಹೇಳಬೇಡೆಂದವಂಗವನು:—ನಾನು ಹೇಳಿದ್ದು ನಿಜ. ನಿನ್ನಕನ್ಯಾಮಣಿಯು ಕಮಲಮೊಗ್ಗಿನ ಮಧ್ಯಕುಸುಮದಂತೆ ಮೌನ ವಾಗಿದ್ದಾಗ್ಯೂ ಸೂರ್ಯಕಿರಣಗಳು ಮಂದಮಾರುತವು ಕಮಲಮೊಗ್ಗನ್ನಾವರಿಸಿಕೊಂ ಡಿರುವದನ್ನು ನಾನು ನೋಡಲಾರೆನೆನಲದಕ್ಕವನು:—ನೀವು ಹೇಳುವದು ನಿಜ. ಈ ವಿಷ ಯದಲ್ಲಿ ನನಗೆ ನೀವು ಆಲೋಚನೆಯನ್ನುಹೇಳುತ್ತಾ ಇರುವರಾಗಿ. ಅಗೋ! ನೋಡಿ ಗುಂಪೊಡೆಯುತ್ತಾ ಇರುವದು. ಈಗ ನಾವು ಹೋಗೋಣವೆಂದು ನಾಟ್ಯರಂಗವಂ ಪ್ರವೇಶ ಮಾಡಿದರು.

ಆ ನಾಟ್ಯರಂಗವನ್ನು ವೇಷಧಾರಿಗಳು ತಂಡತಂಡವಾಗಿ ಪ್ರವೇಶಿಸುತ್ತಾ ಇರು ವಾಗ ಪದ್ಮಿನಿಯು ತನ್ನ ಸಖಿ ಕಮಲಿನಿಯೊಡನೆಯು ಸುರೇಂದ್ರನು ಕಳಿಂಗನೊಡನೆಯು ವಧುವರರಂತೆಯೆ ವೇಷರಹಿತರಾಗಿ ಪ್ರವೇಶಿಸಿದರು. ಕಳಿಂಗನು ನಾಟ್ಯರಂಗವನ್ನು ನೋಡಿ ಇನ್ನೂ ಹೆಚ್ಚಾಗಿ ಬೆಳಕುಗಳನ್ನು ತೆಗದುಕ್ಕೊಂಡು ಬನ್ನಿ. ಈ ಕತ್ತಲೆಯಲ್ಲಿ ಮಾಡತಕ್ಕದ್ದೇನು? ಗಾಯಕರೆ! ಶ್ರುತಿಮಾಡುವರಾಗಿ. ನೀವು ಪಿಟೀಲುಗಳನ್ನು ಶ್ರುತಿ ಮಾಡುವದರ ಬೇಜಾರಿನಿಂದ ನಿಮ್ಮ ಗಾಯನದ ಸುಖಕ್ಕಿಂತ ಹೆಚ್ಚಾದ ಸಂಕಟ ತೋರು ವದು. ಪ್ರಭುಗಳು ಸ್ವರ್ಗಾರೋಹಣರಾಗಿದ್ದರೆ ಸಂತೋಷವೆ ಸರಿ. ಅವರು ಇಲ್ಲಿಲ್ಲು ಕಾಣುವದಿಲ್ಲವಾಗಿ ಇಲ್ಲಿನ ಅತಿಥಿಗಳು ತಮ್ಮ ಮನಬಂದಂತೆ ಲೀಲಾಸಕ್ತರಾಗಿರದಿರುವ ದೇನಾಶ್ಚರ್ಯವೆಂದ ಕಳಿಂಗನಂ ಕುರಿತು:—ಸುರೇಂದ್ರನು ಇವರನ್ನು ಸಂತೋಷಪಡಿಸು ವದು ವೃದ್ಧನಿಂದಲೇನಾದರು ಆಗುವ ಪಕ್ಷದಲ್ಲಿ ನಾನು ಹರ್ಷದಿಂದ ಸಹಾಯ ಮಾಡು ವೆನೆಂದುದಕ್ಕೆ ಕಳಿಂಗನು:—ವೃದ್ಧನುಂದರೇನು? ಇಂದು ನಮಿಗೆಲ್ಲವು ಪ್ರಾಯ ತೋರು ವದೆಂದನು.

ಕಮಲಿನಿಯು ಸುರೇಂದ್ರನಂ ಕುರಿತು ಸ್ವಾಮಿಯುವರು ನನ್ನಸಂಗಡ ನರ್ತನ ಮಾಡಲು ಚಟವಟಿಕೆಯಾದ ಬುದ್ಧಿಶಾಲಿ ನಟನು ಜೊತೆಯಾಗಲು ಸಹಾಯ ಮಾಡಬೇ ಕೆನಲು ಸುರೇಂದ್ರನು:—ಅಗತ್ಯಮಾಡುವನೆಲೆ ಮನೋಹರಳೆ ಎಂದುದಕ್ಕೆ ಪದ್ಮಿನಿಯು:— ನೀನು ನನ್ನನಗಲಿ ಹೋಗದಿರು ಎಲೈ ಕಮಲಿನಿಯೆ! ನಾನೊಬ್ಬಳೆ ಇರತಕ್ಕವಳಲ್ಲವೆಂ ದವಳಂ ಕೈ ಹಿಡಿದು ನಿಲ್ಲಿಸಿದಳು.

ಕಮಲಿನಿಯು ತ್ರಿಭುವನನಂ ಕುರಿತು, ಹುಚ್ಚನೆ ನನ್ನಕಡೆ ತಿರಗಿ ನೋಡು. ಪ್ರಭುಗಳ ವೇಷಾನಾಟ್ಯಕ್ಕೆ ನೀನು ವೇಷವಿಲ್ಲದೆ ಸಾಧಾರಣವಾಗಿ ಯಾತಕ್ಕೆ ಬಂದಿರುವೆ. ಎಂದುದಕವನು:—ಮಾನ್ಯಳೆ ನಾನು ಹೇಳುವವನ್ನು ಮನಸ್ಸಿಗೆ ತೆಗದುಕೊಳ್ಳುವರಾಗಿ ನನ್ನ ಸಹೋದರಿಯು ಈಗಿನ ಉತ್ಸವಗಳು ನೀನು ನಿನ್ನ ಸ್ವಭಾವವೆ ತೋರಿಸತಕ್ಕವುಗಳಾಗಿವೆ ; ಅದನ್ನು ಮರೆಮಾಡಬೇಡೆಂದು ಹೇಳಿರುವಳೆಂದುದಕೆ ;—ನಿನ್ನ ಸಹೋದರಿಯೋ? ನಿನಗೆ ಸಹೋದರಳಿರುವಳೆಂದು ನನಿಗೆ ತಿಳದಿರಲಿಲ್ಲ. ಅವಳ್ಯಾರು ಹೇಳೆಂದ ಕಮಲಿನಿಗೆ;—ಅವಳನ್ನು ಜ್ಞಾನವೆಂದು ಲೋಕದಲ್ಲಿ ಕರಿಯುವರು. ಲೌಕಿಕದ ಜ್ಞಾನವು ಹುಚ್ಚರ ಒಡಹುಟ್ಟಾದ ಸೋದರಿಯಾಗಿರುವಳೈ ಶ್ರೀಮಂತಳೆ ಎಂದುದಕವಳು;—ಅದನ್ನೊಡಗೂಡಿರತಕ್ಕ ಹುಚ್ಚನು ಹುಚ್ಚನೆಂದಿಗಾದಾನು ಹೇಳೆಂದಳು, ತ್ರಿಭುವನನು;—ಹಾಗಾದರೆ ನಾನು ವೇಷಧಾರಿಯಾದಹಾಗೆ ಆಯಿತಲ್ಲ. ಈಗಿನ ಸಂದರ್ಭದಲ್ಲಿ ನಾನು ಮಟ್ಟಿಗೆ ಹುಚ್ಚನಾಗಿಲ್ಲವೆಂದನು.

ಸುಬಾಹು ಒಂದು ಪರದೆಯ ಮರೆಯಲ್ಲಿ ಹೊರಬ್ಬಾಗಿ ನಿಂತಿದ್ದ ರಾಮವರ್ಮನಂಕುರಿತು ನಾನು ಅವಳನ್ನುಕಂಡಿದ್ದೆನು, ನಿನ್ನಸಂಗಡ ಮಾತನಾಡುವದಕ್ಕೆ, ಮುಂಚೆ ನೀನಿಂತವನೆಂದು ತಿಳಿದುಕೊಳ್ಳಬೇಕೆಂದು ಹೇಳುವಳೆಂದುದಕವನು;—ಹಾಗಾದರೆ ಮರೆಯಾಗಿ ಯಾತಕ್ಕೆ? ಬಹಿರಂಗವಾಗಿಯೆ ಕಾಣುತ್ತೇನೆಂದನು.

ಕಮಲಿನಿಯು ಪುನಃ ತ್ರಿಭುವನನಂ ಕುರಿತು;—ನೀನೇತಕ್ಕೆ ವ್ಯಸನಪಡುವನಂತೆ ಕಾಣುತ್ತಿರುವದೆಂದಳು. ನೆನ್ನೆ ರಾತ್ರಿಯು ನನ್ನ ಸ್ವಪ್ನಗಳನ್ನು ಆಲೋಚಿಸಿಕೊಂಡರೆ ನಾನು ದುಃಖಿತನಾಗಿರುವದರಲ್ಲಿ ಆಶ್ಚರ್ಯವೇನಾವಮಾನ್ಯಳೆ ಎಂದುದಕವಳು ;—ನೀನು ಸ್ವಪ್ನದಲ್ಲೇನು ಕಂಡೆ, ಹೇಳೆಂದಳು. ನಾನು ಸ್ವಪ್ನದಲ್ಲಿ ನಾನೊಬ್ಬ ದರ್ಜಿಯಂತೆ ಕಂಡು ನನ್ನ ಮದುವೆಗಾಗಿ ದೇವಸ್ಥಾನಕ್ಕೆ ಮಡಚಿದ ಕಾಲಿನಿಂದ ಚಟ್ಟದಮೇಲೆ ಕೂತುಕೊಂಡು ನನ್ನಕವದ ಮುಸಗಿಗೆ ತೇಪೆ ಹಾಕುತ್ತಾ ಇದ್ದೆನು ಎಂದನು. ಇಷ್ಟುತಾನೆ, ಎಂದ ಕಮಲಿನಿಯಂ ಕುರಿತವನು;—ಇಷ್ಟೆ ಅಲ್ಲ. ನಾನೊಂದು ಬರೀ ಪೀಪಾಯಿಮೇಲೆ ಸವಾರಿಯಾಗಿ ಸಮುದ್ರದೊಳಗೆ ತೀರವನ್ನುಬಿಟ್ಟು ಒಂದುಸಹಸ್ರ ಮೈಲಿ ಹೋಗಿದ್ದೆನು. ನನ್ನಎದುರಿಗೆ ಸುಂದರಿಯಾದೊಬ್ಬ ಜಲಕನ್ನಿಕೆ ನೀರಿನಮೇಲೆ ಕುಣಿಯುತ್ತಿರಲು ನಾನು ಅವಳ ಸಮೀಪಕ್ಕೆ ಹೋಗಿ ಆಲಿಂಗನೆ ಮಾಡಿಕೊಳ್ಳಲಾರನೆಹೋದೆನೆಂದನು.

ಅಷ್ಟರಲ್ಲಿ ಕಳಿಂಗನು ಸಾಮಾಜಿಕರನ್ನು ಪ್ರೋತ್ಸಾಹಪಡಿಸುತ್ತಾ, ಪ್ರಭು

ಗಳು ತಮ್ಮ ಮನಬಂದ ಸಂತೋಷದಲ್ಲಿಲ್ಲೊ ಇರುವರು. ಅವರನ್ನು ಇನ್ನು ಕಾಯುವದಕ್ಕಾಗುವದಿಲ್ಲ. ಎಲೈ ರಸಿಕರೆ! ನರ್ತನಕ್ಕೆ ಜೊತೆಯಾಗಿ. ಎಲೈ ಗಾಯಕರೆ! ಹಾಡಲುಪಕ್ರಮಿಸಿ. ಜನರಿಗೆಲ್ಲಾ ಚೆನ್ನಾಗಿ ಮಾನವಾಗಲಿ. ರಸಿಕರೆಲ್ಲರು ಈ ದಾರಿಯಲ್ಲಿ ಮುಂದಕ್ಕೆ ಬನ್ನಿ ಎನ್ನುತ್ತಿರುವಾಗ; ಅವರಿಗೆ ಅಡ್ಡಲಾಗಿ ಒಬ್ಬನು ವಿಜಾತೀಯವಾಗಿ ಬಲಗೈಯಲ್ಲಿ ಬೆತ್ತದ ಛಡಿಯನ್ನು ಎಡಗೈಯ್ಯಲೊಂದು ಪಂಜನ್ನು ಹಿಡಿದುಕೊಂಡು ಘೋರವಾದ ವೇಷಧಾರಿಯಾಗಿ ಕಾಲಭೈರವನಂತೆ ಬಂದುನಿಂತು; ನನ್ನ ವಾರ್ತೆಯನ್ನು ಕೇಳುವದಕ್ಕೆ ಮುಂಚೆ ನೀವು ಮುಂದೆ ಅಡಿ ಇಡಬೇಡಿರೆಂದನು. ಕಳಿಂಗನು ಆ ವಾರ್ತೆಯೇನು? ಇದೇನೊ ಹಾಸ್ಯಕರವಾದ ವೇಷವಾಗಿರುವದು! ನಿನ್ನ ವೇಷದ ಪರಿಯು ಭಯಂಕರವಾಗಿದ್ದಾಗ್ಯೂ ನನಗೆ ಚೋದ್ಯವನುಂಟುಮಾಡುವದು. ನೀನ್ಯಾರು? ಭೂತವೊ? ಪ್ರೇತವೊ? ಬಕನೊ? ಕಂಸನೊ? ಹಿಡಿಂಬನೊ? ಎಂದುದಕ್ಕೆ ವೇಷಧಾರಿ—

ಕಂದ॥ ಅವರಿಂದಧಿಕಂನಾಂಗಡ ।
ತವೆಸೋಲ್ಪೆನುನಿಂಮಯಮನಗಳಗಡಬರುವೇಂ ॥
ಜವನೊಲು ಎಲ್ಲರಲುಂಗಡ ।
ಭುವನಮನೋಕ್ಲೇಶವೆಂದರಿವುದೆನ್ನಂಗಡ ॥
ಮರಿವಿರೆನಿತುನನ್ನಂನೀವ್ ।
ತರತರಗಾನಾದಿಗೀತಗಳೊಳಿದೋಡನುಂ ॥
ಬರುವೆನುನೀವೆಂತಿರಲುಂ ।
ಕರದ ಛಡಿಯೊಳು ಬಡಿವೇಂತರಹರಿಸುವರ್ಯಾರ್ ॥
ಸಡಗರದಿಂಪಾಡುತಲಿರೆ ।
ಕಡುಪಾಪಿಯುಮನ ಗಡಗಡ ನಡುಗದೆ ಗಡನೀವ್ ॥
ಬಿಡಿಬಿಡಿ ಈ ಗಡಬಿಡಿಯಂ ।
ಜಡಿವೆನು ಛಡಿಯಿಂ ತಡಬಡಮಾಡಿದೊಡೀಗಂ ॥
ನಾಂಪಾಪಾತ್ಮರ ಮನವಂ ।
ಎನ್ನಪಂಜಿನಬೆಳಕಲಿ ಬಳಸಿಪಿಡಿವೆ ಕೇಳಯುಂ ॥
ಈ ಪದ್ಮಿನಿಕೊಟ್ಟಭಯುವಂ ।
ತಪ್ಪಿರುವದರಿಂದಇಲ್ಲಿಗೈದಿರ್ಪೆನುನಾಂ ॥

ಕಳಿಂಗನು ಕೋಪಾಕ್ರಾಂತನಾಗಿ ಇದೆಂತ ವೇಷವು ? ನಿಂದಕನಾದ ಖಳನನ್ನು ಮರೆಮಾಡುವ ವೇಷವಾಗಿದೆ. ದೂತರುಗಳ್ಯಾರಿರುವಿರಿ, ಬಂದು ಈ ಗುಲಾಮನ ವೇಷವನ್ನು ಕಿತ್ತುಹಾಕಿ ಇವನ್ಯಾರು ನೋಡುವರಾಗಿ ಎಂದನು. ಸುಬಾಹುವು ಮೂರ್ಛೆಹೋಗುತ್ತಿರುವ ಪದ್ಮಿನಿಯನ್ನು ಕೈಗಳಿಂದ ಎತ್ತಿ ನಿಲ್ಲಿಸುತ್ತಾ:—ಜನರೆಲ್ಲಾ ದೂರಾ ಹೋಗುವರಾಗಿ; ಇವಳ ಬಳಿಗೆ ಇನ್ನು ಕೊಂಚ ಹೆಚ್ಚಾಗಿ ಘಾಳಿ ಬರಲು ಅವಕಾಶಕೊಡಿ ಎನ್ನುತ್ತಿದ್ದನು. ಇದನ್ನು ನೋಡಿ ಕಮಲಿನಿಯು ವ್ಯಸನದಿಂದ ಪದ್ಮಿನಿಯ ಕೆನ್ನೆಯನ್ನು ಹಿಡಿದುಕೊಂಡು ಧೈರ್ಯವನ್ನು ತಂದುಕೊ. ಈ ಖೂಳನು ಯಾರಿರಬಹುದೆಂದು ನೋಡುತ್ತಿದ್ದಳು. ಸುರೇಂದ್ರನು ಯಾರಾದರು ಓಡಿಹೋಗಿ ನೀರು ತೆಗೆದುಕೊಂಡು ಬನ್ನಿ ಎಂದನು. ಕಳಿಂಗನು ನೀವೆಲ್ಲ ಯಾತಕ್ಕೆ ನೋಡುತ್ತಿರುವಿರಿ? ಇವನ ವೇಷವನ್ನು ಕಿತ್ತುಹಾಕಿ ಈ ಖಳನನ್ನು ಗೊತ್ತುಮಾಡಿರೆಂದು ಕೂಗುತ್ತಿದ್ದನು. ವೇಷಧಾರಿಯು ನೀವು ಕೀಳತಕ್ಕ ಅವಶ್ಯಕವಿಲ್ಲವೆಂದು ವೇಷವನ್ನು ತೆಗೆದು ಬಿಸಾಟು ತನ್ನ ಸ್ವಭಾವವನ್ನು ಹೊರಪಡಿಸಿದನು.

ಕಮಲಿನಿಯು ಇದೇನು! ರಾಮವರ್ಮನು ಹ್ಯಾಗೆ ಮಾಯವಾಗಿದ್ದನೊ ಹಾಗೆಯೆ ಪ್ರತ್ಯಕ್ಷವಾಗಿರುವನು ಎಂದು ಸ್ತಬ್ಧಳಾಗಿ ನಿಂತಳು. ಸುರೇಂದ್ರನು ಅದು ಯಾರು? ನನಿಗೆ ಕೊಂಚ ಹೇಳಿ. ನನ್ನ ಕಣ್ಣುಗಳು—ಎನ್ನುವಷ್ಟರಲ್ಲಿ;—ಕಳಿಂಗನು ನನ್ನ ಕಣ್ಣಿಂಸಹಾ ಮೊಬ್ಬಾಗಿ ಕಾಣದೆ ಇದ್ದರೆ ಚೆನ್ನಾಗಿತ್ತು. ಎಲೈ ರಾಜಕುಮಾರನೆ! ನೀನು ವೇಷದಲ್ಲಿದ್ದಾಗ್ಯೆ ನಾನು ಹೇಳಿದ ಕಠಿಣೋಕ್ತಿಗಳಿಂ ಹಿಂತಿರುಗಿಸುವ ಮುನ್ನವೆ ನಾನು ನಿನ್ನಿಂ ಕ್ಷಮಿಸೆಂದು ಬೇಡುವೆನು. ಆದರೆ ನಮ್ಮ ವಿವಾಹಮಹೋತ್ಸವವನ್ನು ನೀವ್ಯಾತಕ್ಕೆ ಆತಂಕಪಡಿಸುತ್ತಿರುವಿರಿ ಹೇಳಿರೆಂದುದಕೆ, ರಾಮವರ್ಮನು ;—

ಕಂದ॥ ನನ್ನೊಳ್ಕಠಿಣೋಕ್ತಿಯನುಂ ।
ನೀನಾಡಿದೊಡೇನು ಆಡದಿದಿರ್ದೊಡನೇನೈ ॥
ನಿನ್ನಾಕ್ಕಜೆ ರವಿವರ್ಮಗೆ ।
ತನ್ನಕಟಾಕ್ಷವನುನೀಡಭಯವಿತ್ತಿರ್ಪಳ್ ॥
ಶಿವರಾತ್ರಿಯುಮರಿಗುಂತಲಾಂ ।
ರವಿವರ್ಮನನುಳಿದುವರಿಸೆ ಮತ್ತೋರ್ವನನೆಂ॥
ದವಳೀತಕೆ ಈಪರಿಯಿಂ ।
ನವವರನಕರವ ಪಿಡಿದಿರುವಳು ಪೇಳಿಲೆನೀಂ ॥

ಕಳಿಂಗನು ಇದೇನು ನಿನ್ನ ಘೋರಕರ್ಮವನ್ನು ಹೆಚ್ಚಿಸುತ್ತಲೆ ಇರುವೆ. ಇವಳು ಮೋಹಿಸಿದ್ದುದನ್ನು ಯಾರು ಹೇಳುವರು ಎನಲು, ಪದ್ಮಿನಿಯು ಎಲೈ ಜನಕನೆ! ನಾನು ಮೋಹಿಸಿದ್ದೆನು ಇದ್ದೆನು, ಎಂದು ನಿಟ್ಟುಸುರಂ ಬಿಟ್ಟಳು. ಕಳಿಂಗನು ಆದರು ಇವಳು ಅಭಯಪೂರ್ವಕವಾಗಿ ಒಪ್ಪಿದ್ದುದೆಲ್ಲಿ ಎನಲು; ಪದ್ಮಿನಿಯು ನಾನು ಒಪ್ಪಿಕೊಂಡಿದ್ದುದ್ದು ನಿಜ; ಆದರೆ ಅವನು ಮೋಸಗಾರನೆಂದಳು. ಕಮಲಿನಿಯು ಇದನ್ನು ಸುಬಾಹುವನ್ನು ಕೇಳಿದರೆ ಗೊತ್ತಾಗುವದು. ಅವನು ಯಾರಿಗೆ ಗಂಟುಬಿದ್ದಿದ್ದನೊ ಅವಳ ವರನನ್ನು ಅವನು ಕೊಂದಿರುವನೆನಲು;–ಸುಬಾಹುವು ಹೌದು ಅವನು ಗವಿಗಳಲ್ಲಿ ಅವನನ್ನು ಕೊಂದದ್ದು ನಿಜವೆಂದನು. ಅದಕ್ಕಾಗ ರಾಮವರ್ಮನು—

ಕಂದ॥ ಅಕಟಕಟದೆತ್ತಣಪವಾ ।
ದಕೆ ಗುರಿಗೈದಿರ್ಪೆನೆನ್ನಸಖ ರವಿವರ್ಮನಂ ॥
ಈಕನ್ಯೆಮನವನಿದರಿಂ ।
ತಾಕೊಟ್ಟರೆ ಕೋಪವೆಂತಹುದಿವಳೊಳೀಗಳ್ ॥
ಅವನುವಧಿಸಿದ ದುರಾತ್ಮಂ ।
ಅವನನಿತು ಭಾಗ್ಯವ ಸೂರೆಗೈದದನೈತಂ ॥
ದ ವಿದ್ಯುತಂ ಪಾಳ್ಗೈದುಂ ।
ಜವನೆಡೆಗಿತ್ತಿರ್ಪನದರನಾವಿಕರೆಲ್ಲರುಂ ॥

ಆದರೆ ಅವನು ಸಾಯುವಾಗ್ಯೆ ಹೇಳಿದುದಂ ಕೇಳು ಎಂದು ಕಳಿಂಗನು ಹೇಳಲುಪಕ್ರಮಿಸಲು, ರಾಮವರ್ಮನು;–ಅವನ ಸ್ವಭಾವಕ್ಕೆ ತಕ್ಕದ್ದಾಗಿ ಹೇಳಿರಬಹುದು. ನೂರಾರು ಕೊಲೆಗಳನ್ನು ಮಾಡಿರುವ ಅವನ ಹೃದಯವು ಹೊಲಸಾದ ಆಲೋಚನೆಗಳಿಂದಲೇ ತುಂಬಿರುವದು. ಸಾಲಗಾರ್ರ ಬಾಧೆಯನ್ನು ಸಹಿಸಲಾರದೆ ಆ ಗವಿಗಳಲ್ಲಿ ಅಡಿತಿದ್ದ ರವಿವರ್ಮನು ಆಕಸ್ಮಿಕವಾಗಿ ಹಯಗ್ರೀವನಿಟ್ಟುಕೊಂಡಿದ್ದವಳನ್ನು ಕಂಡಮಾತ್ರಕ್ಕೆ ತನ್ನನ್ನುಕೊಲ್ಲಲು ಬಂದ ಹಯಗ್ರೀವನನ್ನು ಇವನು ನೆಲಕ್ಕೆ ಉರುಳಿಸಿದನು. ಎಂದುದಂ ಕೇಳಿ ಪದ್ಮಿನಿಯು ಭಯಮರುಕದಿಂದ ಅಯ್ಯೋ! ನನ್ನಪಾಡು ಹೀಗಾದುದೆ ರವಿವರ್ಮನೆ! ನೀನೆಲ್ಲಿರುವೆ! ನೀನೆಂದೆಂದಿಗೂ ನನ್ನ ಮನದಾಣ್ಮನು! ನಿನ್ನನೆಂತು ಮರೆವೆನು! ನನ್ನಪರಾಧವನ್ನು ಮನ್ನಿಸುವನಾಗು. ನಾನೆ ಮೋಸಗಾರಳು! ನೀನೆ ಪ್ರಾಮಾಣಿಕನು! ಎಂದು

ಮೂರ್ಛೆಯಿಂದ ನೆಲಕ್ಕೆ ಬಿದ್ದವಳನ್ನು ಸುಬಾಹುವು ಮತ್ತು ಕಮಲಿನಿಯು ಹೊರಕ್ಕೆ ಕರೆದುಕೊಂಡು ಹೋದರು.

ಕಳಿಂಗನು ರಾಮವರ್ಮನಂ ಕುರಿತು ನೋಡಿದಿರಾಸ್ವಾಮಿ! ನಿಮ್ಮ ಶೇಗೆ ಹ್ಯಾಗೆ ಪೇಯುತ್ತಾ ಇರುವದು. ಮಹರಾಯರಿಗೆ ಇದನ್ನು ಈಗಲೆ ತಿಳಿಸುವೆನೆಂದು ಸಾಮಾಜಿಕರನ್ನು ಕುರಿತು ನೀವು ಸಾಕ್ಷಿಯಾಗಿರುವದು. ಈಗಿನ ಉಲ್ಲಾಸವು ಈತನ ದುರುಳುತನದಿಂದ ಭಗ್ನವಾಗಿರುವದು. ಇದನ್ನು ಪ್ರಭುಗಳು ಶಿಕ್ಷಿಸಬೇಕಾಗಿರುವದು. ಮತ್ತೊಂದುವೇಳೆ ಈ ವಿನೋದವನ್ನು ಮಾಡೋಣ. ಈಗ್ಯೆ ಮನ್ನಿಸಿ ದಯಮಾಡಿಸಬಹುದೆಂದವರಂ ಬೀಳ್ಕೊಡುತ್ತಿರಲು ಸುರೇಂದ್ರರಾಯನು ಎಲೈ ಸಭಿಕರೆ! ನೀವೆಲ್ಲಾ ಹೋಗುವದಕ್ಕೆ ಮುಂಚೆಯೆ ನಾನು ಹೇಳುವದಂ ಕೇಳುವರಾಗಿ, ನನಿಗೆ ಸಂಕಟವಾಗುತ್ತಿರುವದು. ನನ್ನ ಹೃದಯವು ದುಃಖಭರಿತವಾಗಿರುವದು. ಎಲೈ ಸಭಿಕರ! ಇದುವರೆಗೂ ಈ ಕನ್ಯಾಮಣಿಯು ರಥಿಕಶ್ರೇಷ್ಠನಾದ ಕಾಮರೂಪನಿಗೆ ಕೊಟ್ಟಿದ್ದ ಅಭಯವು ಮತ್ತು ಆತನಲ್ಲಿ ಈಕೆಯ ವಿಶ್ವಾಸವು ನನಗೆ ತಿಳಿಯಲಿ ತಿಳಿಯದು. ಈಗ ಆತನ ಸಖನಾದೀ ರಾಜಕುಮಾರನಿಂ ಗೊತ್ತಾದುದು. ಎಲೈ ಮಾನ್ಯರೆ! ಇದು ನನಿಗೆ ಮೊದಲೆ ತಿಳದಿದ್ದರೆ ಇವಳಿಗೆ ಸಂಕಟಕರವಾಗುವಂತೆ ನಾನೆಂದಿಗೂ ಬಲಾತ್ಕರಿಸುತ್ತಿದ್ದವನಲ್ಲ. ಈಗಲೂ ಇವಳಿಗೆ ನನ್ನ ಕೈಲಾದ ಸಹಾಯವನ್ನು ಮಾಡುವೆನು. ಇದರಿಂದವಳಿಗೆ ಕ್ಷೇಮವಾಗುವದಾದರೆ. ನಿಮ್ಮೆಲ್ಲರ ಎದುರಿಗೂ ಇವಳಂ ಈ ವಿವಾಹಬಂಧದಿಂದ ಬಿಡುಗಡೆ ಮಾಡಿರುವೆನು. ಇವಳಬಳಿಗೆ ಎಂದಿಗೂ ಹೋಗುವದಿಲ್ಲವೆಂದವನಂ ಕುರಿತು:—ರಾಮವರ್ಮನು ಎಲೈ ಕುಲೀನರಾದ ಉದಾರಿ ಸುರೇಂದ್ರರಾಯರೆ ನಿಮಗೆ ನಾನು ತಪ್ಪಿತಸ್ಥನಾಗಿದ್ದರೆ ಮನ್ನಿಸಬೇಕೆಂದು ವಂದನೆ ಮಾಡಲು ಸುರೇಂದ್ರನು:—ನಿಮ್ಮಲ್ಲಪರಾಧವೆಂದರೇನು? ಈದಿನದ ಸಂಕಟವು ಪುರಾಕೃತದಿಂದುಂಟಾಗಿರುವದು. ಇದನ್ನು ಒಂದು ರಹಸ್ಯವಾದ ಪಾಪಮಾಡಿರುವದರಿಂದ ಅನುಭವಿಸಬೇಕಾಗಿರುವದು. ಈ ಕರ್ಮನಿವಾರಣಾರ್ಥವಾಗಿ ಒಂದು ಕಷ್ಟಕರವಾದ ಯಾತ್ರೆಯಂ ಮಾಡಿ ನನ್ನ ಘೋರಪಾಪವನ್ನು ಘೋರ ಶ್ರಮದಿಂದ ನಿವಾರಣೆಯಂಗೈವೆನು. ಎಂದುದಂ ಕೇಳಿ ರಾಮವರ್ಮನ ಮನಸ್ಸೊಡಂಬಡದೆ ಪುನಃ ಸುರೇಂದ್ರನ ಕೈಗಳಂ ಹಿಡಿದುಕೊಂಡು:— ಎಲೈ ರಾಜೋತ್ತಮನೆ ನಾನು ನಿನ್ನನ್ನು ಆಕ್ಷೇಪಿಸಲು ಬಂದಿರುವೆನೆಂದು ತಿಳಿದುಕೊಳ್ಳಬೇಡವೆಂದು ಬೇಡುತ್ತಿರಲು, ಸುರೇಂದ್ರನು ಹಾಗೆಂದಿಗೂ ತಿಳದಿಲ್ಲ. ನನ್ನ ಪಾಪವು ಈಗಿನ ವಿವಾಹಕ್ಕೆ ಸಂಬಂಧಪಟ್ಟದ್ದಲ್ಲ. ಪದ್ಮಿನಿಯ ತಂದೆಯು ಇವಳ ಅನುಮಾಶಿಸುವಳೆಂದು

ಹೇಳಿದ್ದರಿಂದ ಇವಳ ಕ್ಷೇಮಾರ್ಥವಾಗಿಯು, ಇವಳಲ್ಲಿದ್ದ ನನ್ನ ಅನುರಾಗದಿಂದಲು, ಇವಳನ್ನು ಮಾಡಿಕೊಂಡೆನು. ಇದರಲ್ಲಿ ನನ್ನ ಆತ್ಮವಂ ಸಂಕಟಪಡಿಸತಕ್ಕದ್ದೇನಿರುವದು? ಇವಳಿಗೆ ಮುಂದೆ ಕ್ಷೇಮವಾಗಲೆಂದು ನನ್ನ ಯಾತ್ರೆಯಲ್ಲು ದೇವರನ್ನು ಪ್ರಾರ್ಥಿಸುವೆನೆಂದು ಹೊರಟುಹೋದನು.

ಅಲ್ಲಿ ಒಬ್ಬನೇ ನಿಂತಿದ್ದ ರಾಮವರ್ಮನು ಈತನು ಸ್ತ್ರೀಸತ್ಕಾರಿಯಾದ ಉದಾರ ವೃದ್ಧನು. ನಾನು ಇವನಿಗೆ ಬಹಳ ಸಂಕಟವನ್ನುಂಟುಮಾಡಿರುವೆನು. ದೈವವು ಇವನಿಗೆ ಕ್ಷೇಮವನ್ನುಂಟುಮಾಡಲಿ. ಇವನ ಹೃದಯದ ಔದಾರ್ಯದ ಔನ್ನತ್ಯವನ್ನರಿಯದೆ ನಾನು ಇವನ ಮಂದಬುದ್ಧಿಯನ್ನು ಆಕ್ಷೇಪಿಸುತ್ತಿದ್ದೆ. ಇದುವರೆಗೆ ಇವನಿಗೆ ಆಲೋಚನಾಶಕ್ತಿ ಇಲ್ಲವೆಂದು ತಿಳಿದುಕೊಂಡಿದ್ದೆನು. ಆದರೆ ಔದಾರ್ಯದಿಂದುಂಟಾದ ಕಷ್ಟವನ್ನು ಘನವಾದ ಉದ್ದೇಶವನ್ನು ನೋಡಿದರೆ ಮೂಗರು ಸುದಾ ಮಾತನಾಡುವಂತಾಗುವದೆಂದಾಲೋಚಿಸುತ್ತಿದ್ದರು.

ಸುಬಾಹುವು ಅವನಿದ್ದೆಡೆಗೆ ಪುನಃ ಬಂದು ಇಂದು ಬಹಳ ಆಶ್ಚರ್ಯಕರವಾದ ದಿವಸವು. ವೃದ್ಧನಾದ ಸುರೇಂದ್ರನು ನಾರುಮಡಿಗಳನ್ನುಟ್ಟುಕೊಂಡು ಕಾಶೀಯಾತ್ರೆಗೆ ಪುರವಂ ಬಿಟ್ಟು ಹೊರಡಲು ಸಿದ್ಧವಾಗುತ್ತಿರುವನು. ಈಗ್ಯೆ ಸರಿಯಾಗಿ ಮೂರು ವರ್ಷಗಳಿಗೆ ಮುಂಚೆ ಅವನ ಮೊದಲಿನ ಹೆಂಡತಿ ಪ್ರಾಣಬಿಡುತ್ತಿರುವಾಗ್ಯೆ ಈ ರೀತಿ ಪಾದಚಾರಿಯಾಗಿ ಪೋಷಕರು ಯಾರೂ ಸಂಗಡವಿಲ್ಲದೆ ಯಾತ್ರೆಯಂ ಮಾಡುತ್ತೇನೆಂದು ಅವಳಿಗಭಯವಂ ಕೊಟ್ಟು ತಪ್ಪಿಹೋದ್ದರಿಂದ ಇಂದಿನ ಕಷ್ಟಕ್ಕೆ ಗುರಿಯಾಗಿರುವೆನೆಂದು ಹೇಳುವನು. ಇದರ ನಿವಾರಣಾರ್ಥವಾಗಿ ಈ ದಿವಸ ಹನ್ನೆರಡು ಘಂಟೆ ಹೊಡಿಯುವದಕ್ಕೆ ಮುಂಚೆಯೆ ಪಾದಚಾರಿಯಾಗಿ ಕಾಶೀಮಾರ್ಗವಾಗಿ ತೆರಳುವನು.

ಎಂದುದಂ ಕೇಳಿ ರಾಮವರ್ಮನು;—ಇವನ ಉದ್ದೇಶದಲ್ಲೇನೋ ಶೌರ್ಯವಿರುವದು. ಆದರಿದನ್ನು ನೆರವೇರಿಸಲು ಇವನಿಗೆ ತ್ರಾಣ ಸಾಲದು. ಮೂರು ದಿವಸದ ಪ್ರಯಾಣದೊಳಗೆ ದಾರಿಬಹಪಾಲಾಗುವನು. ಆದುದರಿಂದ ತಿಳಿಯದಂತೆ ಇವನನ್ನು ಯಾರಾದರು ಹಿಂಬಾಲಿಸಿ ನೋಡಿಕೊಳ್ಳಬೇಕು. ಈ ಕೆಲಸವನ್ನು ನೀನು ಮಾಡುವದಕ್ಕಾಗುವದಿಲ್ಲವೆ? ಎನಲು; ಸುಬಾಹುವು;—ಆ ಕೆಲಸವನ್ನು ನಾನು ಮಾಡುವೆನು. ಅದು ಬಹಳ ದಿವಸ ಸಹ ಅವಶ್ಯಕವಿರುವದಿಲ್ಲ. ಇವನ ದೇಹಧರ್ಮ ನನಿಗೆ ಗೊತ್ತಾಗಿರುವದು. ಇವನು ಪಾದಚಾರಿಯಾಗಿ ಪ್ರಯಾಣಮಾಡುವ ಶ್ರಮವನ್ನು ಒಂದುವಾರವಾದರೂ ಸಹಿಸತಕ್ಕದ್ದಸಾಧ್ಯ

ವಾಗಿರುವದು. ವಾರಗಳಾಗಲಿ, ತಿಂಗಳುಗಳಾಗಲಿ ಈ ಕೆಲಸವನ್ನು ನಾನು ಮಾಡುವೆನು. ನಾನಿಲ್ಲದೆ ಇರುವಾಗ ಮಾತ್ರ ನನ್ನ ಪುತ್ರಿಯನ್ನು ನೀವು ನೋಡಿಕೊಳ್ಳುವರಾಗಿ. ರಾಯನಿಂದೇನಾದರು ಆಕೆಗೆ ಅಪಾಯ ಸಂಭವಿಸದಂತೆ ನಿಮ್ಮ ಮಗಳೋಪಾದಿಯಲ್ಲಿ ಕಾಪಾಡಬೇಕೆನಲು; ರಾಮವರ್ಮನು:-ಹೌದು ರಾಯನನ್ನು ಎಚ್ಚರವಾಗಿ ನೋಡಿಕೊಳ್ಳಬೇಕು. ರಾಯನ ವೃದ್ಧತ್ವವನ್ನು ಆದರ ಫಲಿತಾಂಶವನ್ನು ನಾನು ಚೆನ್ನಾಗಿ ಬಲ್ಲೆ. ಸಾಕಿದ ವ್ಯಾಘ್ರವು ವಿಶ್ವಾಸದಿಂದ ಕೈಯನ್ನು ರಕ್ತ ಬರುವವರೆಗೂ ನೆಕ್ಕಿ ರಕ್ತ ಬಂದ ಒಡನೆ ತನ್ನ ಸ್ವಭಾವವನ್ನು ತೋರಿಸುವಂತೆ ರಾಯನು ಮೃದುನುಡಿಗಳಿಂದ ಕೈರವೆಯ ಮನವಂ ನೆಕ್ಕುತ್ತಲಿರುವನು. ಆದರೆ ನನ್ನ ಶರೀರದೊಳು ರಕ್ತವಿರುವವರೆಗು ಅವಳಿಂದ ರಕ್ತವನ್ನು ಬರಲೀಸುವದಿಲ್ಲವೆಂದುಕೊಂಡು ಹೊರಟುಹೋದರು.

॥ ಚತುರ್ಥಾಶ್ವಾಸಃ ॥

ಒಂದುದಿನ ರಾಯನ ಆಸ್ಥಾನದಲ್ಲಿ, ಸಭಿಕರು ಬರಲು ಸಾವಕಾಶವಾಗಿ, ಈರ್ಷ್ಯೆ ಇದ್ದು ಬೇಜಾರುಪಡುತ್ತಿದ್ದ ಕಳಿಂಗನು, ದಂಡಾಧಿಕಾರಿಯಂ ಕುರಿತು:-ಎಲೈ! ನರೋತ್ತಮನೆ, ಈಗ ಫಲಾಯನಂಗೈದಿರುವ ವೈದ್ಯನ ಕುಮಾರಿಯಲ್ಲಿರತಕ್ಕ ಮೋಹವು ರಾಯನಿಗೆ ಹುಚ್ಚು ಹಿಡಿಸಿರುವದು. ಇದು ನಿನ್ನಲ್ಲೆ ಇರತಕ್ಕ ಮಾತು. ರಾಯನಿಗೆ ಈ ಹುಚ್ಚು ಬಹುದಿವಸದಿಂದ ಹಿಡದಿರುವದು. ಅವಳಂ ಕಂಡು ಆರುಮಾಸಗಳಾಗಿರಬಹುದು. ನನ್ನ ಕುಮಾರಿಯ ವಿವಾಹಮಹೋತ್ಸವದ ದಿವಸ, ಅವಳ ಜನಕಸುಬಾಹುವು ಸುರೇಂದ್ರನೊಂದಿಗೆ ಕಾಶಿಪಟ್ಟಣಕ್ಕೆ ತೆರಳಿದ ಲಾಗಾಯಿತು, ಅವಳ ನೆಲೆಯು ಇಲ್ಲ. ಉತ್ಕಲರಾಯ ರಾಮವರ್ಮನು ರಾಜಕೋಶಾಪಹಾರಿ ಎಂದು ರಾಯನು ಅವನಂ ವಧಿಸಬೇಕೆಂದಿರುವದರಲ್ಲಿ, ಗೂಢಾರ್ಥಬೇರೆ ಇರುವದು. ಆ ತಪ್ಪಿತವನ್ನು ಬೇರೆ ಅವನು ಮಾಡಿರುವದಿಲ್ಲ. ಆದರೆ ಅವನು ಈ ನಾರಿಯನ್ನು ತನ್ನ ವಶವಾಗದಂತೆ ಮಾಡಿ ತಾನು ಎತ್ತಿಹಾಕಿಕೊಂಡು ಹೋದನೆಂಬ ಹೊಟ್ಟೆಕಿಚ್ಚಿನಿಂದ, ಮತ್ತೊಂದು ನೆವದಮೇಲೆ ಅವನನ್ನು ಶಿಕ್ಷಿಸಬೇಕೆಂದಿರುವನು. ರಾಮವರ್ಮನು, ತನ್ನ ಗುಣಕ್ಕು, ವಿವೇಕಕ್ಕು ತಕ್ಕ ಕೆಲಸಗಳನ್ನು ಬಿಟ್ಟು ಈ ವೈದ್ಯನ ಮಗಳನ್ನುಹಿಡಿಸಿಕೊಂಡು ಹೋಗಿ ಬಿತಿಲುವನೆನಲು; ದಂಡಾಧಿಕಾರಿಯು:-

ಹಾಗಾದರೆ ಒಬ್ಬ ವೈದ್ಯನ ಮಗಳಿಗೋಸ್ಕರ ರಾಯನು ಇಷ್ಟು ಗಡಬಿಡಿಯನ್ನು ಮಾಡುವದನ್ನು ನೋಡಿದರೆ, ಅವನು ಶುದ್ಧಹುಚ್ಚನೆಂಬದಾಗಿ ಹೇಳಬೇಕಾಗಿದೆ. ರಾಯನಿಗೆ ಇಂಥಾ ವೈದ್ಯರ ಹುಡುಗಿಯರಿಗೇನುಕಡಿಮೆಯು. ಅವನು ಅಪೇಕ್ಷಿಸಿದರೆ ನೂರಾರು ರಾಜಕುಮಾರಿಯರಾದರು ಸಿಕ್ಕುವರು. ಪ್ರಭುವಿನಲ್ಲಿ ಹುಚ್ಚನ್ನು ಸುದಾ ಮರ್ಯಾದೆಮಾಡಬೇಕು. ಆದುದರಿಂದ ನನ್ನ ಕೈಲಾದಮಟ್ಟಿಗೂ ಈ ಹೆಂಣಿನ ಜಾಡನ್ನು ಗೊತ್ತುಮಾಡಿ, ಉತ್ಕಲನಂ ಕೈಸೆರೆ ಹಿಡಿಯುವೆನೆನಲು; ಕಳಿಂಗನು:—ಉತ್ಕಲನಿಲ್ಲದಿದ್ದಾಗ್ಯೂ ರಾಜಕಾರ್ಯಕ್ಕೇನು ಚ್ಯುತಿಯೂಗುವದಿಲ್ಲ. ರಾಯನ ಮಂತ್ರಾಲೋಚನೆಯಲ್ಲಿ, ರಾಯನು ಅವನ ಮಾತುಗಳಲ್ಲಿ ವಿಶೇಷವಾದ ಮರ್ಯಾದೆಯನ್ನಿಡುತ್ತಿದ್ದನು. ರಾಜತಂತ್ರದಲ್ಲಿ ಅವನು ತನ್ನ ವಿದ್ಯಾಡಂಬರವನ್ನು ತೋರಿಸುತ್ತಿದ್ದನು. ನನ್ನ ಆಲೋಚನೆಯು ರಾಯನವು ಎಂದಿಗೂ ಬಿಡಬಿಟ್ಟಿರಲಿಲ್ಲ. ರಾಮವರ್ಮನು ಈ ನಾರಿಯನ್ನು ಬಿಡಿಸಿಕೊಂಡು ಹೋಗಿದ್ದಾಗ್ಯೂ ಅವನು ತನ್ನ ಪೂರ್ವಸಂಬಂಧವನ್ನು ಬಿಟ್ಟಿರುವಂತೆ ಕಾಣುವದಿಲ್ಲವಾದ್ದರಿಂದ, ಕಮಲಿನಿಯು ಇರತಕ್ಕ ಸ್ಥಳಗಳನ್ನು ಕಾದರೆ ಅವನು ಸಿಕ್ಕುವಂತೆ ಕಾಣುತ್ತೆ. ಹುಂಜನನ್ನು ಹುಡುಕಬೇಕಾದರೆ ಹ್ಯಾಟೆಗಳನ್ನು ಹುಡುಕಬೇಕೆನಲು ದಂಡಾಧಿಕಾರಿಯು:—

ನಿಮ್ಮ ಆಲೋಚನೆಯು ಸರಿಯಾದದ್ದು. ಅದರಂತೆಯೆ ನಡೆಸುತ್ತೇನೆ. ಕಮಲಿನಿಯು ಈಗೆಲ್ಲಿರುವಳೆನಲು;—ಕಳಿಂಗನು:—ಲಗ್ನದಾರಭ್ಯ ದುತಿಯುಂತಿರುವ ನನ್ನ ಮಗಳೊಡನೆ ಅವಳಿರುವಳು. ಕಾಮರೂಪದೇಶದ ಮಾಲವಿಕೋಟೆಯಲ್ಲಿವರಿರುವರು. ಈ ಕೋಟೆಯು, ಮೊದಲು ಭ್ರಷ್ಟನಾಗಿ ಓಡಿಹೋದ, ರವಿವರ್ಮನದಾಗಿತ್ತು. ಈಗದು ಅವನು ಕೊಡತಕ್ಕ ಸಾಲಕ್ಕಾಗಿ ಸುರೇಂದ್ರರಾಯನಿಗೆ ಸೇರಿರುವದು. ಆ ಕೋಟೆಯಲ್ಲಿ ಕಮಲಿನಿ ಇರುವಳು. ಅದರ ಸಮೀಪದಲ್ಲೆಲ್ಲೋ ರಾಮವರ್ಮನಿರುವನೆನಲದಕ್ಕವನು:—ಅವನನ್ನ ಅಲ್ಲಿ ಹುಡುಕಿಸುವೆನು. ರಾಯರ ಸಮಯವನ್ನು ತಾವು ತಿಳಿದು ಹೇಳಿದರೆ ರಾಮವರ್ಮನನ್ನು ಹಿಡಿಯಲು ವಾರೆಂಟುಗಳಿಗವರ ಒಪ್ಪಿಗೆಯಂತೆಗದುಕೊಳ್ಳುವೆನೆಂದವರೀರ್ವರು ರಾಯನಂ ನಿರೀಕ್ಷಿಸಿಕೊಂಡಿದ್ದರು.

ಇತ್ತಲಾ ಮಾಲವಿಕೋಟೆಯ ಒಂದು ಬತೇರಿಯಮೇಲೆ ಕೂತಿದ್ದ ಕಮಲಿನೀಯು:—ಈ ಕೋಟೆಯಲ್ಲಿ ಯಾವದೊಂದು ವಿಷಯವು ಎಂದಿಗು ನಡೆಯುವಂತೆ ಕಾಣುವದಿಲ್ಲ. ಆ ದಾರಿಯು ಸಾಲುಮರಗಳ ಕಡೆ ಒಂದೆರಡು ಗಂಟೆಗಳಿಂದ, ಯಾರಾದರು

ಬ್ಬ ದುಷ್ಯಂತನು ಹರಿಣವನ್ನೋಡಿಸುತ್ತಿರುವನೆ ಎಂದು ನೋಡಿದಾಗ್ಯು ಪ್ರಯೋಜನವೇ ಇಲ್ಲದೆ ಹೋಯಿತು. ಎರಡು ಮೊಲಗಳು ಮಾತ್ರ ತಮ್ಮ ಕೆಲಸದಮೇಲೆ ನಿಧಾನವಾಗಿ ದಾರಿಯಂ ದಾಟದವು. ಮತ್ತೊಂದು ಆಳಲು ಮಾಡುವದಕ್ಕೇನುತೋರದೆ ಒಂದು ಮರದಿಂದ ನೆಗೆದು ಮತ್ತೊಂದು ಮರದ ಕೊಂಬೆಯನ್ನು ತಬ್ಬಿಕೊಂಡಿತು. ನಮ್ಮ ಕಸ್ತೂರಿಕಡೆ ನೋಡಿದರೋ; ಬಾಗಲಬಳಿ ತನ್ನ ಪುನರ್ಬಾಲ್ಯವನ್ನು ನಿದ್ರೆಯಿಂದ ಕಳೆಯುತ್ತಿರುವದು. ಅದು ತನ್ನ ಬಾಲ್ಯದಲ್ಲಿ ಎಂದೋ ಒಂದುದಿನ ಹೊಸಬನೊಬ್ಬನನ್ನು ಕಂಡು ಬೊಗಳಿದ್ದನ್ನು ಸ್ವಪ್ನದಲ್ಲಿ ಕಂಡು ಎಂದಿಗಾದರು ಒಂದುಸಲ ಗುರ್ರೆನ್ನುವದು. ನನ್ನ ಜೊತೆಯಲ್ಲಾದರೋ ಈ ಹಳಬನಾದ ಗುರಕಾರನೊಬ್ಬನಿರುವನು. ಅವನಿಗೆ ಇಲ್ಲಿಯ ಹವ ಈಗ ಚನ್ನಾಗಿದೆ ಎಂದು ಹೇಳುವದೊಂದುಮಾತ್ರ ಬರುವದು. ಅವನು ಹೇಳುವದನ್ನು ನೋಡಿದರೆ, ಅವನ ಹೊರತು ಚಾಕರವಾನರಾದ ಹತ್ತು ಜನಮಾತ್ರ ಇಲ್ಲಿರುವದಕ್ಕೆ ಕಾರಣಗೊತ್ತಾಗುವದು. ಇವರೆಲ್ಲರ ವಯಸ್ಸನ್ನು ಒಟ್ಟುಮಾಡಿದರೆ ಒಂಭೈನೂರಮೂವತ್ತಾರು ವರುಷಗಳಾಗುವವು ಎನ್ನುತ್ತಿರುವದಂ ಕೇಳಿ ಪದ್ಮಿನಿಯು;—

ನಿನಗೋಸ್ಕರ ಈ ಕೋಟೆಯು ಇನ್ನು ಹೆಚ್ಚಾಗಿ ಮನೋರಂಜಕವಾಗಿರಲೆಂದು ಹಾರೈಸುವೆನು. ಆದರೆ ಇದು ಹ್ಯಾಗೆತಾನೆ ಆದೀತು. ಇದರ ಈಗಿನ ಒಡೆಯನು ಯಾತ್ರಾರ್ಥಿಯಾಗಿ ಕಷ್ಟಪಡುತ್ತಾ ದೂರದಲ್ಲಿರುವನು. ಪೂರ್ವದ ಒಡೆಯನು ಎಲ್ಲಿರುವನೊ ಗೊತ್ತೇ ಇಲ್ಲ. ಎಲೈ! ಕಮಲಿನಿಯೆ ನಾನು ಅವನ ವಿಷಯವಾಗಿ ಆಲೋಚಿಸುವಾಗ ನನ್ನ ಬುದ್ಧಿಯು ತುಂಬಾ ದುಷ್ಟತನವನ್ನು ಮಾಡುವದೆ ಹೇಳೆನಲು. ಕಮಲಿನಿಯು ಅದು ನನಗೆ ಹ್ಯಾಗೆ ಗೊತ್ತಾಗತಕ್ಕದ್ದು. ಅದರ ದುಷ್ಟತನ ಎಷ್ಟರಮಟ್ಟಿಗಿದೆಯೊ ನನಗೆ ಹ್ಯಾಗೆ ತಾನೆ ಗೊತ್ತಾಗತಕ್ಕದ್ದು. ಎಂದುದಕೆ ಪದ್ಮಿನಿಯು; ಅನುಮಾನವು ಭಯವು ತುಂಬಿರುವದರಿಂದ ನನ್ನ ಮನಸ್ಸು ಲೇಶವಾದರು ವಿರಾಮವಿಲ್ಲದೆ ಇರುವದು. ಅವನ ವಿಷಯವಾಗಿ ಇನ್ನು ಕೊಂಚ ಹೆಚ್ಚಾಗಿ ತಿಳಿದಿದ್ದರೆ ನಾನು ಇಷ್ಟು ಆಲೋಚನೆ ಮಾಡುತ್ತಿರಲಿಲ್ಲವೆಂದವಳಂ ಕುರಿತು; ಹಾಗಾದರೆ ನಿನಗೆ ಕೊಂಚಮಟ್ಟಿಗಾದರು ಗೊತ್ತಾಗಿರುವದು. ಅವನ್ನು ಹೇಳೆಂದ ಕಮಲಿನಿಯಂ ಕುರಿತು; ನಾನು ಹೇಳಬೇಕಲ್ಲವೆ. ಆಗಲಿ ಹೇಳುವೆನು ಕೇಳು. ಪೂರ್ವದಲ್ಲಿ ದೇವಾಲಯವಾಗಿದ್ದು ಈಗ ವಸಂತಮಂಟಪವಾಗಿ, ಅಗೋ ಅದರ ಒಂದು ಮೂಲೆ ಸಹ ಹೊಳೆಯು ಆಚೆ ದಡದಲ್ಲಿ ಕಾಣಿಸುವದು ನೋಡು. ಆ ಮಂಟಪದಲ್ಲಿ ರವಿವರ್ಮನ ಬಾಲ್ಯವನ್ನು ತೋರಿಸುವ, ಅವನಾ

ಕಾರದ ಒಂದು ವಿಗ್ರಹವನ್ನು ನಿಲ್ಲಿಸಿರುವರು. ಅದರ ಎದುರಿಗೇನೆ ಜಯಂತನ ಪ್ರತಿಮೆ ಇರುವದು. ಇವೆರಡರಲ್ಲಿ ರವಿವರ್ಮನದೆ ಸುಂದರವಾಗಿರುವದು. ನಾನು ಇಲ್ಲಿಗೆಬಂದ ದಿನದ ಮುಸ್ಸಂಜೆಯಲ್ಲಿ ಅದನ್ನು ನೋಡುತ್ತಿದ್ದೆನು. ಅದರ ಕೈಗೆ ಒಂದು ರೇಷ್ಮೆಯ ಎಳೆಯು ತೊಡರಿಕೊಂಡಿತ್ತು. ಆ ಎಳೆಗೆ ಈ ಕಾಗದವನ್ನು ಕಟ್ಟುತ್ತೆಂದು ಒಂದು ಕಾಗದವನ್ನು ಕಮಲಿನಿಯು ವಶಕ್ಕೆ ಕೊಟ್ಟಳು. ಅವಳು ಅದನ್ನೋದಲುಪಕ್ರಮಿಸಿ:—

ಪುಷ್ಪಡಿಯುನ್ನಿಟ್ಟಾಡಿದ ।
ತಿಟ್ಟಂಕೆಟ್ಟೋಗ ನೀನು ಮೆಟ್ಟಲ್ಬೇಡೆಂ ।
ದಟ್ಟುವರುಕಣಾ ಕೆಟ್ಟುಂ ।
ನೆಟ್ಟನೆ ನಾನಿಲ್ಲಿಗೈದುವೆನೆನುತ ನಿಟ್ಟಿಸಿ ॥

ತ್ರಾಣಮಣುಮಾತ್ರವಿಲ್ಲದ ।
ಶೋಣಿತದೊಳ್ಧೈರ್ಯ ಪೋಗತೋರಿರೆ ತಲೆಯಂ
ತ್ರಾಣದಶೋಣಿತವಿರ್ದವ ।
ಕಾಣದೆಮೆಯೊಳವನಕಾಯು ದಿರ್ದಪನೆಂತೈ ॥

ಶೋಣಿತವಿರ್ದುಂ ಫಲವೇಂ
ಪ್ರಾಣಿಗಳು ತ್ರಾಣವಿಲ್ಲದೆ ಬಳಲ್ವುದನ.ಂ ।
ಪ್ರಾಣದೊಳು ನೋಡುತಿರ್ದುಂ ।
ಶೋಣಿತದ ತ್ರಾಣವಂ ನರನು ತೋರದಿರಲ್ ॥

ಎಂದು ಓದಿದ ಕಮಲಿನಿಯಂ ಕುರಿತು ಪದ್ಮಿನಿಯು; ರವಿವರ್ಮನು ಚಂದ್ರನಗರವನ್ನು ಬಿಟ್ಟು ಕಾಲದ ಸುಮಾರಿನಲ್ಲಿ, ಇಲ್ಲಿಯ ಪಂಣ್ಯದ ಹಂಡಿಯಲ್ಲಿ ಒಬ್ಬ ಯೌವನಸ್ಥನು ಲಾವಣ್ಯವಾದ ಆಕಾರವು, ಮನೋಹರವಾದ ಮರ್ಯಾದೆಯು ಸ್ವಭಾವಯುಕ್ತನಾಗಿಯು ಹರುಷೋಲ್ಲಾಸವಿಲ್ಲದೆ ಮಂಕಿನಿಂದ, ಏಕಾಂತನಿಷ್ಟನಾಗಿ, ರವಿವರ್ಮನನ್ನು ಹೋಲುವನೊಬ್ಬನು ಇದ್ದು, ನಾನು ಇಲ್ಲಿಗೆ ಬಂದ ದಿವಸವೆ ಎಲ್ಲಿಗೊ ಹೋದನೆಂಬದಾಗಿ ಈ ಹುಂಡಿ ಜನಗಳಿಂದ ಕೇಳಿರುವೆನು. ಆದರೆ ಅವನು ಯಾವ ಕಡೆಗೆ ಹೋದನೊ ಯಾರಿಗೂ ಗೊತ್ತಿಲ್ಲವೆನಲು; ಕಮಲಿನಿಯು ಇದು ಸುದ್ದಾ ಹೀಗಾಯಿತೆ. ಹೊತ್ತು ಕಳೆಯಲು [illegible]ನು

ಮೊದಲು ಮಾಡುತ್ತಿದ್ದ ಆಲೋಚನೆಯನ್ನಾದರು ಮಾಡುವೆನು. ಯಾರಾದರು ಬಬ್ಬ ದುಷ್ಯಂತನು ಇಲ್ಲಿಗೆ ಬರಬಾರದೆ ಎಂದು ಹಾರೈಸುತ್ತಿರುವದಂ ಕಂಡು ಪದ್ಮಿನಿಯು:— ನೀನು ಒಂದಾವರ್ತಿ ಸೂರ್ಯಕಿರಣಗಳು ಪುಷ್ಪಗಳು ನನಿಗಿದ್ದರೆ ಸಾಕೆಂದು ಹೇಳುತ್ತಿದೆ ಯಲ್ಲ, ಎಂದುದಕವಳು—ಹೌದು ಸೂರ್ಯಕಿರಣಗಳು ತಣ್ಣಗು ಪುಷ್ಪಗಳು ಸುಖವಾಗಿಯು ಇದ್ದರೆ ಅವೇ ಸಾಕಾಗಿರುವವು. ಆದರೆ ಅಲ್ಲಿರುವ ಸೂರ್ಯಕಾಂತಿ ಪುಷ್ಪವನ್ನು ನೋಡು, ಅದು ಹ್ಯಾಗೆ ತಲೆಬಾಗಿಕೊಂಡಿರುವದು. ನಿನ್ನೆ ಗಾಳಿಯಿಂದ ಮುರಿಯಲ್ಪಟ್ಟ ಚಂಪಕ ವನ್ನು ನೋಡಿ ದುಃಖಪಡುತ್ತಾ ಇರುವೆದು ಆದರೆ ಅಗೋ ಅಲ್ಲಿ ನೋಡು. ಯಾರೊ ಬಬ್ಬ ದುಷ್ಯಂತನು ಬರುವಂತೆ ಕಾಣುವದು. ಅಗೊ ಆ ಸುರಗಿಮರದ ಮರೆಯಲ್ಲಿರುವ ನು ಗಾಳಿಗೆ ಆ ಮರದ ಕೊನೆಗಳು ಓರೆಯಾದರೆ ಅವನು ನಿನಗೆ ಕಾಣುವನು. ಅವನು ಬಹು ಸುಂದರನಾಗಿರುವಂತೆ ಕಾಣುವನು. ದಾರಿತಪ್ಪಿ ತಬ್ಬಿಬ್ಬಾಗಿ ನೋಡುತ್ತಿರುವನು. ಯಾರನ್ನಾದರು ಅವನ ಬಳಿಗೆ ಕಳುಹಿಸೆನಲು; ಪದ್ಮಿನಿಯು:—ನೀನು ಹೇಳುವವನು ನನಿ ಗೆ ಕಾಣಿಸುವದಿಲ್ಲವಲ್ಲ ಎನಲವಳು; ನೀನೇನು ಕುರಡಿಯೆ, ನಾನು ಬೆರಳು ತೋರಿಸುವ ಕಡೆ ನೋಡೆಂದು ತೋರಿಸಿದ್ದನ್ನು ನೋಡಿ ಪದ್ಮಿನಿಯು ನಗುತ್ತಾ; ಅಯ್ಯೊ! ಅವನೇನೆ ನಿನ್ನ ದುಷ್ಯಂತನು ಅದು ನಾನು ಇಡಿಸಿದ ರಕ್ಷೆಯು. ಮೆಣಸಿನಕಾಯಿಗಳನ್ನು ಗಿಣಿ ಗಳು ತಿನ್ನುಹಾಕುತ್ತಿದ್ದ ಕಾರಣ ಮಡಿಕೆಗೆ ಬಣ್ಣವನ್ನು ಬಳಿಸಿ ಅಲ್ಲಿಡಿಸಿರುವೆನೆನಲು ಕಮಲಿನಿಯು ಅದಂ ಕೇಳಿ: ನೀನು ಸಹ ಇಷ್ಟು ನಿರ್ದಯಳೆ. ಎಲ್ಲರು ನನ್ನನ್ನು ಮೋಸ ಮಾಡುವರೆಂದುದಕವಳು:—ಈಗ ನಿನ್ನನ್ನು ನೀನೆ ಮೋಸಮಾಡಿಕೊಂಡೆ. ಮತ್ತೊಬ್ಬ ನಿಂದ ನೀನು ಎಂದು ಮೋಸಹೋದವಳಂತೆ ಕಾಣುವದಿಲ್ಲ. ಅಲ್ಲದ್ದನ್ನು ಕಂಡದ್ದಕ್ಕಾಗಿ ನಾನು ನಿನ್ನನ್ನು ಆಕ್ಷೇಪಿಸುವದಿಲ್ಲ. ನಿಜವಾದ್ದನ್ನು ನೀನು ನಂಬಿದರೆ ಸಾಕಾಗಿರುವದು. ನಾವು ಯಾವಾಗ ವಿಶೇಷ ಅಪ್ರಮಾಣಿಕರಾಗಿರುತ್ತೇವೊ ಆವಾಗಲೆ ನಾವು ತುಂಬ ಮೋಸ ಹೋಗುವೆವು ರಾಮವರ್ಮನಲ್ಲಿ ನೀನು ನಂಬಿಕೆಯನ್ನಿಟ್ಟರೆ ಈಗ ನೀನು ಶಾಂತಳಾಗಿ, ಮುಂದೆ ಅದರ ಪ್ರತಿಫಲವನ್ನು ಕಾಣುವೆ. ಅಪನಂಬಿಕೆಯಿಂದುಂಟಾಗತಕ್ಕ ಅನರ್ಥ ಗಳು ನನಿಗೆ ಅನುಭವದಿಂದ ಚೆನ್ನಾಗಿ ಗೊತ್ತಾಗಿರುವದು. ಇನ್ನು ಮುಂದಕ್ಕೆ ನಾನು ಮನಃಪ್ರೇರಣೆಯಂ ಬಿಟ್ಟು, ಲೋಕವಾರ್ತೆಗಳಲ್ಲು; ಲೌಕಿಕವಿದ್ಯಮಾನಗಳಲ್ಲು ಮನ ಸ್ಸಿಡತಕ್ಕವಳಲ್ಲ. ಎಂದುದಂ ಕೇಳಿ ಕಮಲಿನಿಯು; ನಾನು ಎಂದಿಗು ಹಾಗೆ ಮಾಡಿದವ ಳಲ್ಲ. ಲೌಕಿಕವಿದ್ಯಮಾನವು ರಾಮವರ್ಮನು, ಶಾಂತನು, ಆಲೋಚನಪರನು, ಘನತೆ

ವಂತನೆಂದು, ತೋರ್ಪಡಿಸುತ್ತಿದ್ದಾಗ್ಯ್ಯೂ, ನನ್ನ ಮನಃಪ್ರೇರಣೆಯು ಅವನಲ್ಲೇನೊ ದುಷ್ಟತನವಿದೆ ಎಂದು ಹೇಳುತ್ತಿತ್ತು. ನನ್ನ ಮನವು ನನ್ನಂ ಕುರಿತು:—

ತಿಳಿಯಲ್ಕಾಗದು ಮುನ್ನಮೆ ।
ಬೆಳಗಾಗಲ್ಕಾಂತಿಯಿಂ ಪೊಳೆವದಿನಮಣಿಯಾಂ ।
ಪಳಿಯದೆ ದಿನಮೆಲ್ಲಕರಂ ।
ಪೊಳೆದು ಮೆರೆವನೆಂದು ಜಗದೊಳು ಮದಗಜಗಮನೆ.

ಅದಕ್ಕನುಗುಣವಾಗಿ, ಅವನು ಕ್ಷೈರವೆದಿಯಂ ಒಡಿಸಿಕೊಂಡ ಹೋದನಂತರ ನನ್ನ ಮನಸ್ಸು ದೃಢವಾಯಿತು.

ಎನ್ನುವಷ್ಟರಲ್ಲಿ ಪುಟ್ಟೌವ್ವೆ ಎಂಬ ದಾದಿಯು ಬಂದು ಪದ್ಮಿನಿಯಂ ಕುರಿತು:— ಎಲ್ಯೆ ಒಡತಿಯೆ; ಯಜಮಾನರಿಗೆ ಪ್ರೇಮಪಾತ್ರವಾದ ಶಿಕಾರಿಯ ಗಿಡಗ ಪಾಲಕನು ಸಮುಯವನ್ನು ಕಾದಿರುವನು. ಅವನ ಗಿಡಗವು ಮೂರು ದಿವಸದಿಂದಲು ಏನು ತಿನ್ನದೆ ಇದೆಯಂತೆ. ಪ್ರಾಣವನ್ನೆಲ್ಲಾದರು ಬಿಟ್ಟೀತೆಂದು ಭಯಪಡುತ್ತಿರುವನು. ಅದನ್ನು ಯಜಮಾನರು ಸಹಸ್ರ ವರಹಗಳಿಗೆ ತೆಗದುಕೊಂಡಿರುವರಂತೆ; ಎಂಬವಳಂ ಕುರಿತು ಪದ್ಮಿನಿಯು; ಇದು ಸುದ ಹೀಗಿರುವದೆ; ಅಯ್ಯೋ ಪಡಬಾಯಿತೆ ! ಅದು ತನ್ನ ಒಡೆಯನಲ್ಲಿ ಪ್ರಾಣವನ್ನೆಲ್ಲಾ ಇಟ್ಟುಕೊಂಡಿತ್ತು. ಅವರು ಹೊರಟುಹೋದ ಲಾಗಾಯಿತು ತಲೆಯನ್ನೆತ್ತಿ ನೋಡಿಲ್ಲ. ಅದಕ್ಕಿಂತಲು ಉತ್ತಮರಂತೆ ; ಅದು ಸುದ ಎದೆಗೆಟ್ಟು ಪ್ರಾಣವನ್ನು ಬಿಡುತ್ತಾ ಇರುವಂತೆ ಕಾಣುವದು. ಎನ್ನುವಳಂ ಕುರಿತು ಪುಟ್ಟೌವ್ವೆಯು:—

ಅದನ್ನು ಪೆಂಡ್ಯದ ಹುಂಡಿಯಲ್ಲಿರುವ ಮಾಂತ್ರವಾದಿಯ ಬಳಿಗೆ ತೆಗದುಕೊಂಡು ಹೋದರೇನಾದರು ಸ್ವಸ್ಥವಾಗಬಹುದೆಂದು ಹೇಳುವದಂ ಕೇಳಿ ಕಮಲಿನಿಯು:— ಮಾಂತ್ರವಾದಿ ಅಂದರೇನು ! ಅವನೆಲ್ಲಿರುವನೆಂದುದಕವಳು:—ಇದು ನಿಮಗೆ ತಿಳಿಯದೆ! ಅವನ ವರ್ತಮಾನ ನಿಮ್ಮವರಿಗು ಬಂದಿಲ್ಲವೆ ! ಯಾರಬಾಯಲ್ಲು ಅವನೆ ಇರುವನಲ್ಲ ! ಎಲ್ಲರಿಗು ಆಶ್ಚರ್ಯವನ್ನುಂಟುಮಾಡುತ್ತಾ ಇರುವನಲ್ಲ ! ಎಂದುದಂಕೇಳಿ ಕಮಲಿನಿಯು:— ನೀನು ಇದುವರಿಗು ನನ್ನ ಸಂಗಡ ಯಾತಕ್ಕೆ ಹೇಳಲಿಲ್ಲ. ಈ ಕೋಟೆಯಲ್ಲೇನು ಆಶ್ಚರ್ಯ ನಡೆಯದೆ ಲೋಕವೆಲ್ಲ ಸಗಣಿಮಯವಾಗಿರುವದೆಂದು ತಿಳದಿದ್ದೆ. ಮಾಂತ್ರವಾದಿಯು

ಇಲ್ಲಿಗೆ ಹ್ಯಾಗೆ ಬಂದನೆನಲು; ಹೇಳುವೆನು ಕೇಳವ್ವ ತಾಯೆ; ನನ್ನ ಮುಂಗೈಯಿನ ಗಂಟು ಕರಗಿ ಹೋದ ರಾತ್ರಿ, ಅಂದರೆ ನಂಜಾವ್ವೆ ಮೂಗಿನ ಹುಳಕ್ಕೆ ಕೊಂಬು ಬಂಧ ದಿವಸದ ಮಾರಣೆಗೆನೆ; ತಿಮ್ಮಕ್ಕನು ಕಾಯಿಲೆ ಕಳದು ನಿದ್ದೆಮಾಡಿದ ದಿವಸವೆ, ಬಲವಾದ ರಕ್ಕೆಗಳ ಶಬ್ದವನ್ನು ಕೇಳಿ ತನ್ನ ಗಂಡ ರಾಣೋಜಿಯಂ ಕರೆದು ಅಲ್ಲಿ ದೆವ್ವಗಳಿರುವಂತೆ ಕಾಣುವದು; ಅಲ್ಲದಿದ್ದರೆ ಕೋಳಿಕಳ್ಳನ್ಯಾರೊ ಬಂದಿರುವಂತೆ ಕಾಣುತ್ತೆನ್ನುವಷ್ಟರಲ್ಲಿ; ಬಾಗಲನ್ನು ತಳ್ಳಿದಂತೆ ಶಬ್ದ ಕೇಳಿಸಿತಂತೆ; ಅದನ್ನು ಕೇಳಿ ಪುನಃ ಬಾಗಲನ್ನು ತಳ್ಳಿದರೆ, ನಿನ್ನ ತುಪಾಕಿಯನ್ನು ಕಿಟಕಿಯಲ್ಲಿಟ್ಟು, ಹೊರಗ್ಯಾರಿರುವಿರೆಂದು ಕೇಳೆಂದು ಹೇಳಿದಳಂತೆ. ಪುನಃ ಬಾಗಲನ್ನು ತಳ್ಳಿದ್ದಲ್ಲದೆ: ಮತ್ತೊಂದುವೇಳೆ ತಳ್ಳಿದಂತಾಯಿತಂತೆ. ಅದನ್ನು ಕಂಡು ರಾಣೋಜಿಯು ಹೊರಗೆ ಬಗ್ಗಿ ನೋಡಿದನಂತೆ. ಒಬ್ಬ ಎತ್ತರವಾದ ಆಳು ನಿಲುವಂಗಿಯಂ ಹಾಕಿಕೊಂಡು ಕುದುರೆಯಮೇಲೆ ಕೂತಿದ್ದನಂತೆ. ಅವನು ಇರುವದಕ್ಕೆ ಸ್ಥಳವನ್ನು ಕೊಡಿ ಎಂದು ಕೇಳಿದನಂತೆ. ರಾಣೋಜಿಯು ಅವನನ್ನು ಒಳಕ್ಕೆ ಕರೆದುಕೊಂಡನಂತೆ. ಅಂದಿನಾರಭ್ಯ ಅವನಲ್ಲಿರುವನು, ಎಂದವಳಂ ಕುರಿತು:—ಕಮಲಿನಿಯು; ಆದರೆ ಅವನು ಮಂತ್ರವಾದಿ ಎಂದು ಹ್ಯಾಗೆ ಗೊತ್ತಾಯಿತೆನಲವಳು:—ನನ್ನಾಣೆ ಅವನು ಮಂತ್ರವಾದಿಯೆ ಸರಿ; ಮಂತ್ರವಾದಿಯಲ್ಲದಿದ್ದರೆ, ಮತ್ಯಾರುತಾನೆ ಅವನಂತೆ ಆಕಾಶಮಾರ್ಗವಾಗಿ ಹಾರಿ ಬರುವರು. ಇದು ಮಂತ್ರವಲ್ಲವೆ! ಅವನಂತ ಬಿನ್ನಾಣದ ಆಳನ್ನು ನಾನೆಲ್ಲು ನೋಡೇ ಇಲ್ಲ. ಅವನು ಕುರಿತದ್ದನ್ನು ಹೇಳುವನು. ಬೆಳದಿಂಗಳಲ್ಲಿ ಹೊರಗೆ ಸಂಚಾರಹೊರಡುವನು. ಮೂಲಿಕೆಗಳನ್ನು ಕೂಡಿಹಾಕುವನು. ಇದೆಲ್ಲ ಮಂತ್ರವಲ್ಲವೆ! ಎಂತಾ ರೋಗವನ್ನಾದಾಗ್ಯು ವಾಸಿಮಾಡುವನು. ರೋಗಿಗಳು ಬಂದು ಗಾವುದದಿಂದ ಬರುವರು. ಇದೆಲ್ಲ ಮಂತ್ರವಲ್ಲವೆ ಎನಲು:—ಹಾಗಾದರೆ ನಾನು ಕಾಯಿಲೆಯಾಗಿರುವೆನು ಎಲ್ಯೆ ಪದ್ಮಿನಿಯೆ ನನಿಗೆ ಆಲಸ್ಯತೋರುವದು ಅವನನ್ನು ಜಾಗ್ರತೆ ಕರಿಸೆನುವ ಕಮಲಿನಿಯಂ ಕುರಿತು ಪದ್ಮಿನಿಯು:—ನಿನಿಗೇನು ಆಲಸ್ಯ ತೋರುವದು. ಒಬ್ಬಳೆ ಇರತಕ್ಕ ಆಲಸ್ಯವೊ! ಅಲ್ಲದೆ ನನ್ನೊಂದಿಗಿರಲಾರದ ಆಲಸ್ಯವೊ ಹೇಳು! ನಿನ್ನ ಆಲಸ್ಯದ ಕಾರಣವನ್ನು ನಾನು ಬಲ್ಲೆನು ಅವನನ್ನು ನೋಡಬೇಕೆಂಬ ಆಶೆಯೆ ನಿನ್ನನ್ನು ಆಲಸ್ಯಪಡಿಸುತ್ತಿರುವದು. ಪುಟ್ಟವ್ವೆ ನೀನು ಹೋಗಿ ಯಾರನ್ನಾದರು ಕಳುಹಿಸಿ ಅವನನ್ನು ಕರಿಸೆನಲು:—ಕಮಲಿನಿಯು ನಾನು ತುಂಬಾ ಕಾಯಿಲೆಯಾಗಿರುವೆನು. ಉಳಿಯುತ್ತೇನೊ ಇಲ್ಲವೊ ತಿಳಿಯದು. ಯಾರನ್ನಾದರು ಓಡಿಸಿ; ಮಂತ್ರವಾದಿಯು ಕೈಲೆಷ್ಟು ಜಾಗ್ರತೆ ಬರುವದಕ್ಕಾಗುವದೊ

ಅಷ್ಟು ಜಾಗ್ರತೆ ಬರುವಂತೆ ಹೇಳಿಕಳುಹಿಸುವದೆನುವದಂ ಕೇಳಿ; ಪುಟ್ಟವ್ವೆಯು:—ಎಲೈ ತಾಯೆ ಕೊಂಚ ಸುಧಾರಿಸಿಕೊ ಅವನು ಮನುಷ್ಯರ ರೀತಿಯಲ್ಲಿ ಬರುವಂತೆಯೆ ಹೇಳಿ ಕಳುಹಿಸು. ಅವನು ರೆಕ್ಕೆಗಳನ್ನು ಬಡಿಯುತ್ತಾ ಗಾಳಿಯನ್ನು ತೂರಿಬಂದರೆ ನೀನು ಹೆದರಿಕೊಳ್ಳುವೆ ಎಂದವಳಂ ಕುರಿತು ಹಾಗೆ ಆಗಲಿ, ಅವನು ಮನುಷ್ಯರಂತೆಯೆ ಬರಲಿ; ಅವನು ಬರುವ ವರೆಗು ಏನಾದರು ಮಾಡಿ ಪ್ರಾಣವನ್ನಿಟ್ಟುಕೊಂಡಿರುವೆನು. ನೀನು ತುಂಬಾ ಸಾವಕಾಶಮಾಡುತ್ತಿ ಎನ್ನುವದಂ ಕೇಳಿ; ಪದ್ಮಿನಿಯು:—ನಸುನಗುತ್ತಾ, ನಾನೆ ಹೋಗಿ ರಾಣೋಜಿಯಂ ಕಳುಹಿಸಿ ಅವನನ್ನು ಕರಿಸುವೆನೆಂದು ತೆರಳಿದ ನಂತರ, ಕಮಲಿನಿಯು:—ಪುಟ್ಟವ್ವೆಯಂ ಸಮೀಪಕ್ಕೆ ಕರೆದು, ನಿನ್ನೆ ದಿವಸ ಜಯರಾಮನು ನಿನ್ನ ಸಂಗಡ, ಮುನಿಸಿಕೊಂಡು ಹೋದವನನ್ನು, ನೀನು ಪುನಃ ಮಾತನಾಡಿಸಲಿಲ್ಲವೆ ಎಂದುದಕವಳು:—ಅವನೆಲ್ಲಾದರು ಹೋಗಲಿ. ನನಗಿನ್ನವನಸಂಗಡ ಮಾತೆಂದರೇನು, ಅವನನ್ನು ನಾನಿನ್ನು ಒಡಂಬಡಿಸುವದಿಲ್ಲವೆಂದುದಂ ಕೇಳಿ;—ಅವನೆ ಹಿಂದಿರುಗಿ ಅಳುತ್ತಾ ಬಂದು, ನಿನ್ನನ್ನು ಬೇಡಿಕೊಂಡರು, ಅವನಪರಾಧವನ್ನು ಮನ್ನಿಸಿ, ಪೂರ್ವದ ವಿಶ್ವಾಸವಿಡುವದಿಲ್ಲವೆ ಎನಲು—ಎಂದಿಗು ಇಲ್ಲ. ಒಂದು ಸಲ ಹೋದವನನ್ನು, ಎಂದೆಂದಿಗು ಹೋದನೆಂದು ಭಾವಿಸುವೆನು. ಅವನು ಮೊರೆ ಇಟ್ಟು ಫಲವೇನು. ಎನ್ನುವಳಂ ಕುರಿತು ಕಮಲಿನಿಯು ಅವನು ನಿಜವಾಗಿಯು ಅನುತಾಪಪಟ್ಟುಕೊಂಡು, ಕ್ಷಮಿಸಬೇಕೆಂದು ನಿನ್ನನ್ನು ಬೇಡಿಕೊಂಡರು; ನೀನು ಕ್ಷಮಿಸದೆ ಇದ್ದರೆ ಅದು ಬಹಳ ಅಸಂಗತವೆಂದ.ದಕವಳು:—ಅವನನ್ನು ಕ್ಷಮಿಸುವೆನು, ಆವರದಕ್ಕೆ ಮುಂಚೆ ಅವನನ್ನು ಕೊಲ್ಲುವೆನೆನಲು:—ಶಾಬಾಸು ! ಶಾಬಾಸು ! ಪುಟ್ಟಾವ್ವೆ ! ಇದೀಗ ನ್ಯಾಯವನ್ನು ಕರುಣದಿಂದ ಮೃದುಪಡಿಸುವದು. ಕರುಣವನ್ನು ತೋರಿಸುವದಕ್ಕೆ ಮುಂಚೆಯೆ, ಅವನ ಕೊರಳಿಗೆ ನ್ಯಾಯದ ಹಗ್ಗವನ್ನು ಬೀರುವೆ.

ಸಾಕು; ಸಾಕು; ನೀನಿನ್ನು ಮೊಗ್ಗಿನಂತೆ ಹಸುರಾಗಿಯು, ಘಟ್ಟಿಯಾಗಿಯು, ಇರುವೆ. ನಾನು ಸಹ ಚಿಕ್ಕವಳಾಗಿದ್ದಾಗ ನಿನ್ನಂತೆಯೆ ಇದ್ದೆನು. ನಾನೂ ಸಹ ನಿನ್ನಂತೆಯೆ ಆಲೋಚನೆ ಮಾಡುತ್ತಿದ್ದೆನು. ನಿನ್ನ ಪಾದಗಳನ್ನಪ್ಪಿಕೊಂಡು ; ದಾರಿಯಲ್ಲೆಲ್ಲಾ ಅರ್ಥಿಸುತ್ತಾ; ನಿನ್ನ ಕಾಲಿನ ಧೂಳನ್ನು ಹೊಡಿಯದೆ ಇದ್ದರೆ, ನೀನ್ಯಾವ ಗಂಡಿಸೊಂದಿಗು ಮಾತನಾಡಬೇಡ ಕಮಲಿನಿಯೆ ಎಂದು ಅಂದುಕೊಳ್ಳುತ್ತಿದ್ದೆ. ಆದರೆ ಭೂಮಿಯಿಂದ ಗಿಡಗಳು ಹ್ಯಾಗೆ ಹುಟ್ಟುವವೊ, ಸ್ವಭಾವವ್ಯತ್ಯಾಸವು ಕಾಲದಲ್ಲಿ ಹುಟ್ಟು

ವದು. ಒಂದೆರಡು ವರುಷದಲ್ಲೇ ನಮ್ಮ ಸ್ವಭಾವವೆಲ್ಲ ವ್ಯತ್ಯಾಸವಾಗುವದು. ವಿಪತ್ತೆಂಬುವದು ನಮ್ಮನ್ನು ಮೆತ್ತಗೆ ಮಾಡುವದು. ಆದರೆ ಈಗ ನನ್ನ ಮುಖವು ಬಾಯಿಲೆಯುವಳ ಮುಖದಂತಿರುವದೆ ಹೇಳೆನಲವಳು:–ಕೊಂಚ ಬೆಳ್ಳಗಿರುವಂತೆ ಕಾಣುತ್ತಾದೆಯೆ ಹೊರ್ತು; ಬಾಯಿಲೆ ಇರುವಂತೆ ಕಾಣುವದಿಲ್ಲವೆನಲು;–ಅದು ಹಾಗಿರುವದು ಸರಿಯಲ್ಲ ಮಂತ್ರವಾದಿಯು ಇನ್ನೇನು ಬರಬಹುದು. ಅವನು ನನ್ನ ಮಾತನ್ನು ಹ್ಯಾಗೆ ನಂಬುವನು. ಕಿಟಕಿಗಳನ್ನು ಮುಚ್ಚಿ ಕೊಂಚ ಕತ್ತಲೆಮಾಡು. ಮುಸುಕುಹಾಕಿಕೊಳುವದಕ್ಕೆ ನನ್ನ ಶಾಲನ್ನು ತೆಗದುಕೊಂಡು ಬಾರೆಂದು ಪುಟ್ಟವ್ವೆಯಂ ಕಳುಹಿಸಿ ಅವಳಂ ನಿರೀಕ್ಷಿಸುತ್ತಾ ಮನಸ್ಸಿನಲ್ಲಿ;–ಪೂರ್ವದಂತೆ ಆಕಾರದಲ್ಲಿಮಾತ್ರ ನಾನೀಗಿರುವೆನು. ಪೂರ್ವದಂತೆ ಬಲವಂತರಿಂದ ನಟಿಸುತ್ತಿರುವೆನು. ರಾಮವರ್ಮನೆ ! ಎಲೈ ರಾಮವರ್ಮನೆ ! ನನಿಗಿಂತಲು ಮೃದುವಾದ ಸ್ತ್ರೀಯರಂ ಮೀರಿಸಿ ಕಣ್ಣೀರನ್ನು ನಿನಗಾಗಿ ಸುರಿಸುವೆನಲ್ಲ ನೀನು ಎಷ್ಟು ಜಾಣನಾದಾಗ್ಯು, ಅವುಗಳ ಮೂಲವನ್ನು, ಆಳವನ್ನು ಕಾಣಲಿಲ್ಲವಲ್ಲ. ಅಯ್ಯೋ ! ನಾನು ನಿನ್ನನ್ನು ತುಂಬಾ ಸಂಕಟಪಡಿಸಿರುವೆನು ! ಸಿಡಕಿನಿಂದಲು, ಗರ್ವದಿಂದಲು ಅನೇಕವೇಳೆ ನೋಯಿಸಿರುವೆನು. ಮೋಹದ ಹುಡಗಾಟಕ್ಕೆ ನಿನ್ನನ್ನು ಚೆಂಡಿನಂತೆ ಭಾವಿಸಿದೆನಲ್ಲ. ಹಟದಲ್ಲು, ತುಂಟತನದಲ್ಲು, ಆತುರದಲ್ಲು, ಬಾಲಕಳಂತೆ ಇದ್ದರು; ಮೋಹದಲ್ಲಿ ಯೌವನಸ್ತೆಯಾಗಿರುವೆನಲ್ಲ. ಸ್ತ್ರೀಮೋಹದಂತಿರುವದೆ, ಪುರುಷಮೋಹವು. ಎಂದು ಹಂಬಲಿಸುತ್ತಿರುವಷ್ಟರಲ್ಲಿ, ಪುಟ್ಟವ್ವೆಯು ಶಾಲನ್ನು ತಂದುಕೊಟ್ಟು, ಮಂತ್ರವಾದಿಯು ಬಂದಿರುವಳೆಂದಳು.

ಆಹಾ ! ಅವನಾಗಲೆ ಬಂದನೆ ! ಆ ಕಿಟಕಿಯನ್ನು ಸಹಾ ಮುಚ್ಚಿ ಅವನನ್ನು ಒಳಕ್ಕೆ ಕರೆದುಕೊಂಡುಬಾರೆಂದವಳಂ ಕಳುಹಿಸಿ ಪುನಃ ತನ್ನ ಮನಸ್ಸಿನಲ್ಲಿ ;–ಇವನು ಭವಿಷ್ಯತ್ಕಾಲವನ್ನುಹೇಳುವದು ನಿಜವಾದರೆ, ಈಗಿನ ಅನುಮಾನವನ್ನು ಪರಿಹರಿಸುವನು. ರಾಮವರ್ಮನೆಲ್ಲಿರುವನು; ಮುಂದೆ ಅವನ ಮತ್ತು ನನ್ನ ಅದೃಷ್ಟವೆಂತಿರುವದು ಗೊತ್ತಾಗುವದು ಈಗ ನಾನಿರತಕ್ಕ ಸ್ತಿತಿಯಲ್ಲದೃಷ್ಟಪರೀಕ್ಷೆ ಮಾಡುವದರಲ್ಲಿ, ನಂಬಿಕೆಯುಂಟಾಗುವದರಲ್ಲೇನಾಶ್ಚರ್ಯ. ಆದರು ಅವನ ಮುಖವನ್ನು ನೋಡಿ, ಪ್ರಶ್ನೆ ಕೇಳಲು, ನನಿಗೆ ನಾಚಿಕೆಯಾಗುವದು. ಆದುದರಿಂದ ನನ್ನ ಮುಖವನ್ನು ಮರೆಮಾಡಿಕೊಂಡು, ಬಾಯಿಲೆಯುವಳಂತೆ ನಟಿಸುವೆನೆನುತ, ಮುಸುಕು ಹಾಕಿಕೊಂಡು ಮಂಚದಮೇಲೆ ದವಡಿಸಿದಳು.

ಮಂತ್ರವಾದಿಯು ಬಟ್ಟನೆ ಬಳಿಕ್ಕೆ ಬಂದು,—ಅವಳಂನೋಡಿ, ಮಲಗಿರುವಳೆಂದು, ಶಬ್ದವಾಗದಂತೆ ಮೆಲ್ಲನೆ;—

ನಿದ್ರಾಂಗನೆನಿನ್ನಡಿಯಂ
ಮುದ್ದಿಡುತಿರ್ಪೆವಳನುಘೋರೆ ನಿನ್ನನುವಿರಾರ್ದುಂ
ಮದ್ದಿರ್ಪುದೆಜನದಮನಕೆ ।
ನಿದ್ರೆಯೆನೀನಿಲ್ಲದೆಡೆಯು ಜಗದೊಳಗಿಲ್ಲಾ ।

ಎನ್ನುತ್ತಿರಲು, ಮುಸುಕಿನಲ್ಲಿದ್ದ ಕಮಲಿನಿಯು ತನ್ನ ಮನಸ್ಸಿನಲ್ಲಿ :—

ಇವನೀಗಳೊಂದುಘನಮಂ
ಶ್ರಮಂಬಟಸುವೆನದರ ದೆಸೆಯಿಂದೆನ್ನಮನದೊಳ್
ತವೆತಲೆದೋರ್ದಾನಂದಂ
ಕವಿಯುತ್ತಿಹುದಿವನ ಮಂತ್ರಬಲಮೆಂತಿಹುದೊ

ಎಂದುಕೊಂಡು ಅವನಂ ಕುರಿತು;—ಎಲೈ ಮಹಾತ್ಮರೆ! ನೀವು ನಿಮ್ಮ ಮಂತ್ರತ್ರಾಣದಿಂದ, ರೋಗಗಳ ಮೂಲವನ್ನು ಕಂಡುಹಿಡಿಯುವದಾದರೆ; ನನ್ನ ಜಾಡ್ಯವು, ಮನದಲ್ಲಿರುವದೊ, ಶರೀರದಲ್ಲಿರುವದೊ ಹೇಳಿ ? ನನಿಗೆ ಇವೆರಡು ಸ್ವಸ್ಥತಪ್ಪಿದಂತೆ ಕಾಣುವದು, ಎಂದವಳಂ ಧ್ವನಿಯಿಂದ ತಿಳಿದುಕೊಂಡು ಅವನು;—ನೀನ್ಯಾರು ಕಮಲಿನಿಯಲ್ಲವೆ ? ಎಂದುದಂ ಕೇಳಿ;—ನನ್ನನ್ನು ಕೂಗಿದವರ್ಯಾರು; ನನಗೆ ಈಗ ಹುಚ್ಚುಹಿಡಿದಂತಿರುವದು. ಈಗ ಆದ ಧ್ವನಿಯು ಯಾರದೆಂದು ಎದ್ದು ಕೂತುಕೊಂಡಳು.

ಅವನು;—ಎಲೈ ! ನೀನು ಈ ಧ್ವನಿಯನ್ನು ಮರತುಬಿಟ್ಟೆಯ ! ಈ ಧ್ವನಿಯು ನಿನಗೆ ಸಂತೋಷವನ್ನುಂಟುಮಾಡುತ್ತಿದ್ದದ್ದಲ್ಲವೆ? ಅದರಿಂದ ಈಗ ನಿನಿಗೆ ಹರುಷವುಂಟಾಗದಿದ್ದಾಗ್ಯೂ;ಅದು ನಿನಿಗೆ ಸುಖವಾಗಲೆಂದು ಹಾರೈಸುವದೆಂದವನಂತಿಳಿದುಕೊಂಡು ಹೋಹೊ! ಗೊತ್ತಾಯಿತು ಎಂದು ಎದ್ದು ಮುಸಕಂಬಿಸಾಡಿ ನಿಂತುಕೊಂಡವಳಂಕುರಿತು;—

ಎಲೈ ಮನೋಹರಳೆ ! ನನ್ನನ್ನು ಕ್ಷಮಿಸುವಳಾಗು. ನಾವು ವಿನೋದವಾಗಿ ಕ್ಷಣಮಾತ್ರದಂತೆ ಕಳೆದ ಅನೇಕ ದಿವಸಗಳ ಸ್ಮರಣೆಯಿಂದ; ನಿನ್ನನ್ನು ನಾನು ಹಿಂಬಾಲಿಸಿದ್ದನ್ನು ಮನ್ನಿಸು. ನನ್ನಿಂದ ನಿನಗೇನಾದರೂ ಈಗ ಸಹಾಯವಾದರೆ;ನಾನಿಲ್ಲಿಗೆ ಬಂದದ್ದು ಸಾರ್ಥಕವಾಗುವದು. ಈಗ ನಿನಿಗೇನು ವ್ಯಾಧಿಯು ಪೀಡಿಸುತ್ತಿರುವದು ಹೇಳೆನಲು;—

ಅವಳು;—ನನಿಗೆ ವ್ಯಾಧಿ ಅಂದರೇನು ? ತಲೆನೋವು ಇದ್ದರು ಇರಬಹುದು.

ನೀನು ವಾಸಿಮಾಡತಕ್ಕದ್ದೇನು ಇರುವದಿಲ್ಲ. ನೀನು ನನ್ನನ್ನು ಆದರಿಸುವೆಯಲ್ಲವೆ ? ಅದಕ್ಕಾಗಿ ವಂದಿಸುವೆನು. ಆದರೆ ನಿನ್ನ ಆದರಣೆ ಅವಶ್ಯಕವಿರುವದಿಲ್ಲ. ದೈವಸಂಕಲ್ಪವಿದ್ದರೆ ಇದರಿಂದ ಪ್ರಾಣವನ್ನಾದರು ಬಿಡುವೆನು. ಈಗ ನನಿಗೇನು ಅಂತ ಕಷ್ಟವಿಲ್ಲ. ಮನಸ್ಸನ್ನು ಉಲ್ಲಾಸಪಡಿಸತಕ್ಕ ಒಂದು ಹಾಸ್ಯೋಕ್ತಿಯು; ನನ್ನ ಜಾಡ್ಯಗಳಿಗೆಲ್ಲ ಔಷಧಿಯಾಗಿರುವದೆನಲದಕ್ಕವನು; ಖಿನ್ನನಾಗಿ;—

ಕಾತರಿಪೆನ್ನಮನವನೀಂ
ಶಾಂತಿಪ್ರೊಡೀತರದಘೋರಖಂಡಿತಮಲ್ತಾ
ಆತುರದಮಾತಿನವಳೊಳ್
ಕೌತುಕಮಿಲ್ಲೀಪರಿಯಬಿರುನುಡಿಗಳೀಗಳ್

ಎಂದುದಂ ಕಮಲಿನಿಯು ಕೇಳಿ :—ನನ್ನ ವಿಷಯವನ್ನೇನೊ ಅರಿತವನಂತೆ, ಹೇಳಿದೆಯಲ್ಲ, ಅದೇನು ಹೇಳು ? ನಂತರ ನಿನ್ನ ವಿಷಯವು ನನಿಗೆ ತಿಳಿದಿರುವದನ್ನು ಹೇಳುವೆನು. ಮೊದಲು ನಿನ್ನನ್ನು ಕಂಡರೆ ನಾನು ವಿಶ್ವಾಸವಾಗಿದ್ದೆನು. ಅದರಲ್ಲಿ ಸಂದೇಹವೇನಾದರೂ ಉಂಟೆ ? ಯಾವದೊಂದು ಕಾರಣವು ಇಲ್ಲದೆ, ನನ್ನ ಮನಸ್ಸು ಬದಲಾಯಿಸಿದಂತೆ ಕಂಡಿದ್ದರೆ; ಈತನ ನಡವಳಿಕೆಗಳನ್ನು ನೋಡಿದರೆ ಅದಕ್ಕೆ ಕಾರಣವನ್ನು ತೋರಿಸುವದು. ಅಷ್ಟುಮಾತ್ರವೆ ಅಲ್ಲ. ಅದಕ್ಕೆ ಕಾರಣವು ಆಗ್ಯೆ ಇದ್ದರು ಇರಬಹುದು. ಆದ್ದರಿಂದ ನನ್ನ ಪೂರ್ವ ಕಥೆಯನ್ನು, ಹ್ಯಾಗೆತಾನೆ ಓದಿದರು ನನ್ನಲ್ಲಿ ಕಾಣಮನಸ್ಸು ಕಾಣುವದೆ ? ಎಂದವಳಂ ಕುರಿತವನು:—ಓದುತ್ತಾ ಓದುವದು ಎಷ್ಟು ಹಿತವೊ, ನಿನ್ನ ಪೂರ್ವ ಕಥೆಯನ್ನು ಓದುವದು ಅಷ್ಟು ಹಿತವಾಗಿರುವದು. ಇದರಲ್ಲೇನು ಹೊಸದಾದ ಸಂಗತಿಗಳಿರುವದಿಲ್ಲ. ಮೋಹಾರ್ಕನು ತನ್ನ ಉದಯಕಾಂತಿಯಿಂ ಪ್ರಕಾಶಿಸಿ, ಮನ ಗಗನವನ್ನಡರಿ, ಮಾರ್ಪೊಳಿವನು. ಅಲ್ಲವನು ತನ್ನ ನಿಜತೇಜದಿಂ ಮನ ಜಗವಂ ಬೆಳಗಿ, ಗಗನದಿಂದಿಳಿದಸ್ತಾಚಲವನಡರುವನು. ಎಲೈ ರಮಣಿಯೆ ! ನನ್ನ ಮೋಹಾರ್ಕನು, ಉದಯಪರ್ವತದಲ್ಲಿರುವವರೆಗೂ ಹಿತದಿಂ, ಉಲ್ಲಾಸದಿಂ, ಸ್ವೇಚ್ಛೆಯಿಂ ನಿನ್ಮನವ ಬೆಳಗಿದುದು ಅದು ತ್ವರಿತದಿಂ, ನನ್ನ ಮನ ಗಗನವನ್ನಡರಿ, ಸುಡಲಾರಂಭಿಸಿತು. ಮೋಹವನ್ನು ಬೊಂಬೆಯಂತೆ ಆಡಿಸಲು ನನಗಸಾಧ್ಯವು. ಅದನ್ನು ನಿನ್ನೊಂದಿಗೆ ಚೆಂಡಾಡಲು ನನಿಗಸಾಧ್ಯವು. ಅದರ ಜ್ವಾಲೆಯನ್ನು, ನನ್ನ ಕೈವಸ್ತ್ರದಿಂದ ತನುವು, ಉಷ್ಣವು ಆಗುವಂತೆ ಬೀಸಿ, ಅದನ್ನು ಹೊರಕ್ಕೆ ತೋರ್ಪಡಿಸದೆ ಅದನ್ನು ಕಾಣಬೇಕೆಂ

ಬ ಕುತೂಹಲವನ್ನು ಹುಟ್ಟಿಸಿ, ನಿನ್ನಲ್ಲಿ ಮೋಹಕಳೆಯನ್ನುಂಟುಮಾಡುವದು ನನ್ನಿಂದಾಗದು. ನಿರ್ವಂಚನೆಯಿಂದಾಗದ ಕೆಲಸವು, ಇಂಥಾ ವಿದ್ಯೆಗಳಿಂದಾಗುವದೆಂದು ನನಿಗೆ ತಿಳಿಯುವದು. ಆದರೆ ಇಂಥಾ ವಿದ್ಯೆಗಳು, ಉತ್ತಮವಾದವುಗಳೆ ಆಗಲಿ, ಅಲ್ಪವಾದವುಗಳೆ ಆಗಲಿ, ನನ್ನಲ್ಲಿರುವದಿಲ್ಲವೆಂದುದಂ ಕೇಳಿ ಕಮಲಿನಿಯು:—

ಹಾಗಾದರೆ ನಾನು ವಿದ್ಯೆಗಳನ್ನು ಮಾಡಿರುವೆನೆ? ನನಿಗೆ ಬಂದುವಿದ್ಯೆ ಚೆನ್ನಾಗಿ ಬರುವದು. ಅದರಿಂದ ಮನುಷ್ಯರ ನಟನೆಯಂಬಿಟ್ಟು, ಅವರ ಆಚರಣೆಯಿಂದ, ಅವರಿಂತಾವರೆಂದು ತಿಳದುಕ್ಕೊಳ್ಳಬಲ್ಲೆನು. ನಾನು ಯಾರಿಗೆ ತಪ್ಪಿತಸ್ತಳಾಗಿರುವೆನೋ; ಆತನು ತನ್ನ ತಪ್ಪಿತಗಳನ್ನು ಒಪ್ಪಿಕೊಂಡರೆ; ನನ್ನಲ್ಲಿರತಕ್ಕ ಕೆಲವು ತಪ್ಪುಗಳನ್ನು, ನಾನು ಒಪ್ಪುವವರಲ್ಲಿ ಹಿಂಜರಿಯತಕ್ಕವಳಲ್ಲ ಒಪ್ಪಿತದಲ್ಲಾ ನ್ಯಾಯವಿರಬೇಕು. ಆದರೆ ನಿನ್ನ ತಪ್ಪಿತಗಳು ಅದ್ಭುತಗಳಾದವುಗಳಾದ್ದರಿಂದ; ಅವನ್ನು ಮೊದಲು ನೀನು ಒಪ್ಪುವನಾಗೆನಲದಕ್ಕವನು:—

ಆಗತ್ಯವಾಗಿ, ಕಪಟವಿಲ್ಲದೆ, ಮನಃಪೂರ್ವಕವಾಗಿ, ನನ್ನಪರಾಧಗಳನ್ನು ಹೇಳುವೆನು ಕೇಳು :—ನಾನು ಗರ್ವಿಷ್ಟನು, ದೃಢಸಂಕಲ್ಪಿ, ಸ್ವೇಚ್ಛಾಪರನು, ಕಠಿಣಕೋಪೋದ್ರೇಕನು, ಸಿಡುಕಿಯು, ಆಗಿರುವೆನು. ಮತ್ತು, ಖಿನ್ನನು, ಕಠಿಣನು, ಮರ್ಮಿಯು ಎಂದುದಂ ಕೇಳಿ ಕಮಲಿನಿಯು:—ಶಾಬಾಸು! ಶಾಬಾಸು! ಒಪ್ಪುವ ತಪ್ಪಿತಸ್ತರು ನಿನ್ನಂತೆಯೆ ಒಪ್ಪುವರು! ಸಾರವನ್ನು ಬಿಟ್ಟು, ಸಿಪ್ಪೆಯನ್ನುಮಾತ್ರ ತೋರುತ್ತಿರುವೆ. ಎದುರಾಳನ್ನು ಬಿಟ್ಟು, ಅವನ ನೆರಳು ಸಂಗಡ ಎಷ್ಟು ಚೆನ್ನಾಗಿ ಯುದ್ಧವನ್ನು ಮಾಡುತ್ತಿರುವೆ. ಇಷ್ಟು ಹೇಳಿದವನಾದಾಗ್ಯು, ದುರಳುತನದಿಂದ ನೀನು ಒಬ್ಬಳ ಮಾನವನ್ನು ಕೆಡಿಸಿ; ನೀನು ಸಹ ಮಾನಗೇಡಿಯಾಗಿರುವದನ್ನು ಮಾತ್ರ ಯಾತಕ್ಕೆ ಹೇಳಲಿಲ್ಲವೆನಲು.

ಅವನು:—"ನಾನು ಏನು ಹೇಳಲಿಲ್ಲವೆ ಆ ಕೆಲಸವನ್ನುನಾನು ಮಾಡಿರುವದಿಲ್ಲ"

ಕಮಲಿನಿಯು:—"ಹಾಗಾದರೆ ಕೈರವೆ ಎಲ್ಲಿರುವಳು."

ಅವನು:—"ಅವಳೆಲ್ಲಿದ್ದಾಗ್ಯು ಅವಳು ನಿರ್ಮಲಳಾಗಿರುವಳು."

ಕಮಲಿನಿಯು:—"ಆದರು ಅವಳಿರುವ ಸ್ಥಳವನ್ನು ಹೇಳು."

ಅವನು:—"ನನ್ನರಹಸ್ಯವೇನಿದ್ದರು ನಿನ್ನದಾಗಿರುವದು. ಇದು ಮಾತ್ರೊಬ್ಬರದು."

ಕಮಲಿನಿಯು:—"ಹಾಗಾದರೆ ನೀನು ಹೇಳಲು ಹಿಮ್ಮೆಟ್ಟುವೆ."

ಅವನು:—"ಕೊಂಚ ದಿವಸಗಳು ಮಾತ್ರ ಹೇಳುವದಿಲ್ಲ. ದೀವಳಿಗೆವರಿಗೆ

ನಾನು ಹೇಳಕೂಡದು. ನಂತರ ಹೇಳುವೆನು.

ಕಮಲಿನಿಯು:—"ಸಾಕು! ಸಾಕು! ನಿನ್ನ ನಿಷ್ಕಪಟವಂ ಕುರಿತು ವಂದನೆಯಂ ಮಾಡುವೆನು. ಇಂದಿನಾರಭ್ಯ ನೀನು ಯಾರನ್ನು ನಂಬಬಹುದೊ, ಅವಳಲ್ಲಿ ವಿಶ್ವಾಸ ಬೆಳೆಸಬಹುದು, ನನ್ನಲ್ಲಿ ನಿನಗೇನು ಕೆಲಸವಿರುವದಿಲ್ಲ. ಸ್ವಾಮಿ! ತಾವು ಇನ್ನು ದಯಮಾಡಿಸಬಹುದು. ತಮ್ಮನ್ನು ಇಲ್ಲಿಗೆ ಬರಮಾಡಿದ ತಪ್ಪಿತವನ್ನು ಕ್ಷಮಿಸಿ, ನಿಮ್ಮ ಕೈಲಾದಮಟ್ಟಿಗೂ ಯಾವದಾದರು ಒಂದು ದೂರಪ್ರದೇಶಕ್ಕೆ ದಯಮಾಡಬಹುದೆನಲು; ಅವನು ಖಿನ್ನನಾಗಿ:—

ನಿನಗುಂ ನೀನಿರ್ಪಲ್ಲಿಗು ।
ವನವಾಸವೇಸು ಚಂದ್ರನಗರದಶೆಯುಂ ।
ಮನೆಯಾಗಿಹುದೆನಗಿನ್ನಿ ।
ಲ್ಲಿನಿಲ್ಲೆ ನಿನ್ನಾಣೆ ನಾನಿನುತವತೆರಳಿದಂ ।

ಕಮಲಿನಿಯು, ಅವನು ಹೋದ ದಾರಿಯನ್ನೆ ನೋಡುತ್ತಾ:—ಹಾ! ಹಾ! ಶರೆಮನೆಯುಂದರೇನು! ರಾಯನು ಇವನ ಪ್ರಾಣದಮೇಲೆ ಕಣ್ಣಿಟ್ಟಿರುವನೆಂದು ಜನರು ಹೇಳುವರು! ಅಯ್ಯೋ! ವಿಧಿಯೆ! ನಾನೆಂತ ಕೆಲಸವನ್ನು ಮಾಡಿದೆ! ಎಷ್ಟು ಕಠಿಣವಾದ ಮಾತನಾಡಿದೆ! ಈ ಕೋಟೆಯಲ್ಲಿ ಮಾತ್ರ ಇವನು ನಿರ್ಬಾಧಿಕವಾಗಿರುತ್ತಿದ್ದನೇನೊ! ಅಂತವನನ್ನು ಇಲ್ಲಿಂದ ತೆಳ್ಳಿಬಿಟ್ಟೆನಲ್ಲ! ಮುಂದೇನು ಗತಿ! ಇವನು ತಾನಾಗಿ ಏನಾದರು ಕಷ್ಟಕ್ಕೆ ನುಗ್ಗುವನೇನೊ! ಅಯ್ಯೊ! ನೀನೆ ಇವನನ್ನು ಕೊಂದೆಯೆಂದು ಮನಸ್ಸು ಜರಿಯುತ್ತಿರುವದಲ್ಲ! ನಾನು ಮಾಡಿದಪರಾಧಕ್ಕೇನುಮಾಡಲಿ! ರಾಮವರ್ಮನೆ ಹಿಂತಿರಗಿ ಬಾರೈ! ನನ್ನನ್ನು ನೋಡೈ! ನನ್ನಪರಾಧವಂ ಕ್ಷಮಿಸೈ! ನಾನು ಏನು ಹೇಳಿದೆನೊ ತಿಳಿಯದು! ಹಾ ರಾಮನೆ! ಹಾ ಪ್ರಿಯನೆ! ಎಂದು;

ಲಲಿತ

ಹಾರವನಮಾಡುವಳ್ ನೆನನೆನೆದುಬೀಳುವಳ್
ಹಾರಗಳಕೀಳುವಳ್ ಹಂಬಲಿಸಿನೋಡುವಳ್
ಹರಿಗೆಕೈಜೋಡುವಳ್ ಮತ್ತೈನೀಡಿಬೇಡುವಳ್
ಹಾರಾಮ! ಹಾರಾಮ! ಹಾರಾಮ! ನೆಂಬುವಳ್.

ಹೀಗೆಂದು ಹಂಬಲಿಸುತ್ತಾ ಇರುವಾಗ, ಕೋಟೆಬಾಗಲಲ್ಲಿ, ಸುರೇಂದ್ರನ ಪುರೋ-

ಹಿತನಾದ ಸುಮತಿಯು, ರಾಣೋಜಿಯಂ ಕಂಡು; ಆರ್ಯಳಾದ ಕಮಲಿನಿ ಎಲ್ಲಿರುವಳು, ಹೇಳು ? ನನ್ನ ಕೈಯಲ್ಲಿರುವ ಕಾಗದಗಳು, ನಾವು ಇದುವರೆಗೆ ಭಯಪಡುತ್ತಿದ್ದ ವರ್ತಮಾನವನ್ನು ತಂದಿರುವವು. ನಮ್ಮ ಒಡೆಯನಾದ ಸುರೇಂದ್ರನು ಕಾಶಿಪಟ್ಟಣದಲ್ಲಿ ದೇಹವಂ ಸಾರ್ಥಕವಮಾಡಿಕೊಂಡನು. ಕಳಿಂಗನು ತನ್ನ ಮಗಳನ್ನು ಚಂದ್ರನಗರಕ್ಕೆ ಕರೆದುಕೊಂಡು ಬರುವಂತೆ, ಕಾಗದ ಬರೆದಿರುವನು. ಅವಳು ಆಸ್ಥಾನದಲ್ಲಿ ರಾಯನಿಗೆ, ಮುಜರೆಯಂಮಾಡಿ, ಸುರೇಂದ್ರನ ಆಸ್ತಿಯನ್ನೆಲ್ಲಾ ಕೈಕೊಳ್ಳಬೇಕಂತೆ. ಆದರೆ ಕಮಲಿನಿ ಎಲ್ಲಿರುವಳು ಹೇಳು ? ಪದ್ಮಿನಿಗೆ ಅವಳಿಂದ ಈ ಸಂಗತಿಯನ್ನು, ಹೇಳಿಸುವದು ಉತ್ತಮ. ಎನ್ನುವಷ್ಟರಲ್ಲಿ :—

ತಲೆಯಂ ಕೆದರಿಕೊಂಡು, ಎತ್ತಿದ ಕೈಗಳಿಂ, ಶರಗು ಜಾರಿಹೋಗಿ ಓಡಿಬರುತ್ತಿರುವ, ಪುಟಾವ್ವೆಯು, ಅವರಂ ಕಂಡು;—ಛಿ ! ಛಿ ! ನಿಮ್ಮ ಬಾಳನ್ನು ಸುಡಬೇಕು. ಅನನನ್ನು ಹಿಡದುಕೊಳ್ಳುವದಂ, ಕಂಬದಂತೆ ನಿಂತು, ಕಣ್ಣಾರ ನೋಡುವ ನಿಮ್ಮಬಾಳು ಯಾತಕ್ಕೆ, ಅವಳ ಕೂಗು, ಅವಳ ರೋದನೆಯು, ನಿಮಿಗೆ ಕೇಳುವದಿಲ್ಲವೆ. ಇದರಿಂದವಳು ಪ್ರಾಣವನ್ನು ಬಿಟ್ಟರು ಬಿಡಬಹುದು. ಆಗೊ, ಆ ಕಡೆ ಅವಳ ಆಲಾಪವನ್ನು ಆಲಿಸಿರೆಂದವಳಂ ಕುರಿತು; ಸುಮತಿಯು;—ಯಾರು ಆಲಾಪಿಸುವರು, ಹಿಡಿದದ್ದು ಅಂದರೇನು, ಸಂಗತಿಯನ್ನು, ನಿದಾನವಾಗಿ ಹೇಳೆನಲು, ಅವಳು;—ಯಾರೊ ರಾಜಪುತ್ರನನ್ನು ಹಿಡಿದು ಸಂಕೋಲೆಗಳನ್ನು ಹಾಕಿ ಕರೆದುಕೊಂಡು ಹೋದರು ಎಂದುದಕವನು ಪುನಃ ಯಾವ ರಾಜಪುತ್ರನನ್ನು ಹಿಡದರು, ನಿದಾನವಾಗಿ ಹೇಳೆನಲು ಉತ್ಕಲೇಶನಾದ ರಾಮವರ್ಮನನ್ನು ಕೋಟೆಬಾಗಿಲ ಬಂದು ಕಲ್ಲು ಎಸಿಗೆ ಒಳಗೇನೆ ಹಿಡಿದುಕೊಂಡರು, ಅದನ್ನು ನಮ್ಮ ಪಡತಿ ಕಮಲಿನಿಯು ಕಣ್ಣಾರಕಂಡಳು ಎಂದುದಂ ಕೇಳಿ, ರಾಣೋಜಿಯು ನಮ್ಮ ಆಳುಗಳು ಏನಮಾಡುತ್ತಿದ್ದರೆನಲವಳು;—

ನಿನ್ನ ಆಳುಗಳೋ ! ನಿನ್ನಲ್ಲಿ ಆಳುಗಳಲ್ಲಿರುವರು. ನಿನ್ನಲ್ಲಿರುವರು ಇಪ್ಪತ್ತು ತಾಂಬ್ರಶಿರಸ್ಸಿಗಳು. ಅವರು ಕಿಟಕಿಯಲ್ಲಿ ಮಾತ್ರ ತಲೆಹಾಕಿದರು. ಏಳಬೇಕೆಂದು ಪ್ರಯತ್ನಪಟ್ಟು, ವಾಯುವಿನಿಂದ ಕಾಲುನಡಗಿ ನೆಲಕ್ಕೆ ಬಿದ್ದರು. ಅವರಲ್ಲಿರುವಗಂಡಿಸುತನಕ್ಕಿಂತಲು ನನ್ನಲ್ಲಿ ಹೆಚ್ಚಾಗಿರುವದು. ನನ್ನ ಸಂಗಡ ಇನ್ನೊಬ್ಬಳಿದ್ದು; ನಮ್ಮಿಬ್ಬರ ಕೈಗಳಲ್ಲಿ, ಮೂಲೆಗುರಕಾರರುಮಾತ್ರ ಇದ್ದರೆ ನನ್ನ ಗಂಡಿಸುತನವನ್ನು ತೋರಿಸುತ್ತಿದ್ದೆನೆಂದು ಕೈಯೆತ್ತಿ ಬಳೆಯನ್ನಲ್ಲಾಡಿಸುತ್ತಿದ್ದಳೆಂಬಲ್ಲಿಗೆ ಚತುರ್ಥಾಶ್ವಾಸ ಸಮಾಪ್ತಂ.

ಪಂಚಮಾಶ್ವಾಸಂ.

ಚೌಪದಿ.

ಮೊದಲೊಳು ಅಂತ್ಯವುಕಾ
ಣ್ಬದೊಡೆಕೇಳ್ಮೊದಲಿಂ
ದದುಮೊದಮಾಗಿಯೆಕಾ
ಣ್ಬದುಮದಗಾಮಿನಿಗೇ

ಅಂದು ವೇಷನಾಟ್ಯದಲ್ಲಿ ಪೇಳಿದ ರೀತಿಯಿಂ; ಸುರೇಂದ್ರನು ಪಾದಚಾರಿಯಾಗಿ, ಪೋಷಕರಿಲ್ಲದೆ, ನಾರುಮಡಿಗಳನ್ನುಟ್ಟು, ಏಕಾಂಗಿಯಾಗಿ, ವಿಶ್ವನಾಥೇಶ್ವರನ ದರುಶನಕ್ಕಾಗಿ ವಾರಣಾಶಿಯಂ ಕುರಿತು ತೆರಳಿದನು. ಅದಂ ಕೇಳಿ ರವಿವರ್ಮನು, ವೃದ್ಧನಾದ ಸುರೇಂದ್ರನೊಬ್ಬನೆ, ಮಾರ್ಗಶ್ರಮಂಗಳನ್ನನುಭವಿಸುತ್ತ ಗಂಗಾಯಾತ್ರೆಯಂ, ಮಾಪಲಾರನು. ಆದುದರಿಂದ ತಾನಾದರು ಆತನಜೊತೆಯಲ್ಲಿದ್ದುಕೊಂಡು, ಅವನಂ ದಾರಿಯಲ್ಲಿ ಪೋಷಣೆಮಾಡಿ ಕೃತಜ್ಞನಾಗುವೆನು. ನಾನಿಂತಾವನೆಂದವನು ತಿಳಿದರೆ; ನನ್ನ ಸಹಾಯವನ್ನು ಅಂಗಿಕರಿಸುವದಿಲ್ಲವಾದ್ದರಿಂದ, ನಾನೊಬ್ಬ ಯಾತ್ರಿಕನಂತೆ, ಪರರಿಗೆ ತಿಳಿಯದ ತೆರದಿಂ, ಗಡ್ಡಮೀಸೆಗಳನ್ನಿಟ್ಟುಕೊಂಡು, ನಾರುಮಡಿಯನ್ನುಟ್ಟು ಭಸ್ಮಧಾರಿಯಾಗಿ; ಅವನ ಜೊತೆಯಲ್ಲಿ ಹೋಗುವೆನೆಂದು; ತಾನು ಬಿತುಕೊಂಡಿದ್ದ ಪ್ರದೇಶಮಂ ಬಿಟ್ಟು, ಕಾಶಿ ಮಾರ್ಗವಾಗಿ ತೆರಳಿ, ಮಾರ್ಗದಲ್ಲಿ, ಸುರೇಂದ್ರನಂ ಸೇರಿದನು. ಲಕ್ಷ್ಮಣನು ಶ್ರೀರಾಮನಂ, ಭೀಮಾರ್ಜುನರು ಯಮಸುತನಂ, ಕಾಡಿನಲ್ಲಿ ಶುಶ್ರೂಷೆಯಂಮಾಡಿದಂತೆ, ರವಿವರ್ಮನು, ಸಹಪಾಟಿಯಾದ ಯಾತ್ರಿಕನೆಂಬ, ನೆವದಿಂದ ಸುರೇಂದ್ರನಂ, ಮಾರ್ಗದಲ್ಲು, ಕಾಶಿಪಟ್ಟಣದಲ್ಲು, ಗುರುಶಿಷ್ಯಭಾವದಿಂದುಪಚರಿಸುತ್ತಿದ್ದನು.

ಆ ಪುಣ್ಯವಂತನಾದ ಸುರೇಂದ್ರನು, ಕಾಶಿಪಟ್ಟಣವನ್ನು ಪ್ರವೇಶಿಸಿ, ಗಂಗಾಸ್ನಾನವಂಮಾಡಿ, ವಿಶ್ವೇಶ್ವರನ ದರುಶನವಂ ಮಾಡಿದಾಗ್ಯು, ಆ ಕ್ಷೇತ್ರವನ್ನು ಬಿಟ್ಟು ಬರಲಾರದೆ, ಅಲ್ಲೆ ಕೆಲವು ದಿವಸಗಳಿದ್ದು, ಗಂಗಾತೀರದಲೊಂದು ದಿನ, ತನ್ನ ಕಾಲ ಬದಗಿಬಂದದ್ದನ್ನು ಕಂಡು, ಸಂಸಾರ ವಿಷಯವಾದ ಮರಣಪತ್ರವಂ ಬರದು, ತನ್ನನ್ನು ಪೋಷಣೆ ಮಾಡುತ್ತ, ಸುಶೀಲನೆಂಬ ಪೆಸರಿನಿಂ, ಯಾತ್ರಿಕನಂತಿರ್ದ, ರವಿವರ್ಮನ ವಶಕ್ಕೆ

ಕೊಟ್ಟು, ಪಂಚತ್ವವನ್ನೈದಿದನು. ರವಿವರ್ಮನು ಅವನ ಕ್ರಿಯಾದಿಗಳಂ ಮಾಡಿ, ತಾನು ಬಂದ ಕೆಲಸವಾಯಿತು, ನಾನಿಲ್ಲಿದ್ದು ಫಲವೇನೆಂದು, ಚಂದ್ರನಗರಾಭಿಮುಖನಾಗಿ, ಕಾಶಿರಾಜ್ಯವಂ ಬಿಟ್ಟು, ಮಗಧದೇಶವಂ ಪ್ರವೇಶಿಸಿ ಬರುತ್ತಿರ್ದನು.

ಗಂಗಾಯಾತ್ರೆಯಂ ಬಹುಜನ ಮಾಡುವರು. ಅವರಲ್ಲಿ ಅನೇಕರು ಕಾಶಿಯಂ ಸೇರುವದಕ್ಕೆ ಮುಂಚೆಗಿಂತ ಹೆಚ್ಚಾದ ಪಾಪಿಗಳಾಗಿ ಹಿಂತಿರುಗಿ ಬರುವರು. ಭೂಸಂಬಂಧವಾದ ಕೃತಜ್ಞತೆಯಿಂದ ಮಾತ್ರ ಕೈಕೊಂಡ, ರವಿವರ್ಮನ ಮಹಾಯಾತ್ರೆಯು, ಪರಲೋಕ ಸಾಧನಕ್ಕೆ ಕಾರಣವಾಯಿತು. ಅವನಿಗೆ ಭಕ್ತಿಯು ಹೋಗುತ್ತಾ ಇರುವಾಗ್ಯೆ ಮಾತ್ರ ಇರದೆ ಯಾತ್ರೆಯಿಂ ಹಿಂತಿರುಗಿ ಬರುವಾಗಲು ಕಾಣುತ್ತಿತ್ತು. ಅವನು ಕಾಶಿ ರಾಜ್ಯದಲ್ಲಿ ಮಾತ್ರವೆ ಯಾತ್ರಿಕನಂತೆ ಪರದೇಶಿಯನಾಗಿ ಕಾಣುತ್ತಿರಲಿಲ್ಲ. ಮಗಧದೇಶದಲ್ಲು ಸಹ ಹಾಗೆ ಕಾಣುತ್ತಿದ್ದನು.

ಅವನು ಮಾರ್ಗದಲ್ಲಿ ಬರುತ್ತಾ ಒಂದು ದಿನ ಸಾಯಂಕಾಲ ಸಮಯದಲ್ಲಿ, ಮಾರ್ಗವಶಾತೊಂದು ಪಾಳು ದೇವಾಲಯವಂ ಕಂಡು, ಈ ರಾತ್ರಿ ಇದರಲ್ಲಿದ್ದು ಬೆಳಿಗ್ಗೆ ಮುಂದಕ್ಕೆ ತೆರಳುವೆನೆಂದು, ಅದರ ಒಳಗೆ ಹೋಗಿ, ಅದರಲ್ಲಿ ಆಗಲೆ ಯಾರೊ ಬಂದಿಳಿದಿರುವದಂ ಕಂಡು, ಈ ದೇವಾಲಯವು ಈ ರಾತ್ರೆ ನನಗೊಬ್ಬನಿಗೇನೆ ದೊರಕುವಂತೆ ಕಾಣುವದಿಲ್ಲ. ಮತ್ತ್ಯಾರೊ ಬಂದಿಳಿದಿರುವಂತೆ ಕಾಣುತ್ತೆ. ಅವರು ಇದ್ದರು ಇರಲಿ ಅದರಿಂದ ಕುಂದಕವೇನು; ನನ್ನ ಸ್ವಭಾವವೇ ವ್ಯತ್ಯಾಸವಾದಂತೆ ಕಾಣುತ್ತೆ. ಮೊದಲು ಅಹೋರಾತ್ರಿಯಲ್ಲು ದೊಂಬಿಯಂ ಕಟ್ಟಿಕೊಂಡು ಕಾಲಹರಣವಂ ಮಾಡುತ್ತಿದ್ದವನಿಗೆ, ಈಗ ಜನದ ಗೋಷ್ಠಿಯೆ ಬೇಜಾರಾಗಿ ಕಾಣುವದೆನುತ್ತ; ಕತ್ತಲಿಂದಲು, ಮರದನೆರಳಿನಿಂದಲು ಕಾಣದಿರುವ ದೇವಾಲಯದ ಬಾಗಲನ್ನು ಹುಡುಕಿ ಒಳಕ್ಕೆ ಹೋದನು. ಅಲ್ಲಿ ಮೂರುನಾಲ್ಕು ಜನ ಕಾವಲುಗಾರರೊಂದಿಗೆ, ಶರೆಯುಬಂಧನದಿಂದಿರುವ [illegible]ಮವರ್ಮನಂ ಕಂಡು; ಇದೇನಿವನವಸ್ಥೆಯು; ಇದನ್ನು ಕೇಳಿ ತಿಳದುಕೊಳ್ಳುತ್ತೇನೆನ್ನುವಷ್ಟರಲ್ಲಿ; ಕಾವಲುಗಾರರ ದಫೆದಾರನು ತನ್ನ ಆಳುಗಳನ್ನು ಕುರಿತು;—ಕೆಸರಿನಿಂದಲು, ಮಂಜಿನಿಂದಲು, ಕೂಡಿರುವ, ಈ ಕಾಡಿನಲ್ಲಿ, ಈ ದೇವಾಲಯವಾದರು ಸಿಕ್ಕಿದ್ದು ಅನಕೂಲವಾಯಿತು, ನಾವು ಬೆಳಕಿದ್ದಾಗಲೆ ಇಲ್ಲಿಗೆ ಬರಬೇಕಾಗಿತ್ತು. ಇಲ್ಲಿಗ್ಯಾರೊ ಒಬ್ಬ ಯಾತ್ರಿಕನು ಬಂದಂತೆ ಕಾಣುವದು. ಅಲ್ಲಿ ಉರಿಹಾಕಿ ಬೆಳಕುಮಾಡಿ. ಹೋದವರ್ಷ ಈ ಸ್ಥಳದಲ್ಲಿ ಕಳ್ಳರನ್ನು ಹಿಡಿದಾಗ, ಅವರ ಯಜಮಾನ, ಗಜಕರ್ಣನು, ಕಾವಲುಗಾರರನ್ನು

ಕೊಂಡು, ಓಡಿಹೋಗುತ್ತಿರುವಾಗ ನಾನು, ಅವನನ್ನು ಭರ್ಜಿಯಿಂದ ತಿವಿದು ನೆಲಕ್ಕೆ ಕೆಡವಿದೆನು. ಅವನ ಶರೀರದಿಂದ ಸುರಿದ ರಕ್ತದ ಗುರುತು ಆ ಕಲ್ಲಿನಮೇಲೆ ಇನ್ನೂ ಇದೆ. ಅವನು ಸಾಯುವಾಗ ಪಟ್ಟ ಸಂಕಟವು, ಇನ್ನೂ ನನ್ನನ್ನು ಭಯಪಡಿಸುತ್ತಿದೆ ಎನ್ನುವಷ್ಟರಲ್ಲಿ, ಯಾತ್ರಿಕನಂತೆ ಬಂದ ಸುಶೀಲನೆಂಬ ಹೆಸರಿನ ರವಿವರ್ಮನಿಗೆ ವಂದನೆಯಂಮಾಡಿ: ಅವನಿಗೆ ರಾಮವರ್ಮನಂ ತೋರಿಸಿ;—ಸ್ವಾಮಿ, ಶರೆಯಲ್ಲಿರತಕ್ಕವನು ಬಂದಾನೊಂದು ಕಾಲದಲ್ಲಿ, ಘನತೆವಂತನಾಗಿದ್ದ ಈಗಿವನನ್ನು ಹಾಗೆ ಯಾರು ಭಾವಿಸುವದಿಲ್ಲ. ಇವನು ನ್ಯಾಯಾಧೀನನಾಗಿರುವನೆನಲು;—ಯಾತ್ರಿಕನು, ಅವನಂ ಕುರಿತು;—ನೀನು ಹೇಳಿದ್ದು ನಿಜವಿರಬಹುದು; ಆದರೆ ನ್ಯಾಯವು ಘನತೆಯು, ಯಾವಾಗಲೂ ಐಕಮತ್ಯದಿಂದಿರದೆ, ಬಂದಕೊಂಡು ಶತೃಭಾವದಲ್ಲಿ ಅನೇಕವೇಳೆ ಇರುವದೆಂದು ನಾನು ಕೇಳಿರುವದುಂಟೆನ್ನುವಷ್ಟರಲ್ಲಿ;—ದಫೇದಾರನು ತನ್ನಾಳುಗಳಂ ಕುರಿತು;—ನೀವು ಈ ಖೈದಿಯ ಸಂಕೋಲೆಗಳನ್ನು ಚೆನ್ನಾಗಿ ನೋಡಿದ ನಂತರ ಹೊರಕ್ಕೆ ಹೋಗಿ ಕಾಡಿನಲ್ಲಿ ಒಣಗಿರುವ, ಕಾಷ್ಟಗಳನ್ನು ಆರಿಸಿಕೊಂಡು ಬನ್ನಿ. ನಾನು ಪ್ರಾಕಾರದಲ್ಲಿರುವ ಹುಲ್ಲು ಮತ್ತು ತರಗೆಲೆಗಳನ್ನು ಗುಡಿಸಿಕೊಂಡು ಬರುವೆನೆಂದು, ಅವರನ್ನು ಕಳುಹಿಸಿ, ತಾನು ದೇವಾಲಯದ ಪ್ರಾಕಾರಕ್ಕೆ ಹೋದನು.

ರವಿವರ್ಮನು ಮಾತನಾಡಲು, ಇದೆ ಸಮಯವೆಂದು; ಶರೆಯಲ್ಲಿದ್ದವನಂ ಕುರಿತು;—ನೀನ್ಯಾರು ರಾಮವರ್ಮನಲ್ಲವೆ, ಎಂದುದಕವನು;—ಸ್ವಾಮಿ ತಮಗೆ ನನ್ನ ಹೆಸರೇನೊ ಗೊತ್ತಿರುವಂತೆ ತಿಳಿಯುತ್ತೆ; ಅದು ವಿನಃ ನನ್ನ ವಿಷಯವಾಗಿ ಮತ್ತಿನ್ನೇನಾದರು ಗೊತ್ತಿರುವದೆ ಎನಲು; ರವಿವರ್ಮನು;—ನಿನ್ನ ವಿಷಯವು ನನಗೆ ತಿಳದಿರುವಷ್ಟು ಮತ್ಯಾರಿಗು ತಿಳಿಯದು. ನೀನು ನನ ಗುರುತು ಹಿಡಿಯದಷ್ಟು ನಾನು ವ್ಯತ್ಯಾಸವಾಗಿರುವೆನ? ನೀನು ನನ್ನಂತೆಯೆ, ಗಡ್ಡಮೀಸೆಗಳಿಂದಲಾಗಲಿ, ನಾರುಮಡಿಯ ಉಡಪಿನಿಂದಲೆ ಆಗಲಿ, ಬಿಸಿಲಿಗೆ ಕಂದಿದ ಮುಖವಿಕಾರದಿಂದಲೆ ಆಗಲಿ, ಸ್ವಭಾವವ್ಯತ್ಯಾಸದಿಂದುಂಟಾದ, ಬಹಿರ್ವ್ಯತ್ಯಾಸದಿಂದಲೆ ಆಗಲಿ, ರೂಪಭೇದವಾಗಿದ್ದರೆ ರಾಮವರ್ಮನನ್ನು, ರವಿವರ್ಮನಿಗೆ ಮರೆಮಾಚಲಾರದೆಂದುದಕವನು, ಆಶ್ಚರ್ಯಭರಿತನಾಗಿ;—ಹಾ! ಹಾ! ನೀನು ರವಿವರ್ಮನೆ! ಹಾಗಾದರೆ ನೀನೀಗೆಲ್ಲಿಂದ ಬಂದೆ? ಎನಲವನು ನಾನೆ ರವಿವರ್ಮನು, ಕಾಶಿ ಪಟ್ಟಣದಿಂದ ಬರುತ್ತಿರುವೆನು. ಅದರಮಾತಂತಿರಲಿ. ನಾವಿಬ್ಬರು ಈ ರೀತಿ ಸಂಧಿಸಲು ಕಾರಣವೇನು? [illegible] ಆಸ್ಥಾನಿಕನ ದ್ರೋಹವು; ಯಾವ ರಾಜಕೀಯವಾದ ಅಸಂಗತವು,

ಶಂಕರಾಚಾರ್ಯರಿಗಿಮ್ಮಡಿಯಾಗಿ ಧರ್ಮಸ್ಥಾಪನೆ ಮಾಡತಕ್ಕ ಶಕ್ತನಾದ ನಿನಿಗೀ ಬಂಧನಗಳನ್ನುಂಟುಮಾಡಿತು ಹೇಳನಲು?

ಕೈರವೆಯು ಕೈತಪ್ಪಿ ಹೋದಳೆಂಬ ರಾಮನ ಕೋಪದಿಂದುಂಟಾಗಿರುವದು. ಇದೊಂದೆ ಇದಕ್ಕೆ ಕಾರಣವು. ನೀವು ವಾರಣಾಸಿಯಿಂದ ಬಂದವನಾದರೆ, ಸುರೇಂದ್ರನು ಕಾಲಾಧೀನನಾಗಿರಬಹುದು; ಎಂದವನಂ ಕುರಿತು ರವಿವರ್ಮನು:—ಹೌದು, ನಾನು ಅವನಂ ಎಷ್ಟು ಜಾಗರೂಕನಾಗಿ ನೋಡಿಕೊಂಡರು ಅವನು ಪುನಃ ಊರಿಗೆ ಬರಲಿಕ್ಕಾಗಲಿಲ್ಲ. ಸಾಯುವ ಕಾಲದಲ್ಲಿ ಈ ಕಾಗದವಂ ನನ್ನ ವಶಕ್ಕೆ ಕೊಟ್ಟನು ಅದನ್ನು ಪದ್ಮಿನಿಗೆ ತಲಪಿಸುವಂತೆ ಹೇಳಿರುವನು ಆದುದರಿಂದಿದನ್ನು ತೆಗೆದುಕೊಂಡು, ಅವಳಿರತಕ್ಕ ಪಾಲಿವಿಕೋಟೆಗೆ ಹೋಗುತ್ತಾ ಇರುವೆನು. ಕೈರವೆಯಿಂದ ನಿನಗಿಂತ ದೆಶೆಯುಂಟಾಯಿತೆಂದು ಹೇಳಿದೆಯಲ್ಲವೆ;—ಎನ್ನುವಷ್ಟರಲ್ಲಿ, ದಫೇದಾರನು, ಬೆಳಕು ಮಾಡುವದಕ್ಕಾಗಿ ಹುಲ್ಲನ್ನು ತೆಗೆದುಕೊಂಡು ಬಂದದ್ದನ್ನು ನೋಡಿ, ಮಾತನಾಡಲು ಅವಕಾಶವಿಲ್ಲವಲ್ಲ ಎಂದು ಕೊಂಚಹೊತ್ತು ಯೋಚಿಸಿ, ಅವನಂ ಕುರಿತು ದಫೇದಾರ್ರೆ ಕಿರುಬಗಳ ಧ್ವನಿ ನಿಮಗೆ ಕೇಳಿಸುವದೆ, ಅದು ನನ್ನನ್ನು ತುಂಬಾ ಭಯಪಡಿಸುತ್ತಿರುವದು, ನಿಮ್ಮ ಆಳುಗಳಲ್ಲಿರುವದನಲವನು ಭಯಪಟ್ಟು, ಈ ಸ್ಥಳದಲ್ಲಿ ಕಿರುಬಗಳಿವೆಯೆ? ಅವುಗಳಿದ್ದರೆ ಈ ಗುಲಾಮುರ್ಯಾತಕ್ಕೆ ನಾವಕಾಶವಮಾಡುತ್ತಿರುವರು. ದೇವಸ್ಥಾನದ ಬಳಕ್ಕಾದರೂ ಬಂದು ಸ್ವಸ್ಥವಾಗಿರದೆ, ಹೊರಗೇನಮಾಡುತ್ತಿರುವರು, ಅವರಂ ಕೂಗುವೆನೆಂದು ಹೊರಟು ಹೋದನು.

ಅದನ್ನು ನೋಡಿ ನಸುನಗುತ್ತಿದ್ದ ರವಿವರ್ಮನಂ ಕುರಿತು, ರಾಮವರ್ಮನು; ಹೌದು, ಕೈರವೆಯೆ ಇದಕ್ಕೆ ಕಾರಣವು. ಇವಳನ್ನು ನಾನು ರಾಮನ ಮೋಹಪಾಶಕ್ಕೆ ಸಿಕ್ಕದಂತೆ ಮಾಡಿ, ಇವಳಿರತಕ್ಕ ಸ್ಥಳ ಇದುವರೆಗು ಗೊತ್ತಿಲ್ಲದಂತೆ, ಒಂದು ಗುಪ್ತಸ್ಥಾನದಲ್ಲಿಟ್ಟಿರುವದಕ್ಕಾಗಿ, ರಾಮನಿಗೆ ನನ್ನಮೇಲೆ ಕೋಪವುಂಟಾಗಿರುವದು. ಇವಳನ್ನು ಪಾಟಲಿಪುರದ ಸ್ತ್ರೀ ಸನ್ಯಾಸ ಮಠದಲ್ಲಿ ಬಿಟ್ಟಿರುವೆನು. ಆ ಮಠಕ್ಕೆ ನನ್ನ ಚಿಕ್ಕಮ್ಮನು ಅಧಿಕಾರಿಯು. ಅಲ್ಲಿ ಕೈರವೆಯು, ಮನೋಸ್ಥೈರ್ಯವನ್ನು ಹೊಂದುತ್ತಾ ಇರುವಳು. ಅದು ಅದನಂತರ ಆಶ್ರಮವನ್ನು ತೆಗೆದುಕೊಂಡು ಕಾವಿ ಧರಿಸುವಳು. ಇವಳಿಗೆ ದೀಪಳಿಗೆ ದಿವಸ ಆಶ್ರಮವಂ ಕೊಡಬೇಕೆಂದು ಮಠದಲ್ಲಿ ನಿಷ್ಕರ್ಷೆಮಾಡಿಕೊಂಡಿರುವರು. ಇವಳು ಸನ್ಯಾಸವನ್ನು ತೆಗೆದುಕೊಂಡು ರಾಮನ ಕಡೆಗೆ ಅವಕಾಶವಿಲ್ಲ

ದಂತೆ ಆಗುವವರೆಗು ಎಲ್ಲಾದರು ತಲೆಮರಿಸಿಕೊಂಡಿರಬೇಕೆಂದು ಬಿತುಕೊಂಡಿದ್ದೆ. ಅಂತವನನ್ನು ಈ ರಾಜಭೃತ್ಯರು ಹಿಡದುಕೊಂಡರು, ನನ್ನ ದುರಾದೃಷ್ಟ ಮಾಡತಕ್ಕದ್ದೇನೆಂದವನಂ ಕುರಿತು ರವಿವರ್ಮನು:–ದುರಾದೃಷ್ಟವೆಂದರೇನು! ನಾವಿಬ್ಬರು ಸೇರಿದ ಕಡೆಯಲ್ಲಿ ಅದೃಷ್ಟವೆಂಬುವದು ಕೆಟ್ಟದ್ದಾಗಿ ಹ್ಯಾಗಿರುವದು. ಅವರು ನಾಲ್ಕು ಜನವಿರುವರು, ನಾವಿಬ್ಬರಿರುವೆವು. ಅದಕಿಂತ ಮೇಲಾದದ್ದು ಬೇಕೆ? ಎಲೈ! ರಾಮವರ್ಮನೆ ನಿನ್ನಂ ನೋಡಿ ನನ್ನ ರಕ್ತವು ಕುದಿಯುತ್ತಿರುವದು, ಈ ಕಾವಲುಗಾರರು ನಿನ್ನನ್ನೀಯವಸ್ಥೆಯಲ್ಲಿ ರಾಯನ ಎದುರಿಗೆ ಹ್ಯಾಗೆ ಕರದುಕೊಂಡುಹೋಗುವರು ನೋಡುವೆನೆಂದವನಂ ಕುರಿತು ರಾಮವರ್ಮನು:–ಈಗ ನಿನ್ನ ಮುಖಕಾಂತಿಯು ಪ್ರಜ್ವಲಿಸುತ್ತಿರುವದು, ನಿನ್ನ ಸ್ವಭಾವ ತಲೆದೋರುವದು. ಆದರೆ ಅದನ್ನು ಅಡಗಿಸುವನಾಗು. ಈ ಭೃತ್ಯರು ಮರಟರಾದಾಗ್ಯೂ, ರಾಜಾಜ್ಞೆಯಂ ನೆರವೇರಿಸುತ್ತಿರುವರು. ಆದಕಾರಣ ಅವರನ್ನು ಘಾತಿಸತಕ್ಕದ್ದು ಸರಿಯಲ್ಲವೆಂದುದಕೆ ರವಿವರ್ಮನು:–ಹಾಗಾದರೆ ಅವರನ್ನು ಉಪಾಯಾಂತ್ರದಿಂದ ಗೆದ್ದು; ಅವರ ಮೂಳೆಗಳು ಅವರ ಮೈಯಲ್ಲಿರುವಂತೆ ಮಾಡುವೆನು. ಅದಕೊಂದು ಉಪಾಯವು ತಲೆದೋರುತ್ತಿರುವದು. ಅವರಿಂದವರಿಗೆ ಕೊಂಚವಾದರು ಘಾಸಿಯಾಗುವದಿಲ್ಲ, ನಮ್ಮ ಕೆಲಸವೇನೊ ಆಗುತ್ತೆ. ಅವರನ್ನು ಹುಚ್ಚರಂತೆ ಈ ಕಾಡಿನಲ್ಲಿ ಓಡಿಹೋಗುವಂತೆ ಮಾಡುವೆನು ನೋಡು. ಯಾತ್ರಿಕರು ಇಂತಾ ಉಪಾಯಗಳನ್ನು ಪದೇಪದೆ ಮಾಡಬೇಕಾಗಿರುವದು. ಇವುಗಳಿಂದಲೆ ಅವರಿಗೆ ಅನೇಕ ವೇಳೆ ಕ್ಷೇಮವುಂಟಾಗುವದು ಈ ಮಂಕುಗಳನ್ನು ಮೋಸಪಡಿಸುವವರೆಷ್ಟರ ಕೆಲಸವೆನ್ನುವಷ್ಟರಲ್ಲಿ:–ದಫೆದಾರನು ಕೈಯಲ್ಲಿ ಪಾತ್ರೆಪದಾರ್ಥಗಳನ್ನು ಅವನ ಆಳುಗಳು ಬಣಗಿದ ಕಾಷ್ಟಗಳನ್ನು ತೆಗದುಕೊಂಡು ಬರುತ್ತಿರಲು, ರವಿವರ್ಮನು ಅವರಂ ಕುರಿತು;–ಸಿಪಾಯಿಗಳು ಆ ಬಾಗಲು ಬಳಿಯ ಕಲ್ಲನ್ನು ದಾಟಬೇಡಿರೆಂದು ಅವರೆಲ್ಲರು ದಾಟಿದಮೇಲೆ ಕೂಗಿಕೊಂಡು ಅವರು ದಾಟಿದ್ದನ್ನು ಕಂಡು; ಇನ್ನೇನುಗತಿ, ಎಲ್ಲರು ಅದನ್ನು ದಾಟಿಬಿಟ್ಟಿರಲ್ಲ ಎಂದು ಕೈಯಿಂ ಹಿಸಕಿಕೊಳ್ಳುತ್ತ ಭಯಗ್ರಸ್ತನಂತೆ ನಟನೆಮಾಡಲುಪಕ್ರಮಿಸಿದನು.

ದಫೆದಾರನು ಚನ್ನಾಗಿ ಉರಿಹಾಕಿ ಎಂದು ಆಳುಗಳಿಗೆ ಹೇಳಿ, ರವಿವರ್ಮನಂ ಕುರಿತು;–ಆ ಕಲ್ಲನ್ನು ದಾಟಬೇಡವೆಂದು ಹೇಳಿದಿರಲ್ಲ ಯಾತಕ್ಕೆ ಅದರಿಂದ ಕುಂದಕವೇನೆಂದವನಂ ಕುರಿತು ರವಿವರ್ಮನು,–ನೀವು ಆ ಕಲ್ಲಿನಮೇಲಣ ಕೆತ್ತೆಯುಬ್ಬಿ ದುರಾತ್ಮನ ರಕ್ತದಿಂದುಂಟಾದ್ದೆಂದು ಹೇಳಲಿಲ್ಲವೆ ಎಂದುದಕೆ ದಫೆದಾರನು,–ಹೌದು ಅದು ಗೆಪ

ಕರ್ಣನರಕ್ತ ಸುರಿದದ್ದರಿಂದುಂಟಾದದ್ದು. ಅವನು ಭೂಮಿಗೆ ಬೀಳುವದಕ್ಕೆ ಮುಂಚೆ, ಅವನ ಅಂಗವೆಲ್ಲ ಛಿನ್ನಾಭಿನ್ನವಾಗಿ ಕತ್ತರಿಸಲ್ಪಟ್ಟು; ಕಣ್ಣು ಮೂಗಿನಿಂದ ರಕ್ತಪ್ರವಾಹವು ಅವನ ಗಡ್ಡದ ಮೇಲೆಲ್ಲ ಸುರಿಯುತ್ತ ನೋಡಲು ಅಸಹ್ಯವಾಗಿ ಭಯವನ್ನುಂಟುಮಾಡುತ್ತಿತ್ತು, ಅದನ್ನು ನೆನಸಿಕೊಂಡರೆ ಈಗಲು ನನ್ನ ಮೈ ಜುಮ್ಮೆನ್ನುತ್ತೆ ಎಂದವನಂ ಕುರಿತು, ರವಿವರ್ಮನು:—ಹಾಗಾದರೆ ಈ ದಿವಸ ಅಂಧಕಾಸುರನಸಂಹಾರದ ರಾತ್ರಿ ಎಂದು ತಿಳಿದು, ಈ ಕೆಲಸವನ್ನು ಮಾಡಬಹುದೆ, ಮುಂದೇನುಗತಿಯೆನಲು ದಫೆದಾರನು ಅಂಧಕಾಸುರನ ರಾತ್ರಿಯೆಂದರೇನೆನಲು, ರವಿವರ್ಮನು ಕೋಪಿಷ್ಟನಂತೆ:—ಅಷ್ಟು ಮಾತ್ರ ತಿಳಿಯದೆ, ಅದನ್ನು ಮಹಾಯಾತ್ರೆ ಮಾಡಿ ತಿಳಿದುಕೊಳ್ಳಬೇಕೆ? ಈ ರಾತ್ರಿ ದುರ್ಮರಣದಿಂದ ಸತ್ತ ದುರಾತ್ಮರ ಜೀವಗಳಿಗೆ ನರಕಬಾಧೆಯು ತಪ್ಪಿ, ಅವುಗಳು ನರಕದಲ್ಲಿ ಗುಂಪುಕೂಡಿ ತಾವು ಸತ್ತ ಸ್ಥಳದಲ್ಲಿ ತಮ್ಮ ರಕ್ತವನ್ನು ಯಾರಾದರು ದಾಟಿದರೆ, ಅಲ್ಲೀಳುವರೆಂದು ನಿಮ್ಮಪ್ಪ ನಿನಗೆ ಹೇಳುತ್ತಿದ್ದದ್ದನ್ನು ನೀನು ಕೇಳಿಲ್ಲವೆ ಎಂದನು. ದಫೆದಾರನು:—ಸ್ವಾಮಿ ಈ ವಿಷಯವನ್ನು ನಾನೆಲ್ಲು ಕೇಳಿರುವದಿಲ್ಲ ನೀವೆಲ್ಲಿ ಕೇಳಿರುವಿರೆನ್ನುವಷ್ಟರಲ್ಲಿ ರವಿವರ್ಮನು ಭಯಗ್ರಸ್ತನಂತೆ ಬೆದರಿ ಹುಬ್ಬುಗಳನ್ನೆತ್ತಿ ದುರುದುರನೆ ನೋಡುತ್ತ; ಕೈಗಳನ್ನು ಮುಂದಕ್ಕೆ ಚಾಚಿ:—ಅಗೋ! ಅದೇನೆಂದು ಅಲ್ಲಾಡುತ್ತಿರುವ ಮರದ ನೆರಳು ಕಡೆ ತೋರಿಸಿ, ಉರಿಯುತ್ತಿದ್ದ ದೀವಿಗೆಯನ್ನು ನೆಲಕ್ಕೆ ಕೆಡವಿ, ಬೀಳುವನಂತೆ ಪಾತ್ರೆಗಳಮೇಲೆ ಬಿದ್ದು ಅವುಗಳ ಶಬ್ದವನ್ನು ಮಾಡಲುಪಕ್ರಮಿಸಿದನು. ಅದನ್ನು ಕಂಡು ದಫೆದಾರನು ಅವನ ಆಳುಗಳು ಹೆದರಿಕೊಂಡು ಓಡಿಹೋದರು.

ರವಿವರ್ಮನು ನಗುತ್ತಾ, ರಾಮವರ್ಮನಂ ಕುರಿತು, ನಾನು ಇವರಂ ಮಂಕುಗಳೆಂದು ಹೇಳಿದ್ದು ಸುಳ್ಳೆ? ಇವರೀ ಕಾಡಿನ ಕೆಸರಿನಲ್ಲಿ ಬಂದು ಹರದಾರಿ ವರೆಗೆ ಓಡಿದ ಹೊರತು ಬದಲುಸುರುಬಿಡುವದಿಲ್ಲವೆನಲು, ರಾಮವರ್ಮನು:—ಉಪಾಯವೇನೊ ಸರಿಯೆ, ಇದರಿಂದ ಸದ್ಯಕ್ಕೆ ಮಾತ್ರ ಫಲತೋರಿತು. ಆದರೆ ದಫೆದಾರನು ವಿವೇಕಿಯು ಕೊಂಚ ದೂರ ಹೋಗುವದರೊಳಗೆ, ಈ ಉಪಾಯವಂ ತಿಳಿದುಕೊಂಡು ಅವನೊಬ್ಬನಾದರು ಹಿಂತಿರುಗಿ ಬರುವನೆಂದುದಂ ಕೇಳಿ ರವಿವರ್ಮನು:—ಹಾಗಾದರೆ ಮತ್ತು ಒಳ್ಳೇದೆ ಆಯಿತು. ಅವನೊಬ್ಬನೆ ಬಂದರೆ ಅವನಿಗೇನು ಘಾಸಿಮಾಡದೆ ಮರಕ್ಕೆ ಕಟ್ಟಿ ನಿನ್ನ ಸಂಕೋಲೆಗಳಿಗೆ ಹಾಕಿರುವ ಬೀಗದಕೈಯನ್ನು ತೆಗೆದುಕೊಳ್ಳಬಹುದು. ಅದರಿಂದೊಂದು ಅರೆವನ್ನು ಸವಿಸತಕ್ಕದ್ದೆ ತಪ್ಪೇನದು. ಆದರ ಸಂಗತಿ ಹಾಗಿರಲಿ; ಈಗ ನಾವು ಎಲ್ಲಿಗೆ

ಹೋಗೋಣ ಹೇಳೆನಲು, ರಾಮವರ್ಮನು:—ಪಾಟಲಿಪುರದ ಸ್ತ್ರೀ ಸನ್ಯಾಸಮಠವು ಇಲ್ಲಿಗೆ ಸಮೀಪವಾಗಿರುವದು. ದೀವಳಿಗೆ ಸಹ ಒದಗಿ ಬಂದಿರುವದು. ಆದಕಾರಣ, ಕೈರವೆಯು ಕಾವಿ ಧರಿಸುವದನ್ನು ನೋಡಿ, ಅವಳಿಂದ ಅಪ್ಪಣೆ ತೆಗೆದುಕೊಂಡು ಬರಬೇಕೆಂಬ ಕುತೂಹಲವಿರುವದು; ಆದರೂ ಅದುವರಿಗೆ ಆ ಮಠದ ಬಳಿ ನಾವಿರತಕ್ಕದ್ದು ಸರಿಯಲ್ಲ. ನಮ್ಮ ಗುರುತನ್ನು ಹಿಡಿದು ಯಾರಾದರು ಬಂದು, ಅವಳ ಉದ್ದೇಶವಂ ಭಂಗ ಮಾಡಬಹುದು ಆದುದರಿಂದ ನೀನು ಸಮ್ಮತಿಸಿದರೆ ದೀವಳಿಗೆ ವರೆಗೆ, ವ್ಯಾಧರಂತೆ ನಾವು ಈ ಕಾಡಿನಲ್ಲಿ ವಾಸಮಾಡಿಕೊಂಡಿರೋಣವೆಂದುದಕ್ಕೆ ರವಿವರ್ಮನು:—ಹಾಗೆ ಆಗಲಿ ಮನೆಗಳಲ್ಲಿರತಕ್ಕ ಒಣಗಿದ ಮರಗಳಿಗಿಂತಲು, ಕಾನನದಲ್ಲಿರುವ ಜೀವವೃಕ್ಷಗಳು ರಮಣೀಯವಾಗಿರುವವೆಂದು, ಆ ಕಾಡಿನಲ್ಲಿ ಕಾಲಹರಣವಂ ಮಾಡುತ್ತಿದ್ದರು.

ಇತ್ತ ಮಾಲವಿಕೋಟೆಯಲ್ಲಿದ್ದ, ಪದ್ಮಿನಿಯು ಕಳಿಂಗನಿಂ ಆಜ್ಞಪ್ತಳಾಗಿ ತನ್ನ ಸಖಿ ಕಮಲಿನಿಯೊಂದಿಗೆ, ಆ ಕೋಟೆಯಂಬಿಟ್ಟು, ಸುರೇಂದ್ರನ ಆಸ್ತಿಯನ್ನು ಅವನ ಮರಣಾನಂತರ, ಮಗಧದೇಶದ ಪದ್ಧತಿಪ್ರಕಾರ, ರಾಜಾಧಿರಾಜ ವೀರಬಾಹುಮಹಾರಾಜನಿಂದ ತಾನು ಕೈಕೊಳ್ಳಲು, ಚಂದ್ರನಗರವಂ ಪ್ರವೇಶಿಸಿ; ಒಂದು ದಿನ ಆಸ್ಥಾನವಂ ಕುರಿತು ಸಖಿಯೊಡನೆ ಪದ್ಮಿನಿಯು ರಾಜನ ಅರಮನೆಗೆ ಬಂದಳು. ಅವರಂ ಕಂಡ ಒಬ್ಬ ದ್ವಾರಪಾಲಕನು:—ಎಲೈ! ತಾಯಿಗಳಿರ ನಿಮ್ಮ ಜನಕ ಕಳಿಂಗರಾಯರು, ಮಹಾರಾಯರ ಸಮಯವನ್ನು ಕಾದುಕೊಂಡಿರುವನು, ಸರಿಯಾದ ಕಾಲವನ್ನು ತಿಳಿದು ಬಂದು ತಮಗೆ ತಿಳಿಸುವೆನು; ಅಷ್ಟರಲ್ಲಿ ನೀವು ಬಂದರೆ, ನಿಮ್ಮನ್ನೊಂದು ಕೊಟ್ಟಡಿಯಲ್ಲಿ ಬಿಜಮಾಡಿಸಿರುವದೆಂದಪ್ಪಣೆ ಕೊಟ್ಟಿರುವರು. ಇಲ್ಲಿ ಕಾಣುವ ಕಿರುಮನೆಯು ಪ್ರಶಸ್ತವಾಗಿದೆ ಅಲ್ಲಿ ತಾವು ವಿಶ್ರಮಿಸಿಕೊಳ್ಳಬಹುದೆಂದವರನ್ನಲ್ಲಿ ಬಿಟ್ಟು, ಅವರು ಬಂದ ವರ್ತಮಾನವನ್ನು, ಕಳಿಂಗನಿಗೆ ತಿಳಿಸಲೋಸುಗ ಅವನು ತೆರಳಿದನು.

ಆ ಕೊಟ್ಟಡಿಯಲ್ಲಿ ಪದ್ಮಿನಿಯು, ಕಮಲಿನಿಯಂ ಕುರಿತು:—ಈ ಕೊಟ್ಟಡಿಯಲ್ಲಿರತಕ್ಕ ಕನಾತುಗಳನ್ನು, ತೋರಣಗಳನ್ನು, ಮತ್ತು ಇತರ ಸಾಮಾನುಗಳನ್ನು ನೋಡಿದರೆ, ನಾವು ಹೋದವರುಷವಿದ್ದ ಕೊಟ್ಟಡಿಯಂತೆ ಕಾಣುತ್ತೆ. ನಾವೀಕೊಟ್ಟಡಿಗೆ ಬಂದು ಇಂದಿಗೆ ಒಂದು ವರುಷ ಸರಿಯಾಗಿ ಆಯಿತು. ಈ ಕಿರುಮನೆಯಂ ನೋಡಿದರೆ ನನ್ನ ಪೂರ್ವ ವೃತ್ತಾಂತವು, ಹರುಷೋಲ್ಲಾಸವು ಸ್ವಪ್ನದಂತೆ ಕಾಣುತ್ತಿನಲು, ಕಮಲಿನಿಯು,—ಹೌದು ನೀನು ಆಗತಾನೆ ಬಾಲ್ಯಾವಸ್ಥೆಯಂ ಬಿಟ್ಟು ಯೌವನವನ್ನು

ಕೈಕೊಂಡು; ಅದನ್ನು ಸಾರ್ಥಕವಾಗತಕ್ಕ ಉದ್ದೇಶ ನಿನ್ನಲ್ಲಿ ತಲೆದೋರಿ ಹರುಷವನ್ನುಂಟುಮಾಡುತ್ತಿತ್ತು. ನಿನಗೆ ಜ್ಞಾಪಕವಿರಬಹುದು? ಇದೇ ಸ್ಥಳವಲ್ಲವೇ, ನೀನು ರವಿವರ್ಮನು ಎರಡನೆ ಸಲ ಸಂಧಿಸಿದ್ದು? ಎನಲವಳು;—ಹೌದು, ನಾನು ಮೊದಲು ಸಲ ಮುಸಂಜೆಯ ಅರುಣತೆಯಲ್ಲಿ ಅವನಂ ಕಡಲ ತಡಿಯಲ್ಲಿ ನೋಡಿದ ಮೂರು ದಿವಸಗಳ ನಂತರ ಇಲ್ಲಿ ಕಂಡೆನು. ಆ ಮೂರು ದಿವಸಗಳನ್ನು ಕಳೆಯುವದು ಮೂರು ಯುಗದಂತೆ ಕಾಣುತ್ತಿದ್ದವು; ವಸಂತದ ಹಗಲು ಅಧಿಕವಾದಾಗ್ಯೂ ಪುಷ್ಪಮಯವಾದ್ದರಿಂದ ಹ್ಯಾಗೆ ಉಲ್ಲಾಸವಾಗಿರುವದೋ ಹಾಗೆಯೆ ಆ ಮೂರು ದಿವಸಗಳು ಬಗೆಬಗೆಯಾದ ಆಲೋಚನೆಗಳಿಂದ ತುಂಬಿದ್ದವಾದ್ದರಿಂದ, ಆನಂದಕರವಾಗಿದ್ದವು. ಈಗಲು ಅವನ ಮುಖಚಂದ್ರನು ಸಂಧ್ಯಾರಾಗದಿಂದಲು ಅವನ ಹರುಷತೆಯಿಂದಲು, ಕಡಲ ತಡಿಯಲ್ಲಿ, ಕಾಂತಿಸುತ್ತಾ ಇರುವಂತೆ ಸ್ಮರಣೆಗೆ ಬರುವದು. ನೀನು ಹೇಳಿದಂತೆ ಪುನಃ ಸಂಧಿಸಿದ್ದು ಇದೆ ಸ್ಥಳ. ಆಗ ಅವನ ಸ್ವಭಾವವು ಮೊದಲಿಗಿಂತಲು ಉಲ್ಲಾಸವಾಗಿಯು, ಮುಖಕಾಂತಿಯು ಪ್ರಜ್ವಲಿಸುತ್ತಲು ಇತ್ತು. ಆಸ್ಥಾನದಲ್ಲಿ ಅವನ ಮನೋಭಿಪ್ರಾಯ ನನಗೆ ಚನ್ನಾಗಿ ಗೊತ್ತಾಗುತ್ತಿತ್ತು, ಎಂದವಳಂ ಕಾಂತನ ಸಖಿಯು;—ಅವನು ಬಂದು ಮಹಾರಾಜನಿಗೆ ಮುಜರೆಯಂ ಮಾಡುವದಕ್ಕೆ ಬಗ್ಗಿದಾಗ, ನನಗೇನೊ ಅನುಮಾನ ತೋರಿದ್ದರಿಂದ, ನಿಮ್ಮಿಬ್ಬರನ್ನು ನೋಡುತ್ತಿದ್ದೆ. ಅವನ ಕಟಾಕ್ಷವು ರಾಜನಂ ಬಿಟ್ಟು ಆಸ್ಥಾನದಲ್ಲಿ ಕಟ್ಟಿದ್ದ ಪರದೆಯ ಚಿತ್ರದಲ್ಲಿ, ಕಡಲಿಂದೇಳುತ್ತಿರುವ ಲಕ್ಷ್ಮಿಯಂ ನೋಡಿ, ನಂತರ ನಿನ್ನ ಕಡೆ ತಿರುಗಲು ನಿನ್ನ ಕಟಾಕ್ಷವು ಅವುಗಳನ್ನು ಎದುರುಗೊಳ್ಳುತ್ತಿದ್ದವು. ಆದರೆ ವೃದ್ಧ ಸುರೇಂದ್ರನು—ಎನ್ನುವಷ್ಟರಲ್ಲಿ, ನೀರು ಸುರಿಯುತ್ತಿರುವ ಕಣ್ಣುಗಳಂ ಒರಸಿಕೊಳ್ಳುತ್ತಾ;-ಎಲೈ; ಸಖಿಯೆ! ಈ ಬಾಷ್ಪಗಳು, ಅವನಿಗಾಗಿ ಸುರಿಯಬೇಕು. ದೈವಭಕ್ತನಾಗಿಯು, ಕರುಣಾಳುವಾಗಿಯು, ಉದಾರಶ್ರೇಷ್ಠನಾದ ಸುರೇಂದ್ರನಿಗಾಗಿ ಸುರಿಯಬೇಕು. ಆದರೆ ಈಗ ಇವು ಮಾತ್ರ ಅವನಿಗಲ್ಲ ಅವನ ಔದಾರ್ಯಕ್ಕು ಕಾರುಣ್ಯಕ್ಕು ಪ್ರತಿಫಲ ಕೊಡತಕ್ಕವನು ದೇವರೊಬ್ಬನೆ, ದೈವವು ಆತನ ಹೃದಯವನ್ನು ನೋಡಿ, ಅದರಲ್ಲಿ ತುಂಬಿರತಕ್ಕ ವಿಶ್ವಾಸವನ್ನು ಕಂಡು, ನನ್ನ ಹೃದಯವು ಬರಿದಾಗಿರುವದನ್ನು ನೋಡಿ, ಅವನನ್ನು ನನ್ನಿಂದಗಲಿಸಿ ತನ್ನ ಬಳಿಗೆ ಕರೆದುಕೊಂಡಿತು, ಅನ್ನುವಷ್ಟರಲ್ಲಿ ಕಳಿಂಗಳು ಅಲ್ಲಿಗೆ ಬಂದು, ತನ್ನ ಮಗಳಂ ಕುರಿತು,—ಇದುವರೆಗು ಮಹಾರಾಜನ ಸಮಯವಂ ನಿರೀಕ್ಷಿಸಿದ್ದು ವ್ಯರ್ಥವಾಯಿತು. ಅವನ ಸಹಾಯವೆ ಸಿಕ್ಕಲಿಲ್ಲ ಈ ದಿವಸ

ತಪ್ಪಿ ಹೋದರು ಚಿಂತೆಯಿಲ್ಲ. ನಾಳೇನೆ ಪುನಃ ದರಬಾರಾಗುತಂತೆ. ಆಗ್ಯೆ ಬಂದು ಮುಜರೆ ಮಾಡುವಂತೆ ಎಂದು ಹೇಳಿ ಅವಳಂ ಕರೆದುಕೊಂಡು ತನ್ನ ಗೃಹಾಭಿಮುಖನಾದನು.

ಅರಮನೆಯಲ್ಲಿ ಮತ್ತೊಂದು ಕಡೆ ರಾಯನು ಒಬ್ಬ ಅಶ್ವಪಾಲಕನಂ ಕುರಿತು, ನೀನು ಹೇಳುವದು ನಿಜವೆ: ಖಂಡಿತವಾಗಿ ಹೇಳೆನಲು; ಮಹಾಸ್ವಾಮಿ ಇದರಲ್ಲಿ, ಲೇಶವಾದರು ಅನುಮಾನವಿಲ್ಲ. ನಾನು ಜಾಡನ್ನ ಹಿಡಿದುಕೊಂಡು ಹೋಗಿ, ಅವಳಿರತಕ್ಕ ಸ್ಥಳವನ್ನು ಕಡೆಗು ಗೊತ್ತುಮಾಡಿದೆ. ಅವಳು ಪಾಟಲಿಪುರದ ಬಳಿ ಇರುವ ಸ್ತ್ರೀಸನ್ಯಾಸ ಮಠದಲ್ಲಿರುವಳು. ಪೂರ್ವ್ವ ಈ ಊರಲ್ಲಿ ನೀಚವೃತ್ತಿಯಲ್ಲಿದ್ದ ಆಕರ್ಷಣಿಯೆಂಬ ಕಾಯಿತಿಯೊಬ್ಬಳು ಆ ಮಠಕ್ಕೆ ಸೇರಿದ ವೈದ್ಯಶಾಲೆಯಲ್ಲಿ ಖಾಯಿಲೆಯಾಗಿ ಬಿದ್ದಿರುವಳು. ಅವಳು ಕ್ಷೈರವೇಯ ಪೋಷಣೆಯಲ್ಲಿರುವಳು. ಆಕರ್ಷಿಣಿಯು ತಾನು ಸಾಯುತ್ತೇನೆಂದು ತಿಳಿದು, ಮಾತನಾಡಬೇಕೆಂದು ತನ್ನ ಬಂಧುಜನಗಳನ್ನು ಕರೆಸಿಕೊಂಡಿದ್ದಳು. ಅವರ ಮುಖಾಂತ್ರ ನನಗೆ ಈ ವರ್ತಮಾನ ಗೊತ್ತಾಯಿತು. ಇನ್ನು ನಾಲ್ಕೈದು ದಿವಸದಲ್ಲಿ, ಮನೋಸ್ಥೈರ್ಯದ ಅವಧಿ ಪೂರೈಸಿ ಕ್ಷೈರವೇಯು ಆಶ್ರಮವಂ ತೆಗೆದುಕೊಂಡು ಕಾವಿ ಧರಿಸುವಳೆನಲು; ರಾಯನು:—ಹಾಗಾದರೆ ಈಗಲೆ ಹೋಗಿ, ರಾಜಪ್ಪಸೆಟ್ಟಿಯನ್ನು ಈ ದಿವಸ ಸೂರ್ಯ್ಯಾಸ್ತಮಯವಾದ ಮೇಲೆ ಬಂದು, ನನ್ನನ್ನು ಕಾಣುವಂತೆ ಹೇಳು. ನನಗೆ ಒಬ್ಬ ಜಂಗಮನ ಉಡುಪುತೊಡಪುಗಳನ್ನು ತೆಗೆದುಕೊಂಡು ಬಾರೆಂದು ಅವನಂ ಕಳುಹಿಸಿ ಅಂತಃಪುರಾಭಿಮುಖನಾದನು.

ಇತ್ತಲಾ ರಾಮವರ್ಮನು ರವಿವರ್ಮನಂ ಕೂಡಿ ಪಾಟಲಿಪುರದ ಸ್ತ್ರೀಸನ್ಯಾಸ ಮಠವಂ ಸೇರಿ ಆ ಮಠಾಧಿಕಾರಿಯಾದ ತನ್ನ ಚಿಕ್ಕಮ್ಮನನ್ನು ಕಂಡು ಅವಳಿಂದ ಕ್ಷೈರವೇಯ ಸ್ಥಿತಿಯನ್ನು ತಿಳಿದುಕೊಂಡು ಸಂತೋಷಭರಿತನಾಗಿ:—ಎಲೈ ತಾಯಿಯೆ ಹಾಗಾದರೆ ಅವಳ ಸ್ವಭಾವವೆ ವ್ಯತ್ಯಾಸವಾಗಿ ಪರಲೋಕದ ಕಡೆ ಮಾತ್ರ ದೃಷ್ಟಿಯಿಟ್ಟು ರಾಯನಲ್ಲಿ ಅವಳಿಗಿದ್ದ ಮೋಹಬಂಧೆಯಿಂದ ಬಿಡುಗಡೆಯಾಗಿರುವಳೆ ಎನಲವಕ್ಕನಳು:—ಹೌದು ಅವಳು ನಮ್ಮ ಮಠವನ್ನು ಪ್ರವೇಶಿಸಿದ ಒಂದು ಪಕ್ಷದೊಳಗಾಗಿ ಮುಂಗಾರಿನ ಮೇಘಾಡಂಭರವು ವಾಯುವಿನಿಂದ ಕರಗಿಹೋಗುವಂತೆ ಅವಳ ಮನಸ್ಸೆಲ್ಲ ವ್ಯತ್ಯಾಸವಾಯಿತು. ಇನ್ನು ನೀನದರ ಆಲೋಚನೆಯನ್ನು ಬಿಡುವವನಾಗು. ಅವರ ನಿನ್ನ ಸಂಗತಿಯನ್ನು ಹೇಳುವನಾಗು. ಇನ್ನು ಮೇಲೆ ನೀನೇನು ಮಾಡುತ್ತೀಯೆ. ಇನ್ನು ಮುಂದಕ್ಕೆ ಎಲ್ಲಿಗೆ ಹೋಗುವೆ. ನಿರ್ಬಂಧಕ್ಕೆ ಸಿಕ್ಕಿದ್ದವನು ಈಗ ದೈವಯೋಗದಿಂದ ಬಿಡಿಸಿಕೊಂಡು ಬಂದಿ

ರುವೆ. ಇದರಿಂದ ನೀನು ಮುಂದೆಯೂ ಎಲ್ಲಾದರು ಸಮುದ್ರವನ್ನು ದಾಟಿಯಾದರು ಹೋಗಿ ನಿರ್ಬಾಧಕವಾಗಿರುತ್ತೀಯೆ ಎಂಬದಾಗಿ ನಾನು ಸಂತೋಷವಾಗಿರಬಹುದೆ ಹೇಳುವ ನಾಗೆನಲು ರಾಮವರ್ಮನು;-

ಹಾಗೆ ಎಂದಿಗು ಮಾಡತಕ್ಕನನಲ್ಲ. ಈ ಕೈತವೆಗೋಸ್ಕರ ನಾನು ಬೆತಿದ್ದೆನು. ಇನ್ನುಮೇಲೆ ಅವಳಿಗೇನು ಭಯವಿಲ್ಲವಾದ್ದರಿಂದ ನನ್ನಲ್ಲಿ ಮನಸ್ಸು ನಿರಾತಂಕವಾಗಿರುವದು. ಇನ್ನೀ ನಿರ್ಬಂಧಕ್ಕೆ ಸಿಕ್ಕಲು ಶಂಕಿಸತಕ್ಕವನಲ್ಲವೆನ್ನುವದಂ;-

ರವಿವರ್ಮನವಂ ಕೇಳಿ;-ಇವನು ತನ್ನ ಕ್ಷೇಮಾರ್ಥವಾಗಿ ಮರೆಮಾಚಿಕೊಂಡಿರಬೇಕೆಂಬುವದು ನಿಂದಕವಾಗಿ ತಿಳಿದಿರುವನು, ತನ್ನ ನಿರ್ಮಲವಾದ ಘನತೆಗೆ ಕುಂದಕ ಬರುವಂತಿದ್ದರು ಇವನೀ ಕೆಲಸ ಮಾಡುವದಿಲ್ಲ. ನಾನು ಸಹ ಇವನ ಸಂಗಡ ರಾಜಾಸ್ಥಾನಕ್ಕೆ ಹೋಗುವಂತಿದ್ದರೆ ಚೆನ್ನಾಗಿತ್ತು. ನಾನು ಯಾರನ್ನು ಕುರಿತು ಈಗ ಹೋಗುತ್ತಿರುವೆನೊ ಆಕೆ ಸಹ ರಾಯನ ಸಭೆಯನ್ನು ಕುರಿತು ತೆರಳುತ್ತಿದಾಳೆಂದು ವರ್ತಮಾನ ಕೇಳಿರುವೆನು. ಆದರೆ ನಾನು ಚಂದ್ರನಗರದಲ್ಲಿ ಮುಖವನ್ನೆ ತೋರಿಸಕೂಡದು. ಅಲ್ಲಿ ಕೆಲವು ಕಿರಾತಕರಾದ ಬೌದ್ಧವರ್ತಕರಿರುವರು ಅವರು ನನ್ನನ್ನು ಕಂಡರೆ ಬಿಡತಕ್ಕವರಲ್ಲ. ನನ್ನ ಪೂರ್ವಾಚರಣೆಯು ನನ್ನನ್ನು ಅವರ ಕೈಗೆ ಸಿಕ್ಕಿಸಿರುವದು. ನಾನಿರತಕ್ಕ ಜಾಡು ಕೊಂಚವುಷ್ಟಗೆ ಅವರಿಗೆ ಗೊತ್ತಾದರೆ ಅವರು ನನ್ನನ್ನು ಜೀವದೊರಸೆ ಬಿಡತಕ್ಕವರಲ್ಲ, ಆದುದರಿಂದ ಎಲೆ ತಾಯಿಯೆ ನಾನು ಈ ಸ್ಥಳದಲ್ಲೆ ಗೋಪ್ಯವಾಗಿ ಇರಬೇಕೆಂಬ ಅಭಿಲಾಷೆಯುಳ್ಳವನಾಗಿದೇನೆನನಲು;-

ಅದನ್ನು ಕೇಳಿ ಮಠಾಧಿಕಾರಿಯು ನಮ್ಮ ರಾಮವರ್ಮನ ಸ್ನೇಹಿತರು ಯಾರಿದ್ದರು ನನಗೆ ಸಂತೋಷವೆ ಆದರೆ ನೀವು ಇಲ್ಲಿಗೆ ಬಂದದ್ದು ಬಹಳ ಒಳ್ಳೇದೆ ಆಯಿತು. ಅಲ್ಲಿ ದುರದೃಷ್ಟಕ್ಕೆ ತಗಲಿ ಬಿದ್ದ ನಾರಿಯು ಪ್ರಾಣಬಿಡುತ್ತಾ ಇರುವಳು. ಅವಳು ನಿಮ್ಮನ್ನು ಕಂಡು ಮಾತನಾಡಬೇಕೆಂದು ಸದಾ ಹಂಬಲಿಸುತ್ತಿರುವಳು, ನಿಮ್ಮ ವಿಷಯವಾದದೊಂದು ರಹಸ್ಯ ಅವಳಿಗೆ ತಿಳಿದಿದೆ ಎಂದು ಅದನ್ನು ನಿಮಗೆ ತಿಳಿಸಿ ಪ್ರಾಣಬಿಡಬೇಕೆಂಬದಾಗಿದಾಳೆನಲು ರವಿವರ್ಮನು ಅವಳ ಹೆಸರೇನೆನಲದಕ್ಕವಳು ಅವಳನ್ನು ನಮ್ಮ ಮಠದಲ್ಲಿ ದರ್ವಿಣಿ ಎಂದು ಕರೆಯುವೆವು. ಆದರೆ ಅವಳ ಪೂರ್ವದ ಹೆಸರು ಆಕಷಿಣಿ ಎಂದುದಕೆ ರವಿವರ್ಮನು ಅವಳನ್ನು ನಾನು ಚೆನ್ನಾಗಿ ಬಲ್ಲೆನು, ಆಕೆ ಇಲ್ಲಿಗೆ ಸ್ವೈ ಬಂದಳೆನಲು ಮಠಾಧಿಕಾರಿಯು;-

ಈಗ್ಗೆ ಸುಮಾರು ಆರು ತಿಂಗಳುಗಳ ಕೆಳಗೆ ಕೆಲವು ಒರಟು ಜನರು ಆಕೆಯನ್ನೊಂದು ಡೋಲಿಯಲ್ಲಿ ಕೂರಿಸಿ ಇಲ್ಲಿಗೆ ಕರೆದುಕೊಂಡು ಬಂದರು, ಅವರು ಆಕೆಯ ಅನುಬಂಧಿಗಳಂತೆ ಕಾಣುತ್ತಿದ್ದರು. ಅವಳು ಯಾವದೋ ಒಂದು ಜಗಳದಲ್ಲಿ ತುಂಬ ಘಾಯಹೊಂದಿ ನಿತ್ರಾಣದಿಂದ ಸಂಕಟಪಡುತ್ತಿದ್ದಳು, ಅವಳನ್ನು ನಮ್ಮ ಮಠದ ವೈದ್ಯಶಾಲೆಯಲ್ಲಿ ಬಿಟ್ಟು ಹೋದರು. ಹೀಗೆ ಬಂದವರನ್ನೆಲ್ಲ ಉಪಚರಿಸತಕ್ಕದ್ದು ನಮ್ಮ ಕರ್ತವ್ಯವಾದ್ದರಿಂದ ಅವಳನ್ನಿಲ್ಲಿ ಇಟ್ಟುಕೊಂಡೆವು. ಆಗಿನಿಂದ ಅವಳನ್ನು ಅಹೋರಾತ್ರಿಯು ಕೈರವೆ ನೋಡಿಕೊಳ್ಳುತ್ತಿದ್ದಾಳೆ. ಕೈರವೆ ಮಾಡಿದ ಚಿಕಿತ್ಸೆಗಳಿಂದ ಅವಳ ಶರೀರಕ್ಕೇನೂ ಗುಣ ತೋರದೆ ಇದ್ದಾಗ್ಯೂ ಅವಳ ಉಪದೇಶದಿಂದ ಇವಳಿಗೆ ಮನಶ್ಶುದ್ಧಿಯಾಗಿ ಸ್ವಸ್ಥವಾಗಿರುವಳು. ತನಗೆ ಕಾಲ ಸಮೀಪಿಸಿ ಬಂದಿದೆ ನಿಮ್ಮ ವಿಷಯವಾದ ಒಂದು ರಹಸ್ಯ ನಿಮಗೆ ತಿಳಿಸಿ ಪ್ರಾಣಬಿಡಬೇಕೆಂದು ಹಂಬಲಿಸುತ್ತಿದ್ದಾಳೆಂದು ಹೇಳಿ, ರಾಮವರ್ಮನಕಡೆ ತಿರುಗಿ ನೀನು ಇಲ್ಲಿ ಇರುವನಾಗು, ಕೈರವೆ ಇಲ್ಲಿಗೆ ಬರುತ್ತಾಳೆ, ಅವಳಸಂಗಡ ನೀನು ಮಾತನಾಡಬಹುದೆಂದು ಹೇಳಿ ಅವನನ್ನು ಅಲ್ಲಿ ಬಿಟ್ಟು ರವಿವರ್ಮನಂ ಕರೆದುಕೊಂಡು ಆ ರೋಗಿ ಇದ್ದ ಒಳಗೆ ಹೋದಳು.

ರಾಮವರ್ಮನು ಕೈರವೆಯು ಬರುವದನ್ನು ನಿರೀಕ್ಷಿಸುತ್ತ;—ನಾನು ಪೂರ್ವದಲ್ಲಿ ಕೈರವೆಯಂತೆ ಮನೋಹರಳಾದ ಚಿಕ್ಕ ವಯಸ್ಸಿನವರು ಸನ್ಯಾಸಾಶ್ರಮವನ್ನು ತೆಗೆದುಕೊಂಡು, ರೂಪಿಗೆ ಲಾವಣ್ಯವನ್ನು ಕೊಡತಕ್ಕ ಕೇಶಗಳನ್ನು ಕತ್ತರಿಸಿ ಹಾಳುಮಾಡುವದನ್ನು ಕಂಡರೆ ಬಹಳ ವ್ಯಸನಪಡುತ್ತಿದ್ದೆನು. ಈಗ ಆ ಸ್ವಭಾವವೆ ವ್ಯತ್ಯಾಸವಾಗಿರುತ್ತೆ. ಗಿಡಗಳನ್ನು ಪುಷ್ಪಗಳು ಶೋಭಾಯಮಾನ ಮಾಡುತ್ತಿದ್ದಾಗ್ಯೂ ಪುಷ್ಪಗಳು ಗಿಡದಮೇಲೆ ಕೊಳತುಹೋಗುವದಕಿಂತ, ಜನರು ಕೀಳುವದು ಉತ್ತಮವಾಗಿ ಕಾಣುತ್ತೆ. ಕೈರವೆಯು ತನ್ನ ರೂಪಾತಿಶಯವನ್ನು ತೋರಿಸತಕ್ಕವುಗಳನ್ನೆಲ್ಲ ಇಟ್ಟುಕೊಂಡು ದುರ್ಮಾರ್ಗಾವಲಂಬನೆಯಿಂದ ಕೆಟ್ಟುಹೋಗುವದಕಿಂತಲು, ಬಾಲಾದಿಗಳಿಂದ ರೂಪುಕೆಡಿಸಿಕೊಂಡು ಕಾವಿ ವಸ್ತ್ರಗಳನ್ನು ಧರಿಸಿಕೊಂಡು ಯೋಗ್ಯಳಾಗಿರುವದೆ ಉತ್ತಮವಾಗಿ ತೋರುತ್ತೆ. ನಾನು ಮಾಡಿದ ಕೆಲಸ ಉತ್ತಮವಾಯಿತೆಂದುಕೊಳ್ಳುತ್ತಿರುವಷ್ಟರಲ್ಲಿ ಕೈರವೆಯು ರೋಗಿಯಿದ್ದ ಒಳಗೆ ಬಂದು ಅವನಂ ಕಂಡು ಆನಂದಬಾಷ್ಪಗಳಂ ಸುರಿಸುತ್ತಾ,

ಸ್ವಾಮಿ, ಈ ದಿವಸ ತಾವು ದಯಮಾಡಿಸಿದ್ದು ನನಗೆ ಕನಕಾಭಿಷೇಕ ಮಾಡಿಸಿದಷ್ಟು ಸಂತೋಷವಾಗಿರುವದು ಇದಕ್ಕಿಂತ ಅಧಿಕವಾದ ಸಂತೋಷವು ಭೂಲೋಕ

ದಲ್ಲಿ ನನಗೆ ದೊರಕಲಾರದು. ನಾನು ಆಶ್ರಮವಂ ತೆಗೆದುಕೊಂಡು, ಪುರುಷರ ಮುಖಾವಲೋಕನವಂ ಮಾಡುವದು, ತಪ್ಪಿಹೋಗುವದಕ್ಕೆ ಮುಂಚೆಯೆ, ತಮ್ಮನ್ನು ನೋಡಬೇಕೆಂದು ಪ್ರಾರ್ಥಿಸುತ್ತಿದ್ದು, ಇದುವರಿಗು ತಾವು ಬರದೆ, ಈ ದಿವಸ ನಾನು ಆಶ್ರಮವನ್ನು ತೆಗೆದುಕೊಳ್ಳಬೇಕೆಂದು ಗೊತ್ತಾಗಿರುವದರಿಂದ, ನನ್ನ ಪ್ರಾರ್ಥನೆಯು ನೆರವೇರುವದಿಲ್ಲವೆಂಬದಾಗಿ ತಿಳಿದುಕೊಂಡಿದ್ದೆ. ಈಗ ತಾವು ದಯಮಾಡಿಸಿದ್ದರಿಂದ ಭೂಸಂಬಂಧವಾದ ಅಭಿಲಾಷೆಯೆಲ್ಲ ನೆರವೇರಿದಂತಾಯಿತು. ಅಜ್ಞಾನಕ್ಕಾಸ್ಪದಳಾಗಿ, ಕೆಟ್ಟುಹೋಗುತ್ತಿದ್ದ ನನ್ನನ್ನು, ಸಮಯದಲ್ಲಿ ಕಾಪಾಡಿ ಸನ್ಮಾರ್ಗವನ್ನು ತೋರಿಸಿದ ಪರಮಮಿತ್ರರೆ! ನಿಮ್ಮ ಸಹಾಯದಿಂದ ನನಗುಂಟಾಗಿರುವ ಸಂತೋಷದಲ್ಲಿ ನೀವು ಭಾಗಿಗಳಾಗಿರಿ. ಇಂದಿಗೆ ನಿಮ್ಮ ಕೆಲಸವಾಯಿತು. ನನಗಾಗಿ ನೀವು ಪಟ್ಟ ಶ್ರಮಕ್ಕೆ ಪ್ರತಿಫಲವುಂಟಾಗಿರುವದು. ನಿಮ್ಮಿಂದ ನಾನು ಕೃತಾರ್ಥಳಾದೆನೆಂದವಳಂ ಕುರಿತು ರಾಮವರ್ಮನು:—

ಎಲೈ ನಾರೀಶಿರೋಮಣಿಯಾದ ಕ್ರೈಸ್ತವೆಯೆ! ನನಗು ಇದರಿಂದ ಸಂತೋಷ ತಲೆದೋರುತ್ತಿರುವದು; ಆದರು ಸಂಸಾರದಲ್ಲಿ ಮಗ್ನರಾದ ನಮ್ಮಂತಾವರಿಗೆ ಇದರಿಂದ ವ್ಯಸನತೋರದೆ ಇರುವದಿಲ್ಲ. ಆದರೆ ಸ್ವರ್ಗಸುಖವೆ ಯಾವಾಗಲು ಸರ್ವೋತ್ಕೃಷ್ಟವಾದದ್ದು. ನಿನ್ನ ಹೃದಯವು ಯಾವಾಗಲು ಸನ್ಮಾರ್ಗಾವಲಂಬನೆಂಗೈಯುತ್ತಲಿರ್ದುದಾದ್ದರಿಂದ ನಿನಗೆ ಜಾಗ್ರತೆ ಇದರಲ್ಲಿ ಹರುಷವುಂಟಾಯಿತೆನಲವಳು:—

ಸ್ವಾಮಿ! ಇನ್ನು ಈ ಭೂಸಂಬಂಧವಾದ ವ್ಯಾಮೋಹವನ್ನು ಬಿಡುವೆನಾಗಿ. ಇದರಿಂದ ನನಗೇನು ಪ್ರಯೋಜನ ತೋರುವಂತೆ ಕಾಣುವದಿಲ್ಲ. ನನಗೆ ಯಾವಮಾರ್ಗವನ್ನು ತೋರಿಸಿದರೊ ಅದರಲ್ಲಿ ದೃಷ್ಟಿಯಿಡುವೆನಾಗಿ. ಮುಂದೆ ಕಾಣಿಸುತ್ತಿರುವ ಸ್ವರ್ಗಪಥದಲ್ಲಿ ಮನಸ್ಸನ್ನಿಡುವೆನಾಗಿ. ನಾನು ಈಗ ಆ ಮಾರ್ಗದಲ್ಲಿ ಪ್ರತಿದಿವಸವು ನಡಿಯುತ್ತ, ಅದರ ಸಮೀಪವನ್ನೈದಿ ಸ್ವರ್ಗಕಾಂತಿಯಿಂದ ನನ್ನ ಹೃದಯವು ಪ್ರಜ್ವಲಿಸುತ್ತಿರುವಂತೆ ಕಾಣುತ್ತಿದೆ. ನನ್ನ ದೃಷ್ಟಿಗೆ ಭೂಲೋಕವು ಮರೆಯಾಗುತ್ತಿರುವದು. ಸ್ವರ್ಗದ ಬಾಗಿಲ ಬಳಿ ದೇವತೆಗಳು ಕೈಯನ್ನು ನೀಡಿ ನನ್ನನ್ನು ಬಾರೆಂದು ಕರೆಯುತ್ತಿರುವಂತೆ ಕಾಣಿಸುತ್ತಿರುವದು. ಮನಸ್ಸಿನಲ್ಲಿ ಹರುಷವು ಉಕ್ಕುತ್ತಿರುವದು. ಮುಂದೆ ನನಗೆ ಶಾಶ್ವತವಾದ ಸುಖವು ತೋರುತ್ತಿರುವದೆನಲು, ರಾಮವರ್ಮನು:—

ಹಾಗಾದರೆ ಇನ್ನು ನಿನಗೆ ಭೂಮಿಯಲ್ಲು ಮುಂದೆ ಸುಖವೆ ಇರುವದು. ಇನ್ನೀ ಭೂಮಿಯಲ್ಲಿರುವವರಿಗು ನಿನ್ನ ಮುಖವನ್ನು ನಾನು ನೋಡುವದಕ್ಕಾಗುವದಿಲ್ಲ

ಮುಂದೆ ಈ ಶರೀರ ನಿರ್ಬಂಧದತಪ್ಪಿಹೋದ ನಂತರ ನನ್ನ ಆತ್ಮವು, ನೀನು ದೇವತೆಗಳಿಗೆ ಸಮನಾಗಿ ಸ್ವರ್ಗದಲ್ಲಿರುವದನ್ನು ನೋಡಲೆಂದು ಹಾರೈಸುತ್ತಿರುವೆನೆನ್ನುವಷ್ಟರಲ್ಲಿ, ಕಮಲಿನಿಯು:—ಸ್ವಾಮಿ! ಹೊತ್ತಾಯಿತು ನನ್ನನ್ನು ಮಠಾಧಿಕಾರಿಗಳು ಕೂಗುತ್ತಿರು ವರು, ನನಗೆ ಅಪ್ಪಣೆಯಂ ಪಾಲಿಸಬೇಕೆನಲು, ರಾಮವರ್ಮನು:—

ಇನ್ನು ನೀನು ಅಗತ್ಯವಾಗಿ ಹೋಗಬಹುದು. ನಾನು ಸಂಸಾರದಲ್ಲಿ ಸಿಕ್ಕಿ ಬದ್ಧ್ಯವಡುತ್ತಿರುವೆನು, ನೀನು ಯೋಗಾರೂಢಳಾಗಿ, ಸಚ್ಚಿದಾನಂದಸ್ವರೂಪವನ್ನು ಧ್ಯಾನಿ ಸುತ್ತಿರುವಾಗ ನನ್ನನ್ನು ಮರೆಯಬೇಡವೆನಲವಳು:—ಸ್ವಾಮಿ! ನಮ್ಮಂತಾವರಿಗೆ ಅಹೋ ರಾತ್ರಿಯಲ್ಲು ಯೋಗಾರೂಢರಾಗಿ ದೈವಸ್ಮರಣೆಯಂ ಮಾಡುವದರಿಂದುಂಟಾಗುವ ಪದವಿ ಯು ನನ್ನನ್ನು ಈ ಸ್ಥಿತಿಗೆ ತಂದ ತಮ್ಮಂತ ಉಪಕಾರಿಗಳಿಗೆ, ಸಂಸಾರದಲ್ಲು ಉಂಟಾಗದೆ ಇರುವದೆ ಎಂದು ಅವನಪ್ಪಣೆಯಂ ತೆಗದುಕೊಂಡು ಮಠವಂ ಪ್ರವೇಶಿಸಿದಳು.

ರಾಮವರ್ಮನು:—ಇವಳೀಗಿರತಕ್ಕ ಸ್ಥಿತಿಯನ್ನು ನೋಡಿದರೆ, ದೇವತೆಗಳ ಹೊರ್ತು ಮನುಷ್ಯರು ಇವಳನ್ನು ನೋಡಲು ಅರಹರಲ್ಲದವರಾಗಿರುತ್ತಾರೆ. ನಾನು ದೈವಸ್ಮರಣೆಯಂ ಮಾಡುವಾಗಲೆಲ್ಲ, ಇವಳ ಮುಖಕಮಲವಂ ನೆನಸಿಕೊಂಡು ಮಾಡಿದರೆ ಅದು ಸಾರ್ಥಕವಾಗುವದು. ಇವಳೇನೊ ಇನ್ನು ಕೃತಾರ್ಥಳಾದಳು. ಇನ್ನೀ ಭೂ ಲೋಕದಲ್ಲಿ ನನ್ನ ಮುಂದಿನ ಪಾಡನ್ನು ಆಲೋಚಿಸಬೇಕಾಗಿರುವದು. ಈ ಭೂಪಥವು ಕಷ್ಟಮಯವಾಗಿರುವದು. ಎಲ್ಲಿ ನೋಡಿದರಲ್ಲಿ ವೃಕ್ಷಗಳಿಂದಲು ಅದರ ಕೆಳಗಣ ಪೊ ರನಿಂದಲು ಕೂಡಿ ಮಾರ್ಗವು ಸುಪಥವಾಗಿರುವದಿಲ್ಲ, ಒಂದುಕಡೆ ದಾರಿಗಡ್ಡಲಾಗಿ ಮು ಳ್ಳಿನ ಪೊದರುಗಳಿರುವವು, ಮತ್ತೊಂದು ಕಡೆ ಅಗಾಧವಾದ ಚಂಡಮಾರುತನಿಂದ ಮು ಯಲ್ಪಟ್ಟ ಘನವೃಕ್ಷಗಳು ಅಡ್ಡಲಾಗಿ ಬಿದ್ದಿರುವವು. ಇನ್ನೊಂದು ಕಡೆ ಕಾಡುಗಿಚ್ಚಿ ನಿಂದ ಸುಡುತ್ತಿರುವ ತೃಣರಾಸಿ ಇರುವದು. ಎಷ್ಟು ಜಾಗರೂಕರಾಗಿ ಇವುಗಳ ಬಾ ಯನ್ನು ತಪ್ಪಿಸಿಕೊಂಡು ನಡೆದರು ಮುಂದಿನ ಮಾರ್ಗವೆ ಸಿಕ್ಕದೆ ಇರುವದು. ಸ್ವಗ ಕಾಂತಿಯಿಂದ ಸ್ವರ್ಗಪಥದಲ್ಲಿ ಹೋಗುವವರಿಗಿಂತ ಕಂಟಕಗಳೊಂದು ಇರುವದಿಲ್ಲವೆನು ವವನ ಬಳಿಗೆ ಆರ್ದ್ರಹೃದಯನಾಗಿ ಬಂದ ರವಿವರ್ಮನಂ ಕುರಿತು:—

ಇದೇನು! ನಿನ್ನ ಕಪೋಲದಮೇಲೆ ಪ್ರವಾಹ ಹರಿದಂತೆ ಕಾಣುತ್ತೆನಲವನು:— ಇದೇನಾಶ್ಚರ್ಯ; ಆಕರ್ಷಿಯು ಈಗತಾನೆ ನನ್ನ ಬಾಹುಗಳ ಮಧ್ಯದಲ್ಲಿ ಪ್ರಾಣವನ ಬಿಟ್ಟಳು. ಅವಳು ನನ್ನಂತ ಪಶ್ಚಾತ್ತಾಪ ಪಡತಕ್ಕ ಯೋಗ್ಯಳಾಗಿದ್ದವಳಲ್ಲದೆ; ಬಾ

ಹೃದಯಳಾಗಿ, ಅನುತಾಪದೊಂದಿಗೆ ಹರುಷೋಲ್ಲಾಸದಿಂ ವಸಂತಕಾಲದ ಸಂಧ್ಯಾರುಣ ಮರೆಯಾಗುವಂತೆ ನೋಡುವವರಿಗೆ ವಿಸ್ಮಯವನ್ನುಂಟುಮಾಡುತ್ತ, ಅಸುವಂನೀಗಿದಳು. ನಾನು ಇಲ್ಲಿಗೆ ಆಕಸ್ಮಿಕವಾಗಿ ಬಂದದ್ದು ಬಹಳ ಒಳ್ಳೇದಾಯಿತು. ಅದು ಇವಳ ಅವಸಾನಕಾಲದಲ್ಲಿವಳಿಗೆ ಬಹಳ ಸಂತೋಷವನ್ನುಂಟುಮಾಡಿತೆನಲು ರಾಮವರ್ಮನು;—ನೀನು ಬಂದಿದ್ದರಿಂದ ಅವಳಿಗೆ ಹೀಗಾಗುವದಕ್ಕೆ ಕಾರಣವೇನು ಹೇಳೆನಲವನು;—

ಅವಳ ಹೃದಯವನ್ನೆರಡು ರಹಸ್ಯಗಳು ಬಾಧಿಸುತ್ತಿದ್ದವು. ಅದರಲೊಂದು ನನ್ನ ಪೂರ್ವಾವಸ್ಥೆಯಲ್ಲಿ ನನ್ನಲ್ಲವಳಿಗೆ ಅಂತರಂಗದಲ್ಲಿದ್ದ ವಿಶ್ವಾಸವನ್ನು ನನ್ನ ಸಂಗಡ ಹೇಳಬೇಕೆನ್ನುವದು. ಇದನ್ನು ನನ್ನ ಸಂಗಡ ಈಗ ಹೇಳಿದ್ದರಿಂದ ಅವಳಿಗೆ ಬಹಳ ಸುಖ ತೋರಿತು. ಮತ್ತೊಂದು ವಿಜಾತೀಯವಾದದ್ದು. ಅದೇನೆಂದರೆ;—ಪೂರ್ವದಲ್ಲಿ ನಾನು ಮತ್ತು ದುರಾತ್ಮನಾದ ಹಯಗ್ರೀವನು ಗವಿಯಲ್ಲಿ ಮಲ್ಲಯುದ್ಧವಂ ಮಾಡಿದಾಗ ಆ ಹಯಗ್ರೀವನು ಅವಳನ್ನು ಹಿಂದಿನಿಂದ ತಿವಿದ ಕಾಲದಲ್ಲಿ ನಡೆದ ವಿಷಯವು. ನಮ್ಮ ಸಿಂಹಳದ್ವೀಪದಿಂದ ವಿದ್ಯುತ್ತುಯೆಂಬ ಹಡಗಿನಲ್ಲಿ ತಂದ ನನ್ನ ಭಾಗ್ಯವು, ನೀನು ಅಟ್ಟಿಸಿಕೊಂಡು ಹೋದ ಇಬ್ಬರು ನಾವಿಕರೊಂದಿಗೆ ಸಮುದ್ರದ ಪಾಲಾಯಿತೆಂದು ತಿಳಿದಿದ್ದ ಭಾಗ್ಯವೆಲ್ಲ, ಇನ್ನು ಆ ಗವಿಗಳಲ್ಲಿ ಅವಿಸಲ್ಪಟ್ಟು ಮನುಷ್ಯರ ಕೈಗೆ ಸಿಕ್ಕುವಂತಿದೆಯೆನಲವನು, ಹಾಗಾದರೆ ನಿನ್ನ ಅದೃಷ್ಟವು ನವೀನವಾಯಿತೆನಲು ರವಿವರ್ಮನು;—

ಇದು ಸಿಕ್ಕಿದ್ದರಿಂದ ಅನೇಕ ಕೆಲಸವಾದಂತಾಯಿತು. ಇದು ಹೋಗಿದ್ದದ್ದರಿಂದ ಆ ನೀಚರಾದ ಬೌದ್ಧಪಿಶಾಚಿಗಳ ಕಾಟ ನನಗುಂಟಾಗಿತ್ತು. ಇದರಿಂದ ನಾನು ಅವರಿಗೆ ಹಂಗಿಗನಾಗಿರುವದನ್ನು ತಪ್ಪಿಸಿಕೊಳ್ಳುವದು ಮಾತ್ರವಲ್ಲದೆ; ಮತ್ತಿನ್ಯಾರು ಸಾಲಗಾರರಿದ್ದರು ಅವರ ಸಾಲವನ್ನೆಲ್ಲ ತೀರಿಸಿಕೊಳ್ಳಬಹುದು. ಇದೆಲ್ಲಕಿಂತ ಅತಿಶಯವಾದ ಮತ್ತೊಂದು ಫಲವಿದರಿಂದುಂಟಾದಹಾಗಾಯಿತು. ಇದರಿಂದ ಈಗ ನಾನು ನಿರ್ಭೀತನಾಗಿ ಚಂದ್ರನಗರಕ್ಕೆ ಹೋಗಿ, ಪದ್ಮಿನಿಯಂ ಬಹಿರಂಗವಾಗಿ ಕಂಡು ನಾನು ಈಗ ಮಾಡಬೇಕಾಗಿರುವ ಕೆಲಸವನ್ನು ಸಾವಕಾಶವಿಲ್ಲದೆ ಮಾಡಬಹುದೆನ್ನುವನಂ, ಕುರಿತು ರಾಮವರ್ಮನು;—

ನೀನು ಈ ದಿವಸವೆ ಹೋಗುವನಾಗು. ನಾನು ನಾಳೆ ದಿವಸ ಬರುತ್ತೇನೆ. ನಮ್ಮ ಚಿಕ್ಕಮ್ಮನ ದಾಕ್ಷಿಣ್ಯಕ್ಕಾಗಿ ಈ ಮಠದಲ್ಲಿ ನಾನು ಒಂದು ದಿವಸವಾದರೂ ಇರಬೇಕೆಂದವನಂ ಬೀಳ್ಕೊಟ್ಟು ಮಠವಂ ಪ್ರವೇಶಿಸಿದನು.

ಅತ್ತಲಾ ಪಾಟಲೀಪುರದ ಸ್ತ್ರೀಸನ್ಯಾಸಮಠದ ಬಳಿ ಇರತಕ್ಕ ಪರ್ವತಗಳ ಮಧ್ಯದ ಬಲರಾಮ ಕಣಿವೆಯಲ್ಲಿ ರಾಚಪ್ಪಸೆಟ್ಟಿಯು ನಾಗಪ್ಪಸೆಟ್ಟಿಯಂ ಕುರಿತು; ಚಂದ್ರೋದಯವಿದ್ದಾಗ್ಯ ಬಂಡೆಗಳ ನೆರಳು ಬಹುದೂರದ ವರೆಗೆ ಹೋಗುತ್ತಿರುವದ ರಿಂದ ನಾವಿಲ್ಲಿರುವದು ನಮ್ಮ ಸಮೀಪದಲ್ಲಿ ಹೋಗುವವರಿಗು ಗೊತ್ತಾಗುವದಿಲ್ಲವೆನಲ ವನು,—ಆದರು ನಾವು ಇಬ್ಬರುಮಾತ್ರವಿರುವೆವು. ಆದುದರಿಂದ ಇಬ್ಬರಿಗಿಂತಲು ಮೂರು ಜನವಿರುವದು ಉತ್ತಮವಲ್ಲವೆ? ಭೋಗಪ್ಪಸೆಟ್ಟಿಯು ಬಾರದೆಹೋದರೆ ತೊಂದರೆಯಾ ಗುತ್ತೆ. ಪ್ರಾಯಶಃ ಅವನು ಬಾರದೆ ಇರಲಾರ, ಮತ್ತೊಂದುಸಲ ಶಿಳ್ಳುಹಾಕಿ ನೋಡು ತ್ತೇನೆಂದು ಶಿಳ್ಳುಹಾಕಿದನು.

ಅಷ್ಟರಲ್ಲಿ ಭೋಗಪ್ಪಸೆಟ್ಟಿಯು ಬಂದು ಅವರಂ ಕಂಡು ಇದೇನು ನೀವು ಈ ಸ್ಥಳದಲ್ಲಿ ಈ ವೇಳೆಯಲ್ಲಿರತಕ್ಕದ್ದು. ಇಲ್ಲಿ ನನ್ನಿಂದಾಗತಕ್ಕ ಕೆಲಸವೇನು. ನೀವು ಕಳುಹಿಸಿದ ದೂತನು ಕ್ಷಣವು ಪುರಸತ್ತು ಕೊಡದೆ ನನ್ನನ್ನು ಹೊರಡಿಸಿದನು. ಆದು ದರಿಂದ ಬಂದೆನು ಆದರೆ ಈ ಬೆಟ್ಟಗಳ ಮಧ್ಯದಲ್ಲಿ ಇಂತಾ ಅವೇಳೆಯಲ್ಲಿರತಕ್ಕದ್ದು ನನಿಗೆ ಸಮಂಜಸವಾಗಿ ತೋರುವದಿಲ್ಲವೆನ್ನುವನಂ ಕುರಿತು ನಾಗಪ್ಪಸೆಟ್ಟಿಯು;—

ಬೆಟ್ಟವಾದರೇನು? ಇದರಲ್ಲಿ ನೀನೇನು ಕಳದುಕೊಳ್ಳುತ್ತಿಯೆ ಧೈರ್ಯವಾಗಿರಲಿ ನಲವನು;—ನನಿಗೆ ಪ್ರಾಣಭಯವಿರುವದು ಸಾಲದೆ? ಎನಲು ರಾಚಪ್ಪಸೆಟ್ಟಿಯು;—ಹತ್ತು ಸಹಸ್ರ ವರಹಗಳು ಒಂದು ರಾತ್ರಿಯಲ್ಲಿ ಬಂಡವಾಳವಿಲ್ಲದೆ ಸಂಪಾದನೆ ಮಾಡುವದು ಉತ್ತಮವಲ್ಲವೆ? ಇಗೊ ಈ ನಿಲುವಂಗಿಯಂ ತೆಗದುಕೊಳ್ಳುವನಾಗು. ನೀನು ಯಾರದಾ ದರು ಕಾಲಶಬ್ದವಂ ಕೇಳಿದ್ದೆಯಾದರೆ ಈ ಮುಸುಕಿನಿಂದ ಮುಖವಂ ಮರೆಮಾಡಿಕೊ ಳ್ಳುವನಾಗೆಂದವನಂ ಭೋಗಪ್ಪಸೆಟ್ಟಿಯು ಭಯಗ್ರಸ್ತನಾಗಿ ನೋಡುತ್ತ;—ಇದೇನಿದು! ನೀವು ಮಾಡುತ್ತಿರುವ ಕೆಲಸ, ನಾನಿದಕ್ಕೆಂದಿಗು ಒಡಂಬಡುವದಿಲ್ಲವೆನಲು;—

ರಾಚಪ್ಪಸೆಟ್ಟಿಯು;—ಕೊಂಚ ತಾಳ್ಮೆಯಂ ತೆಗದುಕೊಂಡು, ಸಂಕ್ಷೇಪವಾಗಿ ಹೇಳುವದನ್ನು ನಿದಾನವಾಗಿ ಕೇಳುವನಾಗು. ಈ ದಿನ ಪ್ರಾತಃಕಾಲ ಹತ್ತುಸಹಸ್ರ ವರಹಗಳನ್ನು ದೊರೆಯು ನನ್ನಿಂದ ತರಿಸಿಕೊಂಡನು. ಇದೊಂದು ಅಲ್ಪಕೆಲಸಕ್ಕಾಗಿ ಇದರ ವಿಷಯವೆಲ್ಲ ಅಶ್ವಪಾಲಕನಿಂದ ತಿಳಿಯಬಂತು. ಈ ರಾತ್ರೆ ದೊರೆಯು ಒಬ್ಬ ಜಂಗಮನಂತೆ ವೇಷವನ್ನಳವಡಿಸಿಕೊಂಡು, ಒಬ್ಬನೆ ಈ ಹತ್ತುಸಾವಿರ ವರಹಗಳನ್ನು ಜೊತೆಯಲ್ಲಿ ತೆಗದುಕೊಂಡು ಪಾಟಲಿಪುರದ ಸ್ತ್ರೀಸನ್ಯಾಸಮಠಕ್ಕೆ ಹೋಗಿ, ಆ ಮಠ

ದಲ್ಲಿ ಆಶ್ರಮವಂ ತೆಗೆದುಕೊಳ್ಳಲು ಸಿದ್ಧವಾಗಿರುವ ಒಬ್ಬ ಕನ್ಯೆಯನ್ನು ಕೆಡಿಸುವದಕ್ಕಾಗಿ ಹೋಗುವನು. ಈ ಅಧಿಕವಾದ ದ್ರವ್ಯವನ್ನು ಈ ಅಲ್ಪವಾದ ವಿಷಯದಲ್ಲಿ, ಧರ್ಮಾಧಿಕಾರಿಗಳಿಗೆ ಲಂಚವಂಕೊಟ್ಟು, ಸನ್ಮಾರ್ಗಾವಲಂಬನವಲ್ಲಿರುವ ಕನ್ಯಾಮಣಿಯಂ ಕೆಡಿಸುವದೆಂಬುವದು, ಹೀನವೃತ್ತಿಯೆಂದು ನಿನಿಗೆ ತಿಳಿಯುವದಿಲ್ಲವೆ ? ಅದರ ಮಾತಂತಿರಲಿ ಮುಂದಿನ ಆಲೋಚನೆಯಂ ಮಾಡುವನಾಗು. ಅವನು ಇನ್ನೇನು ಈ ದಾರಿಯಲ್ಲಿ ಬರುವನು. ಅವನು ಈ ನೀಚಕೆಲಸಕ್ಕಾಗಿ ತೆಗೆದುಕೊಂಡು ಹೋಗುತ್ತಿರುವ ದ್ರವ್ಯವನ್ನು, ಪ್ರಯೋಜನ ಮತ್ತು ಸನ್ಮಾರ್ಗಕರವಾದ ವೃತ್ತಿಯಲ್ಲಿ ಉಪಯೋಗಿಸುವದಕ್ಕಾಗಿ ಅವನಿಂದ ತೆಗೆದುಕೊಳ್ಳೋಣ. ಇಂತಾ ನೀಚಕೆಲಸಕ್ಕಾಗಿ ನಾನಿಷ್ಟು ದ್ರವ್ಯವಂ ಕೊಡುವದಕ್ಕೆ ಅಭ್ಯಂತರ ಪಟ್ಟೆನೆಂದವನಂ ಕುರಿತು ಭೋಗಪ್ಪಸೆಟ್ಟಿಯು;—ಇದೇನು ರಾಚಪ್ಪಸೆಟ್ಟಿ ? ನೀನು ದೊರೆಯನ್ನು ಅಡ್ಡಕಟ್ಟಿ ಕಳವು ಮಾಡಬೇಕೆಂದು ಮಾಡಿರುವ ಆಲೋಚನೆಯು ಸರಿಯಾದದ್ದಲ್ಲ ಈ ಕೆಲಸವನ್ನೇನಾದರು ನಾವು ಮಾಡಿದ್ದೆ ಆದರೆ ಮಾಡಿದವರನ್ನು ಗೊತ್ತುಮಾಡುವದಕ್ಕೆ ರಾಷ್ಟ್ರವೆಲ್ಲವು ಎದ್ದು ಕೂತುಕೊಳ್ಳುವದೆನಲು ರಾಚಪ್ಪಸೆಟ್ಟಿಯು;—

ನೀನು ಮಾಡಿದ ಆಲೋಚನೆಯು ಸರಿಯಾದದ್ದಲ್ಲ, ದೊರೆಯು ಈ ಕಳವನ್ನು ಹ್ಯಾಗೆ ಬಹಿರಂಗಪಡಿಸ್ಯಾನು ? ಇದನ್ನು ಬಹಿರಂಗಪಡಿಸಿದರ ತನ್ನ ಅಕೃತ್ಯವನ್ನು ತೋರ್ಪಡಿಸಿಕೊಂಡಂತಾಗುವದು. ಆದುದರಿಂದ ತನ್ನ ಉದ್ದೇಶವು ಭಗ್ನವಾಗಿ ನಾಚಿಕೆಯಿಂದ ಈ ವಿಷಯವನ್ನ ಪರರಿಗೆ ಬಾಯಿಬಿಡುವದಿಲ್ಲ. ನೀನು ಧೈರ್ಯವಾಗಿದ್ದುಕೊಂಡು ಮುಂದಣ ಕೆಲಸಕ್ಕೆ ಸಿದ್ಧವಾಗುವನಾಗು. ಈ ವಿಷಯವನ್ನು ನಾನು ಮೊದಲು ಆಲೋಚನೆ ಮಾಡಿದಾಗ, ಮಧ್ಯಾಹ್ನದಲ್ಲಿ ಕೊಟ್ಟ ದ್ರವ್ಯವೆಲ್ಲ ಮಧ್ಯರಾತ್ರಿಗೆ ಮುಂಚೆಯೆ ನನ್ನ ಕೈವಶವಾಗುತೆಂದು ನಾನು ಪಟ್ಟ ಸಂತೋಷಕ್ಕೆ ಪಾರವೆಯಿಲ್ಲದೆ ಇತ್ತು, ನೀನು ಹಾಗೆಯೆ ಇರುವನಾಗೆನಲು ಭೋಗಪ್ಪಸೆಟ್ಟಿಯು;—

ಈ ಕೆಲಸವು ನನಿಗೆ ಸಮಂಜಸವಾಗಿ ತೋರುವದಿಲ್ಲ. ನನಿಗೆ ವಯಸ್ಸಾಗಿರುವದು. ಪ್ರಾಯದವರ ಸಂಗಡ ಹೆಣಗಾಡತಕ್ಕ ತ್ರಾಣವು ನನ್ನಲ್ಲಿರುವದಿಲ್ಲವೆನ್ನುವಷ್ಟರಲ್ಲಿ; ನಾಗಪ್ಪಸೆಟ್ಟಿಯು;—ಅಗೊ ! ಆ ಕಡೆ ನೋಡಿ ಯಾರದೊ ಕಾಲುಶಬ್ದವಾಗುತ್ತಿರುವಂತೆ ಕಾಣುತ್ತೆನಲು;—ರಾಚಪ್ಪಸೆಟ್ಟಿಯು, ಭೋಗಪ್ಪಸೆಟ್ಟಿಯನ್ನು ಕುರಿತು;—ಇನ್ನು ನೀನು ಸಿದ್ಧವಾಗೆನಲದಕ್ಕವನು;—ಈ ಕೆಲಸ ನನ್ನಿಂದೆಂದಿಗು ಆಗಲಾರದು. ನನ್ನ

ಕಾಲುಗಳು ನಡಗುತ್ತಿವೆ. ಶ್ವಾಸವು ಮೇಲಕ್ಕೆ ಏರುತ್ತಿರುವದೆಂದು ನಡಗುತ್ತಿರುವನಂ ಕುರಿತು ರಾಚಪ್ಪಸೆಟ್ಟಿಯು:—ಹಾಗಾದರೆ ನೀನು ಅಲ್ಲಿರುವ ಬಂಡೆಯಮೇಲಾದರು ಇರುವನಾಗು. ನಾವು ದೊರೆಯನ್ನು ಮುತ್ತಿಗೆ ಹಾಕಿದಾಗ, ನೀನು ಕಲ್ಲಿನಿಂದ ಕಲ್ಲಿಗೆ ನೆಗದು ಶಬ್ದಮಾಡುತ್ತ; "ಈಕಡೆ ಬನ್ನಿ, ಆಕಡೆ ಬನ್ನಿ, ಬಾಯಿಮುಚ್ಚಿ, ಕುತ್ತಿಗೆಗೆ ಜೇರು ಹಾಕಿ" ಎಂದು ನಾನಾ ಬಗೆಯಾಗಿ ಕೂಗುತ್ತ ಭಯೋತ್ಪಾತವನ್ನುಂಟುಮಾಡಿ, ಈಗ ಅರ್ಧ ಮನುಷ್ಯನಂತಿರುವವನು ಹತ್ತು ಜನವಿದ್ದಂತೆ ಕಾಣಿಸಿಕೊಳ್ಳುವನಾಗೆನಲದಕ್ಕೆ ವನು:—ಈ ಕೆಲಸವಾದರೆ ನನ್ನಿಂದಾಗುವದು, ಇದನ್ನು ಮಾಡುತ್ತೇನೆಂದು ಬಂಡೆಯನ್ನೇರಿ ಕೂತುಕೊಂಡನು.

ಅಷ್ಟರಲ್ಲಿ ಅಲ್ಲಿಗೆ ದೊರೆಯು ಜಂಗಮವೇಷದಿಂದ ಬರಲು, ರಾಚಪ್ಪಸೆಟ್ಟಿಯು ನಾಗಪ್ಪಸೆಟ್ಟಿಯು ಅವನನ್ನು ಮುತ್ತಿಗೆಹಾಕಿ, "ಹಿಡೀರಿ ಹಿಡೀರಿ ಕುತ್ತಿಗೆಯನ್ನು ಮುರಿಕಿ"ಎಂದವನಲ್ಲಿದ್ದ ದ್ರವ್ಯವನ್ನು ಸುಲಿದುಕೊಳ್ಳುತ್ತ ಭೋಗಪ್ಪಸೆಟ್ಟಿಯು ಬಂಡೆಯ ಮೇಲೆ ಅಗಾಧವಾದ ಕಳ್ಳರ ಪರಿವಾರವಿದ್ದಂತೆ ಭಯೋತ್ಪಾತವನ್ನುಂಟುಮಾಡುತ್ತಿದ್ದನು. ಅಷ್ಟರಲ್ಲಿ ಆಕಸ್ಮಿಕವಾಗಿ ರವಿವರ್ಮನು ಅದೇಮಾರ್ಗವಾಗಿ ಹೋಗುತ್ತ ಅದನ್ನು ಕಂಡು ತನ್ನ ಕೈಕಠಾರಿಯಿಂದ ರಾಚಪ್ಪಸೆಟ್ಟಿಯನ್ನು ತಿವಿದು ನೆಲಕ್ಕೆ ಕೆಡಹಿದನು. ನಾಗಪ್ಪಸೆಟ್ಟಿಯು, ಭೋಗಪ್ಪಸೆಟ್ಟಿಯು ಓಡಿಹೋದರು. ರಾಚಪ್ಪಸೆಟ್ಟಿಯು ಪ್ರಾಣಬಿಡುತ್ತ "ಎಲಾ ನೀಚರಾದ ನಾಗಪ್ಪ ಭೋಗಪ್ಪನೆ ಸ್ವಲ್ಪವಾದರು ನಿಮ್ಮಲ್ಲಿ ಧೈರ್ಯವಿಲ್ಲವೆ? ನನ್ನನ್ನೊಬ್ಬನನ್ನೆ ಬಿಟ್ಟು ಓಡಿಹೋಗುವಿರ" ಎಂದು ಕೂಗಿಕೊಂಡನು.

ನಾಗಪ್ಪ ಭೋಗಪ್ಪನೆಂದದ್ದನ್ನು ಕೇಳಿ, ರವಿವರ್ಮನು; ಹಾ! ಹಾ! ಈ ದುರುಳನು ನನ್ನ ಹಳೆ ಸಾಲಗಾರನಾದ ರಾಚಪ್ಪಸೆಟ್ಟಿಯಾಗಿರಬೇಕೆಂದುಕೊಳ್ಳುತ್ತಿರಲು; ದೊರೆಯು ಮುಸುಕಂ ತೆಗದು—ಎಲೈ! ಧೀರನಾದ ಯಾತ್ರಿಕನೆ, ಹೌದು ಅವನು ರಾಚಪ್ಪಸೆಟ್ಟಿಯು, ಆದರೆ ಈ ನನ್ನ ಅಯೋಗ್ಯವಾದ ಪ್ರಾಣವನ್ನು ಕಾಪಾಡಿದ ನೀನ್ಯಾರೆನ್ನಲು ರವಿವರ್ಮನು:—

ಸ್ವಾಮಿ ನನ್ನನ್ನು ಸುಶೀಲನೆಂದು ಕರೆಯುವರು. ತಾವು ಯಾರೆಂದು ತಮ್ಮನ್ನು ಕೇಳಿ ತಮಗೆ ಅಸಮಾಧಾನವನ್ನು ಉಂಟುಮಾಡತಕ್ಕಂತ ಅಯೋಗ್ಯನಲ್ಲ ನಾನು. ತಮ್ಮ ಧ್ವನಿಯನ್ನು ಕೇಳುತ್ತಿರುವ ನನ್ನ ಕಿವಿಗಳು, ಈ ಬೆಳದಿಂಗಳು ಮೋಸಮಾಡದೆ ಇದ್ದರೆ, ತಾವಿಂತಾವರೆಂದು ನನಗೆ ಗೊತ್ತಾಗುತ್ತಿರುವದೆನಲು ದೊರೆಯು:—ಅಯ್ಯ

ಯಾತ್ರಿಕನೆ ! ನಾನಿಂತಾವನೆಂದು ನಿನಗೆ ಗೊತ್ತಾಗಿದ್ದರೆ, ಈಗ ನೀನು ನನಗೆ ಮಾಡಿದ ಅಗಾಧವಾದ ಉಪಕಾರಕ್ಕೆ ತಕ್ಕ ಪ್ರತಿಫಲವಂ ಕೊಡತಕ್ಕ ಶಕ್ತಿಯು ನನಗಿರುತ್ತೆಂದು ಸಹ ನಿನಗೆ ಗೊತ್ತಾಗಿರುವದು. ಆದುದರಿಂದ ನೀನು ನನ್ನಿಂದೇನನ್ನಪೇಕ್ಷಿಸುವೆ ಹೇಳೆನಲು; ರಾಮವರ್ಮನು; ಮಹಾಸ್ವಾಮಿ ! ಈಗ ನನಗೇನು ಬೇಕಾಗಿರುವದಿಲ್ಲ. ನಾವು ಪುನಃ ಎಲ್ಲಾದರ, ಸಂಧಿಸಿದಾಗ್ಯೆ ಈ ರಾತ್ರಿಯ ನಡವಳಿಕೆಯು, ಅಭಯವು ತಮಗೆ ಜ್ಞಾಪಕವಿರಲೆಂದು ಪ್ರಾರ್ಥಿಸುವೆನೆನಲವಕ್ಕೆ ದೊರೆಯು;—

ಹಾಗಾದರೆ ಅದುವರಿಗೆ ಇದನ್ನು ನೀನು ರಹಸ್ಯವಾಗಿಟ್ಟಿರುವನಾಗು. ಈ ಗುಲಾಮರಕ್ಕೈಗೆ ಸಿಕ್ಕಿ ನಾನು ಒದ್ದಾಡುತ್ತಿರುವಾಗ, ಕೊಂಚ ಗಾಯಗಳಾಗಿ ಮೈಯಲ್ಲಾ ನೋಯುತ್ತಿರುವದು. ಇದರ ದೆಸೆಯಿಂದ ನಡೆಯುವದಕ್ಕೆ ಸಹ ತೊಂದರೆಯಾಗಿರುವದು. ನಾನು ಚಂದ್ರನಗರವನ್ನು ಸೇರಲು ಸಾಧ್ಯವಾದರೆ ಒಂದು ಕುದುರೆಯನ್ನು ಒದಗಿಸಿಕೊಟ್ಟರೆ ಬಹಳ ಉಪಕಾರವಂ ಮಾಡಿದಂತಾಗುವದೆನ್ನುವದಂ ಕೇಳಿ; ರಾಮವರ್ಮನು ಸಮೀಪದಲ್ಲಿದ್ದ ಹುಂಡಿಗೆ ಹೋಗಿ ಒಂದು ಕುದುರೆಯನ್ನು ತಂದು ಅದರಮೇಲೆ ರಾಯನಂ ಕೂರಿಸಿ ತನ್ನ ಮಾರ್ಗವಾಗಿ ತೆರಳಿದನು. ನಂತರ ಭಗ್ನಹೃದಯನಾಗಿ ಜಂಗಮವೇಷದ ರಾಯನು ಕುದುರೆಯಮೇಲೆ ಕೂತುಕೊಂಡು;—

ವೃತ್ತ॥ "ಕೃತಶಾಪಾನ್ವಿತನಾಹಿಮಾಂಶುಗುರ ಮಿಂದ್ರೈತ್ಯಾರಿಭಗ್ನಾಂಗದಾ ।
ಪತಿಯಿಂ ಕೀಚಕನೆಂಬಕಾರಿಮುರಿದಂ ಸುಗ್ರೀವನಿಂ ವಾಲಿತಾಂ ॥
ಹತನಾ ವಂದಶಕಂಠನಾಶರಿಶರಕ್ಕೀಡಾದನೇಮೇಳ್ವೆನಾಂ ।
ಅತಿಕಾಮಾರ್ಗತಿಕಷ್ಟನಿಮ್ನೈಕರಕರಾಶಿ ಚನ್ನಸೋಮೇಶ್ವರಾ ॥"

ಎಂದುಕೊಂಡು ಚಂದ್ರನಗರಾಭಿಮುಖನಾಗಿ ತೆರಳಿದನು.

ಇತ್ತಲಾ ಚಂದ್ರನಗರದಲ್ಲಿ ರಾಯನ ಒಡ್ಡೋಲಗಕ್ಕೆ ಸಜ್ಜೆಯಂ ಸಿದ್ಧಪಡಿಸುತ್ತ ಒಬ್ಬ ಉಳಿಗದವನು ಮತ್ತೊಬ್ಬನಂ ಕುರಿತು; ಇದೇನು ! ಪ್ರಭುಗಳು ಈದಿವಸ ಇನ್ನು ಶಯನೋತ್ಸವದಲ್ಲೆ ಇರುವಂತೆ ಕಾಣುತ್ತೆನಲದಕ್ಕವನು;—ಈಗತಾನೆ ಶಯನವನ್ನು ಬಿಟ್ಟರು. ಅವರು ಪ್ರತಿದಿವಸವು ಏಳುವದಕ್ಕಿಂತಲು ಒಂದು ಝಾವ ಸಾವಕಾಶವಾಗೆದ್ದಿರುವರೆನಲದಕ್ಕವನು;—ಹಾಗಾದರೆ ಅವರಿಗೆ ದೇಹದಲ್ಲಿ ಸ್ವಸ್ತವಿಲ್ಲದಂತೆ ಕಾಣುತ್ತೆನಲು; ಹೌದು ಅವರು ಈ ರಾತ್ರೆ ವಿಪರೀತವಾಗಿ ಕನಸುಗಳನ್ನು ಕಂಡು ನಿದ್ರೆಯಲ್ಲಿ ಹಾಸಿಗೆಯಂಬಿಟ್ಟು ಎದ್ದು ನಡವರಂತೆ. ಹೀಗೆ ನಡೆಯುವಾಗ ಹೊಸಲನ್ನೆಡವಿ

ಬಿದ್ದು ಕೊಂಚಗಾಯಗಳಾಗಿ ಮೈಯಲ್ಲ ನೋಯುತ್ತಿದೆಯಂತೆ ಎನಲದಕ್ಕವನು;- ಹಾಗಾದರೆ ವೈದ್ಯರು ಬಂದು ನೋಡಿರಬಹುದೆನಲು;-ಇಲ್ಲ ವೈದ್ಯರನ್ನು ಪ್ರಭುಗಳು ಕರಿಸಲಿಲ್ಲ. ವೈದ್ಯರ ಮುಖವನ್ನು ತಾವು ಯಾವದಿವಸ ನೋಡುತ್ತಾರೊ, ಆ ದಿವಸ ತಮಗೇನಾದರು ಖಾಯಿಲೆ ಪ್ರಾಪ್ತಿಯಾಗುತ್ತೆಂದು ಹೇಳುವರು. ಇನ್ನೇನು ವಸ್ತ್ರಾಭರಣಗಳನ್ನು ಧರಿಸಿಕೊಂಡಾಯಿತು. ಕೂಡಲೆ ಸಭೆಗೆ ದಯಮಾಡಿಸಬಹುದೆನ್ನುವಷ್ಟರಲ್ಲಿ, ಪರಿವಾರದೊಂದಿಗೆ ವೀರಬಾಹು ಮಹಾರಾಯರು ಸಭಾಸ್ಥಾನವನ್ನೈದಿದರು.

ಕಳಿಂಗನು ಪ್ರಭುವಂ ಕುರಿತು;-ಮಹಾಸ್ವಾಮಿ! ಇದೇನು ಅತಿಶಯವಾದದ್ದಲ್ಲ. ಪ್ರಾಯದಲ್ಲಿದು ಸ್ವಭಾವವಾಗಿರುವದು, ನಾನು ಸಹ ನನ್ನ ಪ್ರಾಯದಲ್ಲಿ ಇದೇ ಮೇರೆ ನಿದ್ರೆಯಲ್ಲಿ ನಡೆಯುತ್ತಿದ್ದೆನು. ಹೀಗೆ ನಡಿಯುತ್ತಿರುವದನ್ನು ಒಂದು ದಿವಸ ನನ್ನರಸಿಯಾದ ಚಂದ್ರಾವತಿಯು ಕಂಡು ಪೈಶಾಚಬರುತ್ತಿರುವದೆಂದು ಹೆದರುಕೊಂಡಳೆನಲು; ಆಸ್ಥಾನದ ವಿದೂಷಕನಾದ ತ್ರಿಭುವನನು;-

ನಾನು ಸಹ ನಡಿಯುವದುಂಟು. ನಾನೊಂದು ರಾತ್ರೆ ಹೀಗೆಯೆ ನಿದ್ರೆಯಲ್ಲಿ ನಡದು ರಂಭೆಯು ಮಲಗಿದ್ದ ಕಿರುಮನೆಗೆ ಹೋಗಿ, ಕೂಡಲೆ ಆ ಕಿರುಮನೆಯ ಒಂದು ಕಿಟಕಿಯುದ್ವಾರ ಹೊರಕ್ಕೆ ಹೋದಂತೆ ಜ್ಞಾಪಕವಿರುವದು. ಆದರೆ ನಿದ್ರೆಯಿಂದಲೆ ಹೊರಕ್ಕೆ ಹೋದೆನೊ, ಅಥವ ನಡಿಯುತ್ತಿರುವಾಗ ಕಿಟಕಿಯಿಂದಾಚೆ ಬೀಳಲ್ಪಟ್ಟನೊ ನಾನು ಬರದು ಇಟ್ಟುಕೊಂಡಿಲ್ಲವೆನಲು; ರಾಯನು ಹಾಗಾದರೆ ನೀನು ಬಹುದೂರಕ್ಕೆ ಬಿದ್ದಿರಬಹುದೆನಲವನು;-ನಾನು ತೋಟದಲ್ಲಿ ಹೋಗಿ ಬಿದ್ದೆನು. ಇದರಿಂದ ನನ್ನ ಕಾಲು ಮುರಿದದ್ದು ಮಾತ್ರವಲ್ಲದೆ, ಒಂದು ಕೊತ್ತಂಬರಿ ಗಿಡದ ಬುಡವು ಮುರಿದು ಹೋಯಿತು ನನ್ನ ಕಾಲನ್ನು ಹಜಾಮರ ಚಿಣ್ಣನು ಕಟ್ಟಿದನು. ಅದನ್ನು ಈ ಚಂದ್ರನಗರದ ಕೆಲವು ಸ್ತ್ರೀಯರು ಈ ಪುರಲ್ಲೆಲ್ಲ ಇದಕ್ಕೆ ಸಮನಾದ ಕಾಲು ದೊರಿಗು ಇಲ್ಲವೆಂದು ಹೇಳುವರು ಆದರೆ ಕೊತ್ತಂಬರಿ ಗಿಡಮಾತ್ರ ಆ ದಿವಸದ ಗಾಯದಿಂದಲೆ ಸತ್ತುಹೋಯಿತು. ಅದು ಸಾಯುವಾಗ ಹೇಳಿದ್ದೇನಂದರೆ ;-

ವೃತ್ತ॥ ''ಚತುರಾಸ್ಯಂಮುಖವಿತ್ತಶಂಕರಜಟಾಜೂಟಾಗ್ರಮಂಮೆಟ್ಟಿದಳ್ ।
ಗತಿಯಿಂಕೃಷ್ಣನವಕ್ಷದೊಳ್‌ನಟಿಸಿದಳ್‌ದೇವೇಂದ್ರತನ್ನುಮದ್ರೆಯಂ ।
ಹಿತದಿಂತಾಳಿದವಿಕ್ಕಲೋಕಗಳನಾನೇಂವರ್ಣಿಪೆಂನೋಡಲಾ ।
ಸತಿಯುಗರ್ವನುಸೋಲನೈ''ತ್ರಿಭುವನಂನೀಂಪೇಳಿದಂಯೆಂಧುದುಂ ।

ಕಳಿಂಗನು, ಪ್ರಭುವಂ ಕುರಿತು; ಮಹಾಸ್ವಾಮಿ! ದೇಶಪದ್ಧತಿ ಮೀರಿ ತನ್ನಗಂಡನ ಆಸ್ತಿಗಾಗಿ ಮುಜರೆಯಂ ಮಾಡಲು ನನ್ನ ಮಗಳು ಸಿದ್ಧವಾಗಿದಾಳೆ, ಅಪ್ಪಣೆಯಾದರೆ ಕರಿಸುತ್ತೇನೆಂದು ಹೇಳಿ; ಕಿರುಮನೆಯಲ್ಲಿದ್ದ ಪದ್ಮಿನಿಯಂ ಕರೆದುಕೊಂಡು ಬಾರೆಂದು ಒಬ್ಬ ಹರಿಕಾರನಂ ಕಳುಹಿಸಿದನು. ರಾಯನು ಆಕೆಯು ಬರುವದರೊಳಗಾಗಿ ಮತ್ಯಾರಾದರು ಹೇಳಿಕೊಳ್ಳತಕ್ಕ ವಿಷಯವಿದ್ದರೆ ಈ ಸಭೆಯಲ್ಲಿ ಹೇಳಿಕೊಳ್ಳಬಹುದೆನಲು; ಜನಗಳ ಸಮೂಹದಲ್ಲಿ ಯಾತ್ರಿಕನಂತೆ ಇದ್ದ ರವಿವರ್ಮನು ಮುಂದಕ್ಕೆ ಬಂದು, ಮಹಾಸ್ವಾಮಿ! ನನ್ನದೊಂದು ವಿಜ್ಞಾಪನೆ—ಎನ್ನುವಷ್ಟರಲ್ಲಿ ರಾಯನು ನಿನ್ನ ವಿಜ್ಞಾಪನೆ ಇಂತಾದ್ದೆಂದು ನನಗೆ ತಿಳಿಯದು; ಆದರೆ ನಿನ್ನಲ್ಲಿ ವಿಶೇಷವಾದ ಯೋಗ್ಯತೆ ಇರುವದು. ಅದರ ತಾರತಮ್ಯ ನನಗೆ ಮಾತ್ರ ಗೊತ್ತಿರುವದು. ನಿನ್ನ ವಿಜ್ಞಾಪನೆಯಂ ಅರಿಕೆಮಾಡಿಕೊಳ್ಳುವನಾಗು. ಅಲ್ಲದಿದ್ದರೆ ಅದನ್ನ ನಾನೆ ಊಹಿಸಿ ಅದಕ್ಕೆ ತಕ್ಕ ಫಲವನ್ನು ಕೊಡಲು ಅವಕಾಶವನ್ನು ಕೊಡುವವನಾಗು. ಈ ಊರಲ್ಲಿ ಮೂರು ಜನ ಬೌದ್ಧವರ್ತಕರಿರುವರು. ಅವರಲ್ಲಿ ರಾಚಪ್ಪಸೆಟ್ಟಿಯೆನ್ನುವನು ನೆನ್ನೆ ದಿವಸ ಸತ್ತು ಹೋದನು. ಮತ್ತಿಬ್ಬರನ್ನು ನಾಗಪ್ಪಸೆಟ್ಟಿ ಭೋಗಪ್ಪಸೆಟ್ಟಿಯೆಂದು ಕರೆಯುವರು. ಇವರುಗಳ ವಿಶಿಷ್ಟ ಆಸ್ತಿಯು ನ್ಯಾಯಾಧೀನವಾಗಿ ರಾಜಕೋಶಕ್ಕೆ ಸೇರಬೇಕಾಗಿರುವದು. ಈ ಮೂರು ಜನದ ಆಸ್ತಿಯನ್ನೆಲ್ಲ, ಎಲೈ ಧೀರನಾದ ಯಾತ್ರಿಕನೆ! ನಿನಗೆ ನಾನು ಕೊಟ್ಟಿರುವೆನು. ಜನರು ಹೇಳುವದು ನಿಜವಾದರೆ ಇವರುಗಳ ಈ ಆಸ್ತಿಯಿಂದ ಮಗಧದೇಶವನ್ನ ಕೊಂಡುಕೊಳ್ಳಬಹುದಾಗಿ ಕಾಣುತ್ತೆ. ಅದರಂತೆ ಇದು ನಿಜವಲ್ಲದಿದ್ದರೆ, ಇನ್ನು ಅಧಿಕವಾಗಿ ಕೇಳುವನಾಗು ಕೊಡುತ್ತೇನೆನಲು ರವಿವರ್ಮನು:—

ಮಹಾಸ್ವಾಮಿ! ನನಗೆ ಕರ್ತವ್ಯವಾದ ರಾಜನಿಷ್ಠೆಗಿಂತಲು ಅಧಿಕವಾದ ಯಾವ ಕಾರ್ಯವನ್ನು ನಾನು ಮಾಡಿದವನಲ್ಲ, ನಾನು ತಮಗೇನುಪಕಾರವಂ ಮಾಡಿದ್ದಾಗ್ಯೂ, ಅದಕ್ಕೆ ಪ್ರತ್ಯೇಕವಾದ ಪ್ರತಿಫಲವನ್ನು ಕೊಡತಕ್ಕದ್ದಾಗಿರುವದಿಲ್ಲ. ಈ ವರ್ತಕರೀಗೆ ಕಳೆದುಕೊಂಡ ಭಾಗ್ಯವೆಲ್ಲ ಪೂರ್ವದಲ್ಲಿ ಅದೃಷ್ಟಹೀನನಾದ ಕಾಮರೂಪೇಶನದಾಗಿತ್ತು. ಆತನಿಂದಿವರಿದಂ ಸಂಗ್ರಹಿಸಿದರು. ಇದನ್ನೀಗ ತಮ್ಮಿಂದ ತೆಗೆದುಕೊಂಡು ಕೃತಜ್ಞನಾಗಿರುವೆನು ಆದರೆ ಇದಕಿಂತಲು ಮತ್ತೊಂದು ಪ್ರಸಾದವನ್ನಪೇಕ್ಷಿಸುವೆನು. ನನ್ನ ಒಬ್ಬ ಮಿತ್ರನಂ ಮನ್ನಿಸಿ ತಮ್ಮ ಪೂರ್ವದ ಅಭಿಮಾನದಲ್ಲಿಟ್ಟುಕೊಂಡರೆ ನಾನು ತಮಗೇನಾದರು ಉಪಕಾರವಂ ಮಾಡಿದ್ದರೆ, ಅದಕ್ಕೆ ಐವತ್ತರಷ್ಟು ಪ್ರತ್ಯುಪಕಾರವಂ ಮಾಡಿದಂ

ತಾಗುವದು. ಉತ್ಕಲೇಶನಾದ ರಾಮವರ್ಮನೆ ಈ ನನ್ನ ಮಿತ್ರನು ಇವನಪರಾಧವಂ ಮನ್ನಿಸಬೇಕೆಂದು ಬೇಡಿಕೊಳ್ಳುತ್ತೇನೆನಲು; ಕಳಿಂಗನು:—ಎಲೈ ಯಾತ್ರಿಕನೆ ನಿನಗೆ ಬುದ್ಧಿ ಸ್ವಾಧೀನವಿಲ್ಲದಂತೆ ಕಾಣುತ್ತೆ. ಮಹಾಸ್ವಾಮಿಯವರ ಸನ್ನಿಧಿಯಲ್ಲಿ ಯುಕ್ತಾಯುಕ್ತವಂ ತಿಳಿಯದೆ ಮಾತನಾಡುತ್ತಿರುವೆಯೆನಲು ರಾಯನು:—

ಆತನ ವಿಜ್ಞಾಪನೆಗೆ ನೀನು ಅಡ್ಡಲಾಗಿ ಬರಬೇಡ. ನಮ್ಮ ಅಪ್ಪಣೆಯಿಂದಲೆ ಆತನು ನಿರ್ಭೀತನಾಗಿ ಮಾತನಾಡುತ್ತಿರುವನು. ಆತನು ಕೇಳಿಕೊಳ್ಳುವದರಲ್ಲಿ ಗೌರವ ತೋರುತ್ತಿರುವದು. ಈಗ ಗಡೀಪಾರಾದವನಂತೆ ಓಡಿಹೋಗಿರುವ ರಾಜಪುತ್ರನಲ್ಲಿ ಆಪಾದಿಸಿರುವ ತಪ್ಪಿತಗಳು ಸುಳ್ಳಾಗಿ, ಆತನು ನಿರ್ದೋಷಿಯಂತೆ ಕಾಣುತ್ತೆ. ಆತನಿಗೆ ಆಗದವರ ಚಾಡಿಮಾತಿಗೆ ನಾನು ಕಿವಿಕೊಟ್ಟಂತೆ ಕಾಣುತ್ತಿರುವದು. ಆದರೆ ಅವನು ನಮ್ಮಾಜ್ಞೆಯಂ ಉಲ್ಲಂಘಿಸಿ ಬಿತುಕೊಂಡಿರುವ ವರಿಗು ನಮ್ಮ ದಯಾರಸಕ್ಕೆ ಪಾತ್ರನಾಗುವದಿಲ್ಲವೆನಲು, ರವಿವರ್ಮನು:—ಮಹಾಸ್ವಾಮಿ ! ಹಾಗಾದರೆ ಅವನಿದನ್ನಗಲಿ ಬಹು ಕಾಲವಿರುವದಿಲ್ಲ, ಕೂಡಲೆ ಪಾದಾರವಿಂದವಂಸೇರುವನೆನುವಷ್ಟರಲ್ಲಿ ಸಭೆಗೆ ಬರುತ್ತಿರುವ ಪದ್ಮಿನಿಯಂ ಕುರಿತು ರಾಯನು ;—ಎಲೈ ಪೂಜ್ಯಳೆ ! ಪೂರ್ಣ ಚಂದ್ರೋದಯದಿಂದ ವಸಂತರಾಜನ ಸಭೆಯು ಪ್ರಕಾಶಿಸುವಂತೆ, ನಿನ್ನಾಗಮನದಿಂ ನನ್ನೊಡ್ಡೋಲಗವು ಮನೋಹರವಾಯಿತು. ನೀನು ನನ್ನ ರಾಜಪದವಿಗೆ ಮಾಡತಕ್ಕ ಮುಜರೆಗೆ ಮುಂಚೆಯೇ ಬ್ರಹ್ಮನಿರ್ಮಿತವಾದ ನಿನ್ನ ಲಾವಣ್ಯಪದವಿಗೆ ನಾನು ಮುಜರೆಯಂಮಾಡುತ್ತೇನಿದಂ ಅಂಗೀಕರಿಸುವಳಾಗು. ನಾನು ರಾಣಿಯಾಗಿದ್ದ ಪಕ್ಷದಲ್ಲಿ, ನನ್ನ ರಾಜ್ಯಪದವಿಯನ್ನು ತೆಗೆದುಕೊಂಡು ನಿನ್ನ ಲಾವಣ್ಯಪದವಿಯನ್ನು ನೀಡುವಳಾಗೆಂದು ಬೇಡುತ್ತಿದ್ದೆನೆಂಬ ರಾಯನಿಗೆ, ಕಳಿಂಗನ ಹೇಳಿಕೆಮೇಲೆ ಪದ್ಮಿನಿಯು ಮುಜರೆಯಂಮಾಡಲು ಪ್ರಾರಂಭಿಸುತ್ತಿರಲು, ದಂಡಾಧಿಕಾರಿಯೆದ್ದು ;—

ಎಲೈ ಕೋಶಾಧೀಶ್ವರರಾದ ಕಳಿಂಗರಾಯರೆ! ನಾನೀಗ ಹೇಳುವದಂ ಮನ್ನಿಸುವರಾಗಿ. ಈಗ ತಾವು ಮಾಡಿಸುತ್ತಿರುವ ಮುಜರೆಯು ಸುರೇಂದ್ರರಾಯರ ಮರಣಪತ್ರವನ್ನೋದಿದನಂತರ ಮಾಡಬೇಕಾಗಿರುವದು. ಅವರ ಆಸ್ತಿಗೆ ಅವರ ಪತ್ನಿಯಾದ ತಮ್ಮ ಕುಮಾರಿಯೆ ಬಾಧ್ಯಸ್ತಳೆಂದು ನಾವೆಲ್ಲರು ತಿಳಿದುಂಟು. ಅವರು ನ್ಯಾಯದ ಪದ್ಧತಿಮೇರೆ ನಡೆಯಬೇಕೆನಲು, ಕಳಿಂಗನು :—

ಹೋ ! ಹೋ! ಇದೇನು ದಂಡಾಧಿಕಾರಿಗಳೆ ! ನಿಮ್ಮೊಬ್ಬರಿಗೆ ನ್ಯಾಯವು ತಿಳಿ

ದಂತೆ ಭಾವಿಸುತ್ತಿದ್ದೀರಿ. ಸಕಲ ನ್ಯಾಯಕ್ಕೂ ಮಾತೃಸ್ಥಾನವಾದ ಮಹಾಪ್ರಭುಗಳೆ ಎದುರಾಗಿದಾರೆ. ಇಂತಾದ್ದರಲ್ಲಿ ನೀವ್ಯಾತರದೋ ಒಂದು ಹಳೆ ನ್ಯಾಯವನ್ನು ಹೇಳುತ್ತಿರುವಿರಿ. ಸುರೇಂದ್ರರಾಯರು ಕಾಶೀಪಟ್ಟಣದಲ್ಲಿ ಸ್ವರ್ಗಸ್ಥರಾದರು. ಅವರು ಮರಣಪತ್ರವಂ ಬರೆದರೊ ಇಲ್ಲವೊ ಗೊತ್ತೇಯಿಲ್ಲ. ಒಂದುವೇಳೆ ಅವರು ಬರೆದಿದ್ದರು ಆದರೆ ಸಂಗತಿಯನ್ನೆ ಕಂಡವರಿಲ್ಲವೆನಲು; ರಾಯನು;—ಎಲೈ ಕೋಶಾಧೀಶ್ವರನೆ! ಇದು ಹಾಗಲ್ಲ. ನ್ಯಾಯವನ್ನೆಲ್ಲರು ಅನುಸರಿಸಿ ನಡಿಯಬೇಕು. ಎಲೈ ಪೂಜ್ಯಳೆ! ನಾನು ಹೀಗೆ ಹೇಳುತ್ತಿರುವದರಿಂದ ನಿನಗೆ ಅಹಿತವಾದದ್ದನ್ನು ನಾನು ಮಾಡುತ್ತೇನೆಂದು ನೆನಸಬೇಡ. ನ್ಯಾಯವೆಂಬುವದು ನಮ್ಮೆಲ್ಲರಿಗಿಂತಲು ದೊಡ್ಡದೆನ್ನುವಷ್ಟರಲ್ಲೊಬ್ಬ ಊಳಿಗದವನು ಬಂದು, ಮಹಾಸ್ವಾಮಿ! ವೈದ್ಯಶಿಖಾಮಣಿಯಾದ ಸುಬಾಹು ಬಂದಿರುವನೆಂದು ಅರಿಕೆಮಾಡಿ ಅಪ್ಪಣೆಯಮೇರೆ ಆತನನ್ನು ಸಭೆಗೆ ಕರೆದುಕೊಂಡು ಬಂದನು.

ಸುಬಾಹುವು ರಾಯನಂಕುರಿತು, ಮಹಾಸ್ವಾಮಿ ! ನಾನು ಕಾಶೀಪಟ್ಟಣದಿಂದ ಬಂದಿರುವೆನು. ತಮಗೊಪ್ಪಿಸುವಂತೆ ಈ ಕಾಗದವಂ ನನ್ನವಶಕ್ಕೆ ಕೊಟ್ಟು ಸುರೇಂದ್ರರಾಯರು ಪ್ರಾಣವಂಬಿಟ್ಟರೆಂದು ಕಾಗದವಂಕೊಟ್ಟನು. ಅದನ್ನು ರಾಯನು ತೆಗೆದುಕೊಂಡು ಇದು ಸುರೇಂದ್ರರಾಯನ ಕೈಯ್ಯಕ್ಷರವೆ, ಕೊಂಚ ಕೈನಡುಗಿನಿಂದ ಬರೆದಂತೆ ಕಾಣುತ್ತೆಂದು ಲಕ್ಕೋಟೆಯನ್ನೊಡೆಯುತ್ತಿರಲು, ಕಳಿಂಗನು ;—ಮಹಾಸ್ವಾಮಿಯವರಿಗೆ ತ್ರಿಕಾಲಜ್ಞಾನವಿರುವಂತೆ ಕಾಣುತ್ತೆ. ಅಪ್ಪಣೆಪಾಲಿಸಿದಂತೆ ಮರಣಪತ್ರವಿದೆಯೆಂದು; ದಂಡಾಧಿಕಾರಿಕಡೆ ತಿರುಗಿ, ಇಗೋಸ್ವಾಮಿ! ತಾವು ಕೇಳಿದ ಸೌಭಾಗ್ಯವು ಬಂದಿರುವದು. ಯಾರಕೈಯ್ಯಲ್ಲಿ ಬೇಕಾದರೂ ಓದಿಸಿಕೊಳ್ಳಬಹುದೆನ್ನುವಷ್ಟರಲ್ಲಿ ರಾಯನು ಕಾಗದವಂ ನೋಡಿ, ಇದರ ಒಕ್ಕಣೆಯು ವಿಚಿತ್ರವಾಗಿದೆಂದು ಗಟ್ಟಿಯಾಗಿ ಓದಿದನು.

“ ಸುರೇಂದ್ರರಾಯನಾದ ನಾನು ಈ ದಿವಸ ನನ್ನ ಶರೀರವನ್ನು ಭೂಮಿಗೂ, ನನ್ನ ಆತ್ಮವನ್ನು ವಿಶ್ವೇಶ್ವರನಿಗೂ, ನನ್ನ ವಿಶಿಷ್ಟ ಆಸ್ತಿಯನ್ನು ಪುನರ್ವಿವಾಹವಿಲ್ಲದೆ ಇದ್ದರೆ ನನ್ನಪತ್ನಿ ಪದ್ಮಿನಿಗೂ ಬಿಟ್ಟಿರುವೆನು. ಆಕೆಯು ಪುನರ್ವಿ-ವಾಹವನ್ನು ಮಾಡಿಕೊಂಡರೆ ಅಲ್ಲದಿದ್ದರೆ ಅವಳ ಮರಣಾನಂತರ ಅದನ್ನೆಲ್ಲ ನನ್ನ ಜೊತೆಯಲ್ಲಿ ಕಾಶೀಯಾತ್ರೆಯಂಮಾಡಿದ ಸುಶೀಲನಿಗೆ ಕೊಟ್ಟಿರುವೆನು. ” ಎಂದು ಬರೆದಿದ್ದ ಕಾಗದವನ್ನು

ಕಳಿಂಗನು ಕೇಳಿ;—ಇದೆಲ್ಲ ಯಾತ್ರಿಕನಿಗೆ ಸೇರಬೇಕಲ್ಲವೆ! ಇದು ಮಾತ್ರ ಅಸಾಧ್ಯವು. ಇದೊಂದು ತಿಪ್ಪೆಮೇಲಣ ಕಸವು! ಕೆಲಸಕ್ಕೆ ಬಾರದ ಕಾಗದ! ಹುಚ್ಚು

ಬರವಣಿಗೆ! ಇದರಿಂದ ಸುರೇಂದ್ರನಿಗೆ ಸಾಯುವದಕ್ಕೆ ಮುಂಚೆ ಬುದ್ಧಿ ಸ್ವಾಧೀನವಿರಲಿಲ್ಲವೆಂದು ಗೊತ್ತಾಗುವದು. ಅವನೀ ಅಗಾಧವಾದ ಯಾತ್ರೆಯಂ ಮಾಡುತ್ತೇನೆಂದು ಉದ್ಯುಕ್ತಪಟ್ಟಾಗಲೇ ಬುದ್ಧಿವಿಕಲ್ಪವಾಗಿದೆ ಎಂದು ತೋರುತ್ತಿತ್ತು. ಆಗಿದ್ದು ಕೊಂಚ ತಿಳುವಳಿಕೆ ಸಹ ಸಾಯುವಾಗ ಇರಲಿಲ್ಲವೆಂದು ಕಾಣುತ್ತೆನಲು ;—ಪದ್ಮಿನಿಯಾವನಂ ಕುರಿತು;—ಎಲೈ ಜನಕನೆ ಹಾಗೆ ಹೇಳಬೇಡ ಈ ರೀತಿ ಬರೆಯಲು ತಕ್ಕ ಕಾರಣವಿದ್ದರು ಇರಬಹುದು. ಅವರನ್ನು ನೀನ್ಯಾತಕ್ಕೆ ನಿಂದನೆಯಂ ಮಾಡುತ್ತಿರುವೆ ಎನ್ನುವದಂಕೇ? ಸುಬಾಹುವು ;—ಸುರೇಂದ್ರರಾಯರು ಸಾಯುವವರಿಗೂ ಮೊದಲಿನಂತೆ ತಿಳುವಳಿಕೆಯುಳ್ಳವರಾಗೇ ಇದ್ದರು. ಆದರೆ ನಿಮಗೀಗ ತೊಡಕಿನಂತೆ ಕಾಣುತ್ತಿರುವ ಈ ಮರಣಪತ್ರದ ತೊಡಕನ್ನು ನಾನು ಕೊಂಚಮಟ್ಟಿಗೆ ಬಿಡಿಸಬಲ್ಲೆನು. ಆದರಲ್ಲಿ ಹೇಳಿರುವ ಯಾತ್ರಿಕನು ಸುರೇಂದ್ರರಾಯರು ಮಾಡಿದ ವಿಶಿಷ್ಟ ತೀರ್ಥಯಾತ್ರೆಯಲ್ಲಿ, ಲಕ್ಷ್ಮಣನು ಶ್ರೀರಾಮನ ಜೊತೆಯಲ್ಲಿ ವನವಾಸದಲ್ಲಿದ್ದಂತೆ ಛಾಯಾನುವರ್ತಿಯಾಗಿ ಅವರಿಗೆ ಬಂದ ವಿಶಿಷ್ಟ ಸಂಕಟಗಳನ್ನು ನಿವಾರಣೆ ಮಾಡಿ ಕಾಪಾಡುತ್ತಿದ್ದನು ಆದುದರಿಂದ ಸುರೇಂದ್ರರಾಯರು ತಮ್ಮ ಆಸ್ತಿಯನ್ನೆಲ್ಲ ಈ ಮರಣಪತ್ರದಲ್ಲಿ ಹೇಳಿರುವ ಮೇರೆ ಕೊಟ್ಟಿರಬಹುದೆನಲು, ರಾಮನು;—ಹಾಗಾದರೆ ಈ ಯಾತ್ರಿಕನೆಲ್ಲಿರುವನೆನಲದಕ್ಕವನು ;—ನಾನವನನ್ನು ಕಾಶಿಪಟ್ಟಣದಲ್ಲಿ ಬಿಟ್ಟು ಬಂದೆನೆಂದು ತಲೆಯೆತ್ತಿ ನೋಡಿ ಜನಸಮೂಹದಲ್ಲಿ ನಿಂತಿದ್ದ ರವಿವರ್ಮನಂ ಕಂಡು, ಇವನೇ ಆ ಯಾತ್ರಿಕನೆಂದು ತೋರಿಸಿದನು.

ನಮಗೆ ಸಹ ಆಪತ್ಕಾಲದಲ್ಲಿ ಸಹಾಯವಂ ಮಾಡಿದ ಈತನೇನೊ ಅವನು? ಹಾಗಾದರೆ ಈ ಭೂಮಿಯಲ್ಲಿ ಜನರ ಕಷ್ಟವನ್ನು ನಿವಾರಣೆ ಮಾಡಲು ಭೂಸಂಚಾರ ಮಾಡುವ ಯಾವನೊ ಒಬ್ಬ ಮಹಾತ್ಮನೀತನಾಗಿರಬೇಕೆನ್ನುವ ರಾಮನಂ ಕುರಿತು, ರವಿವರ್ಮನು;—ಮಹಾಸ್ವಾಮಿ! ನಾನೀ ಸತ್ಯಸಂಧರರಾದ ಸುರೇಂದ್ರರಾಯರಿಗೆ ಮಾಡಿದ್ದು, ನಾನವರಿಗೆ ಮಾಡಬೇಕಾಗಿದ್ದದ್ದರಲ್ಲಿ ಶತಾಂಶದಲ್ಲೊಂದಂಶವು ಇಲ್ಲವೆಂದವನಂ ಕುರಿತು ಪದ್ಮಿನಿಯು;—

ಸ್ವಾಮಿ! ತಾವು ಅವರಿಗೆ ಯಾವ ಕಾರಣದಿಂದ ಎಷ್ಟರಮಟ್ಟಿಗೆ ಕೃತಜ್ಞರಾಗಿರಬೇಕಾಗಿದ್ದರು, ನೀವವರಿಗೆ ಮಾಡಿದ ಉಪಕಾರಕ್ಕಾಗಿ ನಾನು ತಮಗೆ ಕೃತಜ್ಞಳಾಗಿರಬೇಕಾಗಿರುವದರಲ್ಲದರ ಅರ್ಧಭಾಗವಿರುವದಿಲ್ಲ ತಾವು ಮಾಡಿದ ಉಪಕಾರದ ಪ್ರತ್ಯುಪಕಾರಕ್ಕಾಗಿ, ಅವರು ತಮಗೆ ತಮ್ಮ ಮರಣಪತ್ರದಿಂದ ಕೊಟ್ಟಿರುವ ಸ್ತ್ರೀಯು, ನನ್ನ

ಪುನರ್ವಿವಾಹದಿಂದ ತಪ್ಪಿಗೆ ಬರುವದಿಲ್ಲವಾದ್ದರಿಂದ, ಅದನ್ನೆಲ್ಲ ನಾನೆ ಮನಃಪೂರ್ವಕವಾಗಿ ತಪ್ಪಿಗೆ ಒಪ್ಪಿಸಿರುವನೆಂಬುದಂ ಕೇಳಿ ಕಳಿಂಗನು:—ಎಲೈ ಮಗಳೆ! ಇದೇನಿದು! ನಿನಗೆ ಮಂಕು ಹಿಡಿದಂತೆ ಕಾಣುತ್ತೆ. ನನ್ನ ಸಂಗಡ ಆಲೋಚನೆಯಂ ಮಾಡದೇಲೆ ಮಾತನಾಡುತ್ತಿರುವೆ. ನೀನು ನಿಶ್ಚಯವಾಗಿಯೂ ಇದನ್ನೆಲ್ಲ ಕೊಟ್ಟುಬಿಡುವಿದು ಎಂದನು.

ರವಿವರ್ಮನು, ಪದ್ಮಿನಿಯಂ ಕುರಿತು:—ಎಲೈ ಪೂಜ್ಯಳೆ! ಇದು ಹಾಗೊ? ಹಾಗಾದರೆ ಪುನರ್ವಿವಾಹದಿಂದ ನೀನು ಹಂಗಿಗಳಾಗಿರುವದನ್ನು ತಪ್ಪಿಸಿಕೊಳ್ಳುವದಿಲ್ಲವೆ? ಮನೋವ್ಯಥೆಯಿಂದ ಅಧೋಗತಿಯನ್ನೈದುತಿದ್ದ ಒಂದು ಖಿನ್ನ ಹೃದಯಕ್ಕೆ ನೀನು ಆಶೆಯಂ ತೋರಿಸಿ. ಮೇಲಕ್ಕೆತ್ತಿದ್ದನ್ನು ಮರೆತುಬಿಟ್ಟೆಯಾ? ಅವನಿಗೆ ಕೊಟ್ಟಿದ್ದ ಅಭಯವು ಮರೆತುಹೋಯಿತೆ? ಸ್ವಭಾವವು, ರೂಪು, ವ್ಯತ್ಯಾಸವಾಗಿರುವದರಿಂದ ಈ ಸಖಿಯವರು ಅವನ ಗುರುತಂ ಹಿಡಿಯಲಾರದಿದ್ದರು, ನೀನಾದರು ಅವನ ಗುರುತನ್ನು ಹಿಡಿಯುತ್ತಾಳೆಂದವನು ನಂಬಿದ್ದನು. ಆದರೆ ಅವನು ಮೊದಲಿನಂತೆಯೆ ಕಾಣುತ್ತಿರಲಿ, ಅಥವ ವ್ಯತ್ಯಾಸವಾಗೆ ಇರಲಿ, ಜನರಿಂದ ಪುರಸ್ಕರಿಸಲ್ಪಟ್ಟರು ಸರಿಯೆ ಅಥವ ತಿರಸ್ಕರಿಸಲ್ಪಟ್ಟರು ಸರಿಯೆ, ಮರೆಮಾಡುತ್ತಿರುವ ಈ ಉಡುಪನ್ನು ತೆಗೆದು ಬಿಸಾಟರೆ, ಪೂರ್ವದಲ್ಲಿ ಕುಮಾರರೂಪಕನೆಂದು ಕರೆಯಲ್ಪಡುತ್ತಿದ್ದ ರವಿವರ್ಮನು ನಿನಗೆ ಕಾಣಿಸಿಕೊಳ್ಳುವನೆಂದು ವೇಷರಹಿತನಾಗಿ ಪ್ರಕಾಶನಾದನು.

ಕಮಲಿನಿಯು ಪದ್ಮಿನಿಯಂ ಕುರಿತು:—ಎಲೈ ಸಖಿಯೆ! ಇದೇನು ನಿನ್ನ ವಾಣಿಯು! ಮಿತ್ರನನ್ನೆದಿರುಗೊಳ್ಳುವ ನಿನ್ನ ಪರಿಯು ಇದೇನೆ! ಸಾಕು ಉಲ್ಲಾಸದಿಂದಿರುವಳಾಗೆಂದು, ನಾಚಿಕೆಯಿಂದ ಮುಖವಂ ಮರೆಮಾಡಿಕೊಂಡು ಹಿಂದಕ್ಕೆ ಹೋಗುತ್ತಿದ್ದವಳಂ ಮುಂದಕ್ಕೆ ಕರೆಯಲವಳು ಅವಳ ಕಿವಿಯಲ್ಲಿ ಎಲೈ ಕಮಲಿನಿಯೆ ಸುಮ್ಮನಿರು, ಇವನೇ ರವಿವರ್ಮನಹುದೆಂಬುದನ್ನು ಕೇಳಿ ರವಿವರ್ಮನು:—

ಹೌದು ಹೌದು ನಾನೇ ರವಿವರ್ಮನು. ಹೆಸರಿನಲ್ಲು ಪ್ರಾಯಶಃ ಐಶ್ವರ್ಯದಲ್ಲು ನಾನು ಮೊದಲಿನ ರವಿವರ್ಮನೇ ಹೌದು. ಆದರೆ ಸ್ವಭಾವದಲ್ಲಿ ಮೊದಲಿನ ರವಿವರ್ಮನಲ್ಲ ನೀನು ಮೊದಲೊಂದಾವರ್ತಿ, "ಮುಂದುಗಾರರಲ್ಲಿ ದೊಡ್ಡ ಮನಸ್ಸಿಲ್ಲ" ಎಂಬದಾಗಿ ನನ್ನನ್ನು ಆಕ್ಷೇಪಿಸಿದೆ. ಇದು ಅಂದಿನಿಂದಲು ನನ್ನನ್ನು ಬಾಧಿಸುತ್ತ ಅದಕ್ಕೆ ನನ್ನ ದುರ್ದೆಶೆಯು ಸೇರಿ ನನ್ನ ಸ್ವಭಾವವನ್ನೆ ವ್ಯತ್ಯಾಸಮಾಡಿರುವದು. ಈಚಿನ ನನ್ನ ವೃತ್ತಾಂತವಂ ಕೇಳಿ ನನ್ನಲ್ಲೀಗಲಾದರು ದೊಡ್ಡ ಮನಸ್ಸಿದೆಯೊ ಇಲ್ಲವೊ ನಿನಗೆಗೊತ್ತಾಗಿರಬಹುದು. ಮೊ

ದಲಿನ ಅಭಯವನ್ನೀಗ ಪೂರ್ತಿಮಾಡೆಂದು ನಿನ್ನನ್ನು ನಾನು ಕೇಳಿ ನಿನಗಸಮಾಧಾನವನ್ನುಂಟುಮಾಡದಿದ್ದರು ನಿನ್ನ ಕರಕಮಲಗಳನ್ನಾದರೂ ಯಾತ್ರಾರ್ಥಿಯಾಗಿ ಬಳಲಿದನನ್ನ ತುಟಿಗಳಿಂದ ಮುದ್ದಿಡಲು ಅಪ್ಪಣೆಯಂ ಪಾಲಿಸಬೇಕೆನಲವಳು:—

ಹಾ! ಹಾ! ನನ್ನಪರಾಧವನ್ನು ಮನ್ನಿಸುವರಾಗಿ. ಹರುಷವು ಅಧಿಕವಾಗಿ ನನ್ನ ನೇತ್ರಗಳಿಂದ ವ್ಯಸನವನ್ನು ಹಾಸ್ಯ ಮಾಡುತ್ತಿರುವದು. ಈಗಿನ ನನ್ನಸ್ಥಿತಿಯನ್ನು ಹೇಳಲು ನನಿಗಸಾಧ್ಯವು. ಈಗ ನನ್ನಲ್ಲಿ ಹರುಷವನುಂಟುಮಾಡಿರುವ ದೈವವು ಅದರ ಉದ್ರೇಕವನ್ನು ಕಾಣುವಂತೆ ತಮ್ಮಲ್ಲಿ ತಿಳುವಳಿಕೆಯನ್ನು ಉಂಟುಮಾಡದೆ ಇಲ್ಲ. ನಮ್ಮಕ್ಷಿದ್ವಯಗಳು ಮೊದಲು ಸಂಧಿಸಿದಾಗಲೇ ತಮ್ಮಲ್ಲಿ ನಾನು ವ್ಯಾಮೋಹಗೊಂಡೆನು. ಕೂಡಲೆ ಈ ಮೋಹಸರಿತ್ತು ನನ್ನನ್ನಾವರಿಸಿಕೊಂಡು ನನ್ನನ್ನು ತನ್ನ ಪ್ರವಾಹದೊಂದಿಗೆ ಸೆಳೆದುಕೊಂಡು ಹೋಗುತ್ತಿತ್ತು. ಅದಕ್ಕಾಡ್ಡಲಾಗಿಬಂದ ಪಿತೃವಾತ್ಸಲ್ಯದ ದಿಣ್ಣೆಯನ್ನೇರಿ ಅದರಲ್ಲಿ ದುರದೃಷ್ಟದ ತಟಾಕದಲ್ಲಿ ಮುಳುಗಿಹೋಗುತ್ತಿದ್ದನು. ಅಂತವಳನ್ನು ಪುನಃ ಮೊದಲಿನ ಮೋಹಪ್ರವಾಹವೆ ತೆಳ್ಳಿಕೊಂಡು ಹೋಗಿ ಈಗ ಮನೋಹರವಾದ ತಡಿಯನ್ನೈದಿಸಿತು. ಆಸೆಯ ಮೊಳಕೆಯು ಹೃದಯದಲ್ಲಿ ನೆಟ್ಟರೆ ಅದು ಬೆಳೆಯದೆ ಇರಲಾರದೆಂದಳು.

ಕಳಿಂಗನು:—ಹಾಹಾ! ಭೂಚಕ್ರದಂತೆ ಅದೃಷ್ಟವೆಂಬುವದೂ ಸಹ ವ್ಯತ್ಯಾಸವಾಗುತ್ತಿರುವದು. ಎಲೈ ಕಾಮರೂಪರಾಯರೆ ಈಗಿನ ನಡವಳಿಕೆಯನ್ನು ನೋಡಿದರೆ ನನಗಾಶ್ಚರ್ಯವಾಗುತ್ತಿರುವದು. ನಿಮ್ಮಲ್ಲಿ ನನಿಗೀಗ ನಂಬಿಕೆಯೂ ವಿಶ್ವಾಸವೂ ಉಂಟಾಗುತ್ತಿರುವದು. ಇನ್ನು ಮೇಲಾದರೂ ನೀವು ಹಿತಾಹಿತಗಳನ್ನು ವಿಚಾರಿಸಿ ನಿಮ್ಮ ಐಶ್ವರ್ಯವನ್ನು ಉಪಯೋಗಿಸುವಿರೆಂದು ನಂಬುತ್ತೇನೆನ್ನುವಷ್ಟರಲ್ಲಿ ಪಾಳು ದೇವಾಲಯದಿಂದ ಪಲಾಯನಂಗೈದಿದ್ದ ದಫೇದಾರನು ಓಡಿಬಂದು:—ಎಲ್ಲಿರತಕ್ಕ ಮಹಾಸ್ವಾಮಿಗಳೆಲ್ಲರು ಮೋಸಹೋದಂತೆ ಕಾಣುತ್ತೆ. ನಾನು ಮಗಧದೇಶದ ದೊರೆಯನ್ನುವದೆಷ್ಟು ನಿಜವೊ ಇವನು ಕಾಮರೂಪೇಶನಾದ ರವಿವರ್ಮನೆಂಬುವನು ಅಷ್ಟು ನಿಜವು. ಸತ್ಯವಾಗಿಯು ಇವನು ರವಿವರ್ಮನಲ್ಲ ಮಹಾಸ್ವಾಮಿ! ನನ್ನನ್ನು ಮರಕ್ಕೆ ಕಟ್ಟಿಹಾಕಿ ನನ್ನ ಕರೆಯಲ್ಲಿದ್ದ ರಾಮವರ್ಮನಂ ಬಿಡಿಸಿಕೊಂಡು ಹೋದ ಕಳ್ಳನಿವನೆನಲು, ರವಿವರ್ಮನು:—ಮಹಾಸ್ವಾಮಿ! ನಾನೀ ತಪ್ಪಿತವನ್ನು ಮಾಡಿರುವದುಂಟು. ಅದನ್ನು ಮಹಾಸ್ವಾಮಿಯವರು ಮನ್ನಿಸಬೇಕು. ನಾನು ಬಿಡಿಸಿದವನು ಪುನಃ ಸೆರೆಯಲ್ಲಿರಲು ಸಿದ್ಧವಾಗಿದಾನೆಂದು ಮರೆಯಲ್ಲಿದ್ದ ರಾಮವರ್ಮನಂ ಮುಂದಕ್ಕೆ ಕರೆದನು.

ಕಮಲಿನಿಯು ಪದ್ಮಿನಿಯಂ ಕುರಿತು:—ಎಲೈ ಸಖಿಯೆ! ಈಗ ಬಂದವರ್‍ಯಾರು ನೋಡಿದೆಯಾ? ಪ್ರಭುಗಳು ಈಗಿವನನ್ನೇನುಮಾಡುತ್ತಾರೊ ಕಾಣೆನಲ್ಲ? ಆದರೆ ಅವರಿಗೆ ಕೋಪಬಂದಿರುವಂತೆ ಕಾಣಿಸುತ್ತಿರುವದಿಲ್ಲವೆಂದು ಕೈಗಳನ್ನು ಹಿಸುಕಿಕೊಳ್ಳುತ್ತಿದ್ದಳು.

ರಾಯನು:—ಎಲೈ ಉತ್ಕಲೇಶನೆ! ನಿಲ್ಲುನಿಲ್ಲು, ನಾನು ಮಾತನಾಡುವದಕ್ಕೆ ಮುಂಚೆ ನೀನು ಮಾತನಾಡಬೇಡ. ನಾನು ಅಪರಾಧವಂ ಮಾಡಿದವನಲ್ಲವೆಂದು ನೀನು ವಿಜ್ಞಾಪಿಸಿಕೊಳ್ಳುವದಕ್ಕೆ ಮುಂಚೆಯೆ, ನಿನ್ನಲ್ಲೇನು ಅಪರಾಧವಿಲ್ಲವೆಂದು ನಾನು ಒಪ್ಪಿಕೊಳ್ಳುವೆನು. ನೀನು ರಾಜಕೋಶಾಪಹಾರವಂ ಮಾಡಿದನೆಂಬುವದು ಶುದ್ಧಸುಳ್ಳು. ನನ್ನ ಅಕೃತ್ಯಗಳಿಗೆ ಸಹಕಾರಿಗಳಾದವರಲ್ಲಿ ಯಾರೋ ನಿನ್ನಲ್ಲೀ ಅಪರಾಧವಂ ಆರೋಪಿಸಿರುವರು. ಆದರೆ ಕೈರವೆಮಾತ್ರ ಏನಾದಳು ಹೇಳೆನಲು:—ರಾಮವರ್ಮನು ಮಹಾಸ್ವಾಮಿ! ಅವಳು ನೆನ್ನೆದಿವಸ ಪಾಟಲೀಪುರದಲ್ಲಿ ಆಶ್ರಮವಂ ತೆಗೆದುಕೊಂಡಳು. ಅವಳ ಮಾನಸಂರಕ್ಷಣೆಗಾಗಿ ಅವಳನ್ನಲ್ಲಿ ಬಿಟ್ಟು ನಾನು ಬಂದಿದ್ದೆನು. ಇನ್ನವಳ ಮಾನಾಪಹಾರವಂ ಯಾರೂ ಮಾಡಲಾರರು. ನನಗೆ ಮಹಾಸ್ವಾಮಿಯವರು ಇದಕ್ಕಾಗಿ ಯಾವ ದಂಡನೆಯಂ ವಿಧಿಸಿದರೂ ಸಿದ್ಧವಾಗಿದೇನೆನಲು, ರಾಯನು:—ಇದನ್ನು ಸಹ ಕೊಂಚಮಟ್ಟಿಗೆ ಕೇಳಿದ್ದೆನು. ಈಗಿದು ಪರಿಷ್ಕಾರವಾಯಿತು. ನಿನ್ನಲ್ಲೇನು ದೋಷವಿರುವದಿಲ್ಲ. ಇಂದಿನಾರಭ್ಯ ನಿನ್ನ ಮೊದಲಿನ ಅಧಿಕಾರವನ್ನೂ ಮರ್ಯಾದೆಗಳನ್ನೂ ಕೊಟ್ಟಿರುವೆನು. ಆದರೆ ಇದಕ್ಕಿಂತಲು ಅತಿಶಯವಾದ ಮತ್ತೊಂದು ವಿಷಯವಾಗಬೇಕಾಗಿರುವದು. ನೀನು ವಿಶ್ವಾಸಿಸುತ್ತಿದ್ದವಳೆಲ್ಲಿ? ಅವಳ ವಿಶ್ವಾಸವು ನಿನಗೆ ಪುನಃ ಲಭಿಸತಕ್ಕದ್ದು ಅತಿಶಯವಾದ್ದೆನಲು; ರಾಮವರ್ಮನು:—ಮಹಾಸ್ವಾಮಿ! ನನ್ನ ಯಾವಜ್ಜೀವವು ಆಕೆಯನ್ನು ಮೆಚ್ಚಿಸಿ ನಡೆಯಬೇಕೆಂಬುವದು ನನ್ನ ಮನೋಭಿಪ್ರಾಯವು. ಆದರೆ ನಾನು ಆಕೆಯನ್ನು ಕಡೇಸಲ ಕಂಡಾಗ ಮಾತ್ರ ನನ್ನಲ್ಲಿ ಆಕೆ ಕೋಪಗೊಂಡಳು. ಈಸಲವಾದರೂ ನನ್ನಲ್ಲಿ ಕೃಪೆಯನ್ನಿಡುವಳೊ ಇಲ್ಲವೊ ಎಂದು ಕಮಲಿನಿಯಕಡೆ ತಿರುಗಲು ಅವಳು:—ಸ್ವಾಮಿ! ಇದೇನು ನನ್ನ ವಿಷಯವಾಗಿ ಮಾತನಾಡುತ್ತಿರುವಂತಿದೆ? ಎಂದು ಕೊಂಚ ಮುಂದಕ್ಕೆ ಬರಲು, ರವಿವರ್ಮನು ಪದ್ಮಿನಿಯಂ ಕುರಿತು:—ಎಲೈ ಮನೋಹರಳೆ! ನೀನವಳ ಸ್ವಭಾವವನ್ನು ನೋಡುತ್ತಿರುವಳಾಗು. ಆಕೆಯ ನಾಲಿಗೆಯಲ್ಲಿ ತಿರಸ್ಕಾರವೂ, ಆನಂದಬಾಷ್ಪಗಳಿಂದ ಕೂಡಿದ ನೇತ್ರಕಮಲಗಳಲ್ಲಿ ಒಪ್ಪಿಗೆಯು ನಾನು ಮುಂದು ತಾನು ಮುಂದೆಂದು ಹ್ಯಾಗೆ ಹೋರಾಡುತ್ತಿರುವವೆನ್ನುವಷ್ಟರಲ್ಲಿ; ಕಮಲಿನಿಯು ರಾಮವರ್ಮನಂ ಕುರಿತು:—

ಸ್ವಾಮಿ! ನಿಮ್ಮ ಸಂಗಡ ನಾನು ಏನು ಹೇಳಬೇಕೊ ಕಾಣೆನಲ್ಲ! ಆದರೆ ನೀವು ಕೈರವಿಯನ್ನಾತಕ್ಕೆ ಒಡಿಸಿಕೊಂಡು ಹೋಗಿ ಅವಳಲ್ಲಿ ಬೇಜಾರುಪಟ್ಟನಂತರ ಅವಳನ್ನು ಸನ್ಯಾಸಿಯನ್ನು ಮಾಡಿ ಕೂರಿಸಿರುವಿರೆನಲದಕ್ಕವನು:—ಎಲೈ ನಾರೀಮಣಿಯೆ ನೀನಿದನ್ನು ಹಾಸ್ಯಕ್ಕಾಗಿ ಕೇಳುವಂತೆ ಕಾಣುತ್ತೆ. ಹಾಗಲ್ಲದೆ ಮನಃಪೂರ್ವಕವಾಗಿ ಕೇಳಿದವಳಾದರೆ ಇದಕ್ಕೆ ಉತ್ತರವಂ ಸುಬಾಹುವು ಹೇಳುತ್ತಾನೆನಲು, ಸುಬಾಹುವು:—

ಎಲೈ ಪೂಜ್ಯಳೆ ಹೌದು. ಇದಕ್ಕೆ ನಾನು ಉತ್ತರವಂ ಕೊಡಬೇಕಾಗಿದೆ. ನಾನು ಕಾಶಿಪಟ್ಟಣಕ್ಕೆ ಹೋಗಬೇಕೆಂದು ನಿಷ್ಕರ್ಷೆಯಾದಾಗ ನನ್ನ ಮಗಳನ್ನಿವರ ವಶದಲ್ಲಿ ಬಿಟ್ಟು ಹೋದೆನು. ಅವಳ ಮಾನವನ್ನಿವರು ಸಂರಕ್ಷಿಸಿ ಈಗವಳಂ ಕೃತಾರ್ಥಳನ್ನಾಗಿ ಮಾಡಿದರೆಂದನು. ರಾಯನು ಕಮಲಿನಿಯಂ ಕುರಿತು:—ಇನ್ನು ಮೇಲಾದರು ನೀನು ನಿನ್ನ ಮೂರ್ಖತನವನ್ನು ಬಿಟ್ಟು ರಾಮವರ್ಮನಂ ಪೇಚಾಡಿಸದೆ ಅವನು ಹೇಳುವಂತೆ ಕೇಳುವಳಾಗು. ಆತನು ಎಷ್ಟು ವರುಷಗಳಿಂದ ನಿನ್ನನ್ನು ಆಶ್ರಯಿಸಿಕೊಂಡಿದ್ದಾನೆ, ನೀನೇ ಆಲೋಚಿಸುವಳಾಗು. ಇದನ್ನು ನೋಡುತ್ತಿರುವ ನಮಗೆಲ್ಲ ಬೇಜಾರಾಗುತ್ತಿದೆ ಎನಲವಳು:—ಮಹಾಸ್ವಾಮಿ! ಅವರ ಆಶ್ರಯದ ಹೊರೆಯನ್ನು ಹೊತ್ತಿರುವ ನನಗಿಂತಲು ಆಶ್ರಯವನ್ನು ನೋಡುತ್ತಿರುವ ತಮಗೆ ಹೆಚ್ಚಾದ ಬೇಸರವಾಗುತ್ತಿರುವದಾದರೆ ಇನ್ನು ತಮ್ಮ ಮತ್ತು ನನ್ನ ಕ್ಷೇಮಕ್ಕಾದರೂ "ಆಗಬಹುದೆಂದು" ಹೇಳಲು ನಾನು ಬದ್ಧಳಾಗಿರುತ್ತೇನೆ. ಗಣಪತಿಯ ವಿವಾಹದಂತೆ ನಮ್ಮ ಪರಸ್ಪರ ಅನುಸರಣೆಯು ತೀರದೆ ನಮ್ಮ ವಿವಾಹವು ಬಹುದಿವಸದಿಂದ ತೆಳ್ಳ ಬಂತು. ಇದರಿಂದ ನೋಡುವವರಿಗೆ ಬೇಸರಕ್ಕೆ ಕಾರಣವಾಯಿತೆಂದಳು.

ರಾಮವರ್ಮನು:—ನಿನ್ನ ಸ್ವಭಾವಾನುವರ್ತಿಯಾಗಿ ನಿನ್ನ ಸಮಯವನ್ನು ಎಷ್ಟು ದಿವಸವಾದರು ಕಾದುಕೊಂಡಿರಲು ಸಿದ್ಧವಾಗಿದೇನೆನಲವಳು:—ಎಲೈ ಪ್ರಿಯಪ್ರಾಣೇಶನೆ! ಹಾಗಾದರೆ ಈಗಲೇ ಸಮಯವಾಗಿರುವದೆನ್ನುವದು ಸಹ ನನ್ನ ಸ್ವಭಾವವು. ಇನ್ನು ಸಾವಕಾಶಮಾಡತಕ್ಕವಳಲ್ಲವೆಂದು ಮುಖವಂ ಬಾಗಿಸಿಕೊಂಡು ಪದ್ಮಿನಿಯ ಹಿಂದೆ ಮರೆಯಾಗಿ ನಿಂತಳು. ರಾಯನು ಈ ವಿವಾಹದ್ವಯವನ್ನು ಅತ್ಯಂತ ವಿಜೃಂಭಣೆಯಿಂದ ನಮ್ಮರಮನೆಯಲ್ಲಿ ನಾಳೆದಿವಸ ಮಾಡಬೇಕೆಂದು ಸಭೆಯಿಂದೆದ್ದು ಅಂತಃಪುರಾಭಿಮುಖನಾದನು.

ಸಮಾಪ್ತಿಃ.